
# ನಿಮ್ಮ ಇಂಜಿನ್ ಪ್ರಾರಂಭಿಸಿರಿ



## ಶಿಕ್ಷಕರ ಪುಸ್ತಕ

# ನಿಮ್ಮ ಇಂಜಿನ್ ಪ್ರಾರಂಭಿಸಿರಿ

**ನೀವು ಆತ್ಮೀಕ ಹೋರಾಟಕ್ಕೆ ಸಿದ್ಧರಾಗಿದ್ದೀರೋ?**

**1 ಕೊರಿಂಥ 9:24**




"ಮಕ್ಕಳೇ ಪ್ರಮುಖರಿಂದ" ರಜಾದಿನದ ಸತ್ಯವೇದ ತರಭೇತಿ ಶಾಲೆ

ಎಲ್ಲಾ ವಯೋಮಾನದವರಿಗೆ ಶಿಕ್ಷಕರ ಪುಸ್ತಕ

ವೆಬ್: www.ChildrenAreImportant.com/engines/

## "ಮಕ್ಕಳೇ ಪ್ರಮುಖರು" ಇಡೀ ತಂಡಕ್ಕೆ ಧನ್ಯವಾದಗಳು!

ಸಂಪಾದಕರು: ಕ್ರಿಸ್ಟಿನಾ ಕ್ರಾಸ್

ಕ್ರಿಯಾತ್ಮಕ ತಂಡ: ಅಬ್ರಿಲ್ ಪಾಲಶಿಯಸ್ ಕಮಾಚೋ, ಅರೇಲಿ ಜುರಿಯಲ್ ಸಲಿನಾಜ್ ಸಾನ್ಚೆಸ್, ಡ್ವಿಲೈಟ್ ಕ್ರಾಸ್, ಜೆನ್ನಿಫರ್ ಸಾನ್ಚೆಸ್ ನೀಟೋ, ಜೂಲಿಯೋ ಸಾನ್ಚೆಸ್ ನೀಟೋ, ಮೈಕ್ ಕಂಗಾಸ್, ಮಾನ್ಸೆರೆಟ್ ಡೂರನ್ ಡಯಾಜ್, ಸುಕಿ ಕಂಗಾಸ್, ವೆರೋನಿಕ ತೋಜ್ ಮತ್ತು ವಿಕ್ಕಿ ಕಂಗಾಸ್.

ಈ ಕಾರ್ಯಕ್ರಮಕ್ಕೆ ಅದ್ಭುತವಾದ ಸಂಗೀತವನ್ನು ಕೊಟ್ಟಿರುವ ರೂಬೆನ್ ಡಾರಿಯೊರವರಿಗೆ ಕೃತಜ್ಞತೆಗಳು.

ಭಾಷಾಂತರ ತಂಡ: ಆಲಿನೆವೆರಾ, ಅನುಪಮ ವಾಂಖೆಡೆ, ಆನ್ವನ್ ಕ್ಲಿಮಿಕ್, ಅರಾಜ್ ಮಮ್ಮದಜದೆಹ್, ಅರೋಮ ಪಬ್ಲಿಕೇಷನ್ಸ್ ಅಂಡ್ ಮೀಡಿಯಾ, ಆರ್ಟುರೋ ಜೂ ಬೊರನ್, ಬ್ಲೆಸ್ಸಿ ಜೇಕಬ್, ಕಾರ್ಮೆಲಾ ಡಾನ್ ಫ್ಲೋರ್ಸ್, ಕ್ರಿಸ್ಬೆಸ್ನಹಾನ್,

ಡೇವಿಡ್ ರಾಜು, ಎಫ್ರಾಯಿಮ್ ನುಗುಣ ಮೈರೋಬಿ, ಫಿನ್ನಿ ಜೇಕಬ್, ಗೀನವ್, ಹಮೀದ್ ರೀಜಾ ಅಜಿಮಿ (ಹಮಿದ್.ಅಜಿಮಿಲ್1364atgm#ail com), ಹಿಯಾಡ್ರೆ, ಐ-ಕ್ಲೆವೆರ್.ಕಾಮ್, ಇಕ್ಬಾಲ್ ಮ್ಯಾನ್, ಜೇಕಬ್ ಕುರುವಿಲ್ಲಾ, ಕಾಮಿಲ್ ತುರುಕ್, ಕರುನ್ ಗುರು ಮ್ವಾಂಗಿ, ಕಿರನ್, ಮೈತ್ರೆಯಿ ಮೊಂಡಲ್, ಮಾರ್ಕೊ ಚೂ, ಮಾರ್ಕೊಸ್ ರೋಚ, ಮ್ಯಾಥೀವ್ ದಾಸ್, ಮಿತೇಶ್ ಮಂಡಾಲಿಯಾ, ಮ್ರಾಮ್ ಲಾಮು, ಶ್ರೀಮತಿ. ಗೀತ ಶ್ರೀ ನವನೀತ ಕೃಷ್ಣನ್, ನಾಸ್ಸಿಮ್ ಬೌತಿಯಾ, ನಿಕ್ ಬೆಂಕ್, ಪೌಲ್ ಮ್ವಾಂಗಿ, ಪೌಲ್ ಸೆಪ್ತನ್, ರಾನಾ922, ರುಬೀನಾ ರಾಯ್, ಸಫ್ದಾರ್ ಖಾನ್, ಶಾರೋಷನ್15, ಟಾಲೆನ್ಟೋ-ಉನಿಡೋ, ಉರಿಟಾಮ್, ವರ್ಡಿಯಾ ಜೀಲಿಯನ್ ಶಾ ಕಾನ್ಸೆರಿಕಾ, ಯೂ ಜಂಗ್ ಚೆನ್, ಜೀನಾ ಮೈರೆಲ್ಲಾ ಬಾರ್ಜಾಗ ಅರೆನ್ಸಿಬಿಯಾ




# ನಿಮ್ಮ ಇಂಜಿನ್ ಪ್ರಾರಂಭಿಸರಿ

# ವಿಬಿಎಸ್ ಗೆ ಸ್ವಾಗತ!

ಸತ್ಯವೇದದ ಪ್ರಕಾರ, ಯೇಸು ಕ್ರಿಸ್ತನೊಂದಿಗಿನ ನಮ್ಮ ಜೀವಿತ ಕೇವಲ ನಿಷ್ಕ್ರಿಯವಾದ ಕಾರ್ಯವಲ್ಲ; ಅದೊಂದು ಓಟವಾಗಿದೆ! ನಾವು ಮತ್ತು ಮಕ್ಕಳು ಗೆಲ್ಲಲು ಪ್ರಯತ್ನಿಸಬೇಕು ಹಾಗೂ ಈ ಓಟದಲ್ಲಿ ಗೆದ್ದವರಿಗೆ, ಕಳೆದುಹೋಗುವಂಥ ಅಥವಾ ತಾತ್ಕಾಲಿಕವಾದಂಥ ಬಹುಮಾನವಲ್ಲ ಬದಲಾಗಿ ನಿತ್ಯವಾದ ಬಹುಮಾನ ದೊರೆಯುತ್ತದೆ:

"ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ. ಅದರಲ್ಲಿ ಹೋರಾಡುವವರೆಲ್ಲರು ಎಲ್ಲ ವಿಷಯಗಳಲ್ಲಿ ಮಿತವಾಗಿರುತ್ತಾರೆ. ಅವರು ಬಾಡಿಹೋಗುವ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆಮಾಡುತ್ತಾರೆ; ನಾವಾದರೋ ಬಾಡಿ ಹೋಗದ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆಮಾಡುವವರಾಗಿದ್ದೇವೆ." **1 ಕೊರಿಂಥ 9:24-25**

ನಾವು ನಮಗಿರುವ ಎಲ್ಲವುಗಳ ಮೂಲಕ ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ಒಂದುವೇಳೆ ಮುಂದಕ್ಕೆ ಸಾಗುವದಾದರೆ ನಮಗೆ ನಿತ್ಯವಾದ ಜಯಮಾಲಿಕೆಯು ದೊರೆಯುತ್ತದೆ! ಉತ್ತೇಜನ ಮತ್ತು ಕ್ರಿಯಾತ್ಮಕತೆಯುಳ್ಳ ಈ ವಿಬಿಎಸ್ ನಲ್ಲಿ, ಮೋಟರ್ ಸೈಕಲ್ ಓಟವನ್ನು ಯೇಸು ಕ್ರಿಸ್ತನೊಂದಿಗಿನ ನಮ್ಮ ಜೀವಿತಕ್ಕೆ ದೃಷ್ಟಾಂತವಾಗಿ ನೋಡಿಕೊಳ್ಳೋಣ.

ಮೋಟರ್ ಮೂಲಕ ಚಾಲನೆಗೊಳ್ಳುವ ಪ್ರತಿಯೊಂದು ವಾಹನದ ಹಾಗೆ, ಮೋಟರ್ ಸೈಕಲ್ ಉತ್ತಮವಾದ ಸ್ಥಿತಿಯಲ್ಲಿದ್ದರೆ ಮಾತ್ರವೇ ಓಟದ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಇಂಜಿನ್ ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಅದರಲ್ಲಿ ಆಯಿಲ್ ಇರಬೇಕು, ಇಲ್ಲವಾದರೆ ಅದು ಹಾಳಾಗುತ್ತದೆ! ಇದೇ ಪ್ರಕಾರ, ಯೇಸು ಕ್ರಿಸ್ತನ ಹಿಂಬಾಲಕರಾಗಿ, ಪ್ರತಿಬಾರಿ ನಮ್ಮಿಂದ ಏನಾದರೂ ತಪ್ಪಾಗುವಾಗ ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ಅವುಗಳಿಗಾಗಿ ಪಶ್ಚಾತ್ತಾಪಪಡುವ ಮನಸ್ಥಿತಿಯನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕು. ಬೈಕ್ ಗೆ ಉತ್ತಮ ಗುಣಮಟ್ಟದ ಟೈರ್ ಇದ್ದಾಗ ಮಾತ್ರವೇ ಅದು ಟ್ರಾಕ್ ನಲ್ಲಿ ಅತಿವೇಗವಾಗಿ ಚಲಿಸಲು ಸಾಧ್ಯವಾಗುತ್ತದೆ. ಇದೇ ಪ್ರಕಾರ ನಮ್ಮ ಜೀವಿತದಲ್ಲಿ ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾ ನಾವು ವಿಧೇಯತೆಯನ್ನು ಅಭ್ಯಾಸ ಮಾಡುವಾಗ ಮಾತ್ರವೇ ವೇಗವಾಗಿ ಚಲಿಸಲು ನಮಗೆ ಸಾಧ್ಯವಾಗುತ್ತದೆ. ಇಂಜಿನ್ ತಣ್ಣಗಿರಲು ಆಂಟಿ ಫ್ರೀಜರ್ ಅವಶ್ಯವಾಗಿರುವ ಹಾಗೆ, ಕ್ರಿಸ್ತನಲ್ಲಿ ನಮ್ಮ ಸಹೋದರರಾಗಿರುವವರೊಂದಿಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಮತ್ತು ಜಗಳಗಳು ಇರಬಾರದೆಂದರೆ, ನಮ್ಮ ಜೀವಿತದಲ್ಲಿ ಇತರರೊಂದಿಗ ನಾವ ಕ್ರಿಸ್ತನ ಪ್ರೀತಿಯನ್ನು ಅಭ್ಯಾಸ ಮಾಡುವವರಾಗಿರಬೇಕು. ಮತ್ತು ಅಂತಿಮವಾಗಿ, ಪ್ರಮುಖವಾದ ಮೋಟರ್ ಸೈಕಲ್ ಸ್ಪರ್ಧೆಯಲ್ಲಿ, ವಾಹನವನ್ನು ಒಂದು ಕಡೆ ನಿಲ್ಲಿಸಬೇಕಾಗುತ್ತದೆ, ಅಲ್ಲಿ ಜನರ ತಂಡವೊಂದು ಬೈಕ್ ನೋಡಿಕೊಳ್ಳಲು ಮತ್ತು ಸ್ಪರ್ಧೆಯ ಸಮಯದಲ್ಲಿ ಯಾವುದೇ ತೊಂದರೆಗಳು ಬಾರದಂತೆ ನೋಡಿಕೊಳ್ಳಲು ಒಟ್ಟಾಗಿ ಕಾರ್ಯಮಾಡುತ್ತದೆ. ಆ ತಂಡದ ಮುಖ್ಯಸ್ಥನು ವಾಹನಗಳ ಮೆಕಾನಿಕ್ ಗಳನ್ನು ಪರೀಕ್ಷಿಸುವದು ಮಾತ್ರವಲ್ಲದೆ ಸ್ಪರ್ಧೆಯನ್ನು ಗಮನಿಸುತ್ತಾನೆ ಮತ್ತು ಅಡೆತಡೆಗಳೇನಾದರೂ ಎದುರಾಗುತ್ತವೆಯೇ ಎಂದು ಚಾಲಕನಿಗೆ ಮಾರ್ಗದರ್ಶನವನ್ನು ಕೊಡುತ್ತಿರುತ್ತಾನೆ. ಓಟದ ಸ್ಪರ್ಧೆಯ ಮುಖ್ಯಸ್ಥನ ಹಾಗೆ, ಯೇಸು ಕ್ರಿಸ್ತನು ಈ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳುತ್ತಾನೆ ಮತ್ತು ನಮ್ಮ ತಂಡದ ನಾಯಕನಾಗಿ ನಮಗೆ ಮಾರ್ಗದರ್ಶನ ಕೊಡುತ್ತಾನೆ.

ನೀವು ಮತ್ತು ನಿಮ್ಮ ವಿಬಿಎಸ್ ತಂಡದವರು ಈ ಕಾರ್ಯಕ್ರಮವನ್ನು "ಗ್ಯಾರೆಜ್ ಕ್ರಾಫ್ಟ್ಸ್" ಎಂಬ ಸ್ಟೇಷನ್ ಇಂದ ಆಲೋಚನೆಗಳನ್ನು ಪಡೆದು, "ರೆಡಿ, ಸೆಟ್, ಗೇಮ್ಸ್!" ಎಂಬ ಆಟದ ಸ್ಟೇಷನ್ ನಿಂದ ಅಲೋಚನೆ ಪಡೆದು, ಸ್ನಾಕ್ ಸ್ಟಾಂಡ್ ನಿಂದ ತಿಂಡಿಗಳನ್ನು ಮಾಡುವ ಬಗ್ಗೆ ಆಲೋಚನೆ ಪಡೆದು ಮತ್ತು ಡ್ರೈವಿಂಗ್ ತರಗತಿಯಲ್ಲಿ ಆಟದ ಚಟುವಟಿಕೆಗಳು ಹಾಗೂ ಒಗಟುಗಳೊಂದಿಗೆ ಮಕ್ಕಳ ಪುಸ್ತಕದಿಂದ ಆಲೋಚನೆ ಪಡೆದು ಪ್ರಾರಂಭಿಸಬಹುದು. ನಾಟಕದಲ್ಲಿ ಬರುವ ಮೆಕಾನಿಕ್ ಪಾತ್ರಧಾರಿಯನ್ನು ಸಂಧಿಸಿರಿ. ತಮಾಷೆಯ ಪಾಠಗಳನ್ನು ಹೇಳಿಕೊಡಿರಿ ಅವು ಸತ್ಯವೇದದ ಕಥೆಗಳಾಗಿದ್ದು ಸ್ಪರ್ಧೆಯ ದೃಷ್ಟಾಂತದಿಂದ ಕೂಡಿರಬೇಕು ಮತ್ತು ಮಕ್ಕಳಿಗೆ ಆಸಕ್ತಿ ಉಂಟಾಗುವ ಸಲುವಾಗಿ ಕೆಲವು ಸಾಂಕೇತಿಕ ಭಾಷೆಗಳನ್ನು ಕಲತುಕೊಳ್ಳಿರಿ. ಪ್ರತಿದಿನ ಆಸಕ್ತಿಯನ್ನು ಹೆಚ್ಚಿಸಲು ಗಮನ ಸೆಳೆಯುವ ಹೊಸ ಸಂಗತಿಗಳನ್ನು ಮಾಡಿರಿ ಮತ್ತು ಹಾಡುಗಳನ್ನು ಕಲಿಸುವಾಗ ಆಕ್ಷನ್ ಇರಲೇಬೇಕು! ಈ ವಿಬಿಎಸ್ ಸುವಾರ್ತಿಕರಣಕ್ಕೆ ಹೆಚ್ಚು ಸಹಕರಿಸುತ್ತದೆ,







ಆದ್ದರಂದ ಸಾಧ್ಯವಾದಷ್ಟು ಮಕ್ಕಳನ್ನು ನಿಮ್ಮ ವಿಬಿಎಸ್ ಗೆ ಆಹ್ವಾನಿಸಿರಿ. ಪಾಠ 5 ರಲ್ಲಿರುವ ಸತ್ಯವೇದ  ಕಥಯು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಸತ್ತದ್ದು ಮತ್ತು ರಕ್ಷಣೆಯ ಬಗ್ಗೆ ಮಾತನಾಡುತ್ತದೆ. ಯೇಸು ಕ್ರಿಸ್ತನನ್ನು ತಮ್ಮ ಕರ್ತನನ್ನಾಗಿ ಮತ್ತು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ಮಕ್ಕಳನ್ನು ಆಹ್ವಾನಿಸುವದಕ್ಕೆ ಮರೆಯಬೇಡಿರಿ!

“ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ.”
ಇಬ್ರಿಯ 12:1



ಯೇಸು ಕ್ರಿಸ್ತನನ್ನು ನಿಮ್ಮ ತಂಡದ ನಾಯಕನನ್ನಾಗಿಸಿ ದೀನತೆಯಿಂದ, ವಿಧೇಯತೆಯಿಂದ ಮತ್ತು ಪ್ರೀತಿಯಿಂದ ಆತನನ್ನು ಹಿಂಬಾಲಿಸಲು ಮಕ್ಕಳಿಗೆ ಕಲಿಸಿಕೊಡುವ ನಿಮ್ಮನ್ನು ದೇವರು ಹೇರಳವಾಗಿ ಆಶೀರ್ವದಿಸಲಿ. ಹೆಚ್ಚಿನ ಮಕ್ಕಳು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕಕನ್ನಾಗಿ ಅಂಗೀಕರಿಸಿಕೊಳ್ಳಲಿ ಮತ್ತು ಇಡೀ ಸಭೆಯ ಆಶೀರ್ವಾದ ನಿಧಿಗಳಾಗಿರಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಜೂಮ್ ಜೂಮ್!

ಮಕ್ಕಳೇ ಪ್ರಮುಖರು ಕ್ರಿಯಾತ್ಮಕ ತಂಡದಿಂದ ಅನೇಕ ಆಶೀರ್ವಾದಗಳು!







# ಈ ವಿಬಿಎಸ್ ಅನ್ನು ನಡೆಸುವದು ಹೇಗೆ

## ವಿಶೇಷವಾಗಿ ನಿರ್ದೇಶಕರಿಗೆ

ಕಾರ್ಯಕ್ರಮದ ನಿರ್ದೇಶಕನಾಗಿ, ನಿಮಗೆ ಹೇಳುವದೇನೆಂದರೆ ನೀವು ನಾಯಕನಾಗಿಯಾಗಲಿ ಅಥವಾ ಯಾವುದೇ ತಂಡ ಅಥವಾ ತರಗತಿಗೆ ಟೀಚರ್ ಆಗಬೇಡಿರಿ, ಬದಲಾಗಿ ಆಯಾ ಕೆಲಸಗಳಿಗೆ ಜನರನ್ನು ನೇಮಕ ಮಾಡಿರಿ. ಕಳೆದುಹೋಗುವ ಸಂಪನ್ಮೂಲಗಳಲ್ಲಿ ಏನಾದರೂ ತೊಂದರೆಗಳಾಗುವಾಗ, ಮಗುವಿಗೆ ಅಪಘಾತವಾದರೆ, ಟೀಚರ್ ಬರಲಿಲ್ಲವೆಂದರೆ ಅಥವಾ ಹಿರಿಯ ಸಭಾಪಾಲಕನೊಂದಿಗೆ ಮಾತನಾಡುವ ಪರಿಸ್ಥಿತಿ ಬಂದರೆ, ನಿರ್ದೇಶಕರಾಗಿ ನೀವು ಈ ಕಾರ್ಯಗಳನ್ನು ಮಾಡಬೇಕು. ಒಂದುವೇಳೆ ನೀವೇನಾದರೂ ಮುಖ್ಯ ಸಂದೇಶವನ್ನು ಬೋಧಿಸುತ್ತಿರುವದಾದರೆ ಅಥವಾ ತಿಂಡಿ ಸಿದ್ಧಮಾಡುತ್ತಿರುವದಾದರೆ, ನಿಮ್ಮ ಕೆಲಸವನ್ನು ಮಾಡಬೇಕಾದ ರೀತಿಯಲ್ಲಿ ಮಾಡಲು ನಿಮ್ಮಿಂದ ಆಗುವದಿಲ್ಲ. ಅಟದ ಎಲ್ಲಾ ಕೆಲಸಗಳನ್ನು ನಿಮ್ಮ ಸಭೆಯ ಸಹೋದರರಿಗೆ ಒಪ್ಪಿಸಿರಿ.

## ಸ್ವಯಂ ಸೇವಕರು

ಸಂಡೇ ಸ್ಕೂಲ್ ಗಿಂತ ವಿಬಿಎಸ್ ಸಮಯದಲ್ಲಿ ನಿಮಗೆ ಸಹಾಯ ಮಾಡಲು ಜನರು ಸುಲಭವಾಗಿ ಸಿಗುತ್ತಾರೆ ಯಾಕಂದರೆ ವಿಬಿಎಸ್ ಒಂದು ವಾರ ಮಾತ್ರ ಇರುತ್ತದೆ. ಸಾಧ್ಯವಾದಷ್ಟು ಸ್ವಯಂ ಸೇವಕರನ್ನು ಸೇರಿಸಿಕೊಳ್ಳಿರಿ ಯಾಕಂದರೆ ಹಾಗೆ ಮಾಡುವದರಿಂದ ಉಳಿದವರಿಗೆ ಪ್ರೋತ್ಸಾಹ ದೊರೆಯುತ್ತದೆ.
ಸಿಬ್ಬಂದಿಗಳು ಯಾವ ರೀತಿಯ ಕಾರ್ಯಗಳನ್ನು ಮಾಡಬೇಕು ಎಂಬದನ್ನು ಮೊದಲೇ ನಿಶ್ಚಯಿಸಿಕೊಳ್ಳಿರಿ. ನಿಶ್ಚಯಿಸಿಕೊಂಡ ನಂತರ ನಿಮಗೆ ಸಹಾಯ ಮಾಡಲು ಸೂಕ್ತರಾಗಿರುವ ಜನರ ಬಗ್ಗೆ ಆಲೋಚಿಸಿರಿ. ಮಕ್ಕಳನ್ನು ಪ್ರೀತಿಸುವ, ಸಹಿಸಿಕೊಳ್ಳುವ ಮನಸ್ಸಿರುವಂಥವರನ್ನೇ ಆರಿಸಿಕೊಳ್ಳಿರಿ.
ಮುಂದಿನ ಹಂತ ನೇರವಾಗಿ ಅವರ ಬಳಿಗೆ ಹೋಗುವದು ಮತ್ತು ವಿಬಿಎಸ್ ನಲ್ಲಿ ನಿರ್ದಿಷ್ಟವಾದ ಕಾರ್ಯಗಳನ್ನು ಮಾಡಲು ಅವರನ್ನು ಆಹ್ವಾನಿಸುವದು. ಅಕ್ಕಪಕ್ಕದಲ್ಲಿರುವ ಮನೆಯ ಮಕ್ಕಳನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುವ ದರ್ಶನವನ್ನು ಅವರೊಂದಿಗೆ ಹಂಚಿಕೊಳ್ಳಿರಿ. ಜನರನ್ನು ವೈಯಕ್ತಿಕವಾಗಿ ಅಹ್ವಾನಿಸುವಾಗ ಅವರು ಸಮಯ ಮಾಡಿಕೊಂಡು ನಿಶ್ಚಯವಾಗಿಯೂ ಭಾಗವಹಿಸುತ್ತಾರೆ.

## ಪ್ರಾರ್ಥನೆ

ಪ್ರಾರ್ಥನೆಯೊಂದಿಗೆ ನಿಮ್ಮಗೆ ರಜಾದಿನಗಳ ಸತ್ಯವೇದ ಶಾಲೆಗಾಗಿ (ವಿಬಿಎಸ್) ಯೋಜನೆಗಳನ್ನು ಹಾಕಿಕೊಳ್ಳಲು ಪ್ರಾರಂಭಿಸಿರಿ. ದೇವರ ಪ್ರಸನ್ನತೆಯಲ್ಲಿ ಸಮಯ ಕಳೆಯಿರಿ ಮತ್ತು ಕಾರ್ಯಕ್ರಮಕ್ಕೆ ಬೇಕಾದ ಮಾರ್ಗದರ್ಶನಗಳನ್ನು ಆತನಿಂದ ಪಡೆದುಕೊಳ್ಳಿರಿ. ದಿವಸಗಳು ಹತ್ತಿರವಾಗುವಾಗ ಪ್ರಾರ್ಥನೆ ಮಾಡುವಂತೆ ನಿಮ್ಮ ಸ್ನೇಹಿತರಿಗೆ ಪ್ರಾರ್ಥನಾ ಮನವಿಗಳನ್ನು ಕಳುಹಿಸಿರಿ. ನಿಮ್ಮ ತಂಡದವರನ್ನೆಲ್ಲಾ ಸೇರಿಸಿ, ನಿಮ್ಮ ಸಭಾಪಾಲಕರಂದಿಗ ಪ್ರಾರ್ಥನೆ ಮಾಡಿರಿ.

- ವಿಬಿಎಸ್ ದಿವಸಗಳಲ್ಲಿ ಪ್ರಾರ್ಥನೆ ಮಾಡಲು ಕೆಲವರನ್ನು ನೇಮಿಸಿರಿ.
- ನಿಮ್ಮ ಸಭೆಯ ಮಕ್ಕಳು ದೇವರ ಬಗ್ಗೆ ಕಲಿಯಲು ವಿಬಿಎಸ್ ನಲ್ಲಿ ಉತ್ತಮ ಅವಕಾಶ ದೊರೆಯುತ್ತದೆ, ಅಲ್ಲದೆ ಇದು ಉತ್ತಮವಾದ ಸುವಾರ್ತೀಕರಣ ಸಾಧನವಾಗಿದೆ. ಈ ಕಾರ್ಯಕ್ಕಾಗಿ ಪ್ರಾರ್ಥನೆ ಮಾಡುವದನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬೇಡಿರಿ.

"ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವುಳ್ಳದ್ದಾಗಿದೆ." **(ಯಾಕೋಬ 5:16)**

## ತರಭೇತಿ

ವಿಬಿಎಸ್ ನಲ್ಲಿ ಭಾಗವಹಿಸುವ ಎಲ್ಲರಿಗೆ ತರಬೇತಿಯನ್ನು ಕೊಡಲು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿರಿ. ಆ ದಿನದಲ್ಲಿ ಕಾರ್ಯಕ್ರಮವನ್ನು ಯಾವ ರೀತಿ ನಡೆಸಬೇಕು ಎಂಬದನ್ನು ವಿವರಿಸಲು ಮತ್ತು ಜನರಿಗೆ ಜವಾಬ್ದಾರಿಕೆಗಳನ್ನು ಒಪ್ಪಿಸಲು ನಿಮಗೆ ಸಾಧ್ಯವಾಗುತ್ತದೆ.







## ದಿನಾಂಕ ಮತ್ತು ಸ್ಥಳವನ್ನು ಆಯ್ಕೆ ಮಾಡುವದು

ಸಭೆಯ ಕ್ಯಾಲೆಂಡರ್ ಪ್ರಕಾರ ಸೂಕ್ತವಾದ ದಿನಾಂಕವನ್ನು ಆಯ್ಕೆ ಮಾಡಿಕೊಳ್ಳಿರಿ. ಒಮ್ಮೆ ನಿಮ್ಮ ಸಭಾಪಾಲಕರ ಸಮ್ಮತಿಯನ್ನು ಪಡೆದ ನಂತರ, ವಿಬಿಎಸ್ ಕಾರ್ಯಕ್ರಮಕ್ಕೆ ಅಡ್ಡಿಯಾಗುವಂಥ ಬೇರೆ ಯಾವುದಾದರೂ ಕಾರ್ಯಗಳು ಅಥವಾ ಚಟುವಟಿಕೆಗಳು ಎದುರಾಗುತ್ತವೆಯೇ ಎಂಬದನ್ನು ಪರೀಕ್ಷಿಸಿಕೊಳ್ಳಿರಿ. ನೀವು ವಿಬಿಎಸ್ ಕಾರ್ಯಕ್ರಮವನ್ನು ನಿಮ್ಮ ಸಭೆಯೊಳಗೇ ನಡೆಸಬೇಕೆಂಬ ಯಾವ ಕಟ್ಟಳೆಯೂ ಇಲ್ಲ. ನಿಮ್ಮ ಸಭೆಯ ಪಕ್ಕದಲ್ಲಿ ಉದ್ಯಾನವನವಿದ್ದರೆ ಅಲ್ಲಿ ಅಥವಾ ಮಕ್ಕಳನ್ನು ಸೇರಿಸಲು ಅನುಕೂಲವಾಗುವ ಸಾರ್ವಜನಿಕ ಸ್ಥಳದಲ್ಲಿಯೂ ನಡೆಸಬಹುದು. ನೀವು ಯಾವುದೇ ಸ್ಥಳವನ್ನು ಆಯ್ಕೆಮಾಡಿದರೂ, ಆ ಸ್ಥಳವನ್ನು ಅಲಂಕರಿಸಲು ಮತ್ತು ಶುಚಿಗೊಳಿಸಲು ಸಮಯ ಬೇಕಾಗುತ್ತದೆ ಎಂಬದನ್ನು ಮರೆಯಬೇಡಿರಿ.

ಈ ಕಾರ್ಯಕ್ರಮವನ್ನು 5 ದಿವಸಗಳಿಗೆ ಬರೆಯಲಾಗಿದೆ, ಆದರೆ ನಿಮ್ಮ ಅವಶ್ಯಕತೆಗನುಸಾರ ನೀವು ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು. ಒಂದುವೇಳೆ ನಿಮಗೆ ಬೇಕಾದರೆ 1, 4 ಮತ್ತು 5 ನೇ ಪಾಠಗಳನ್ನು ಮಾತ್ರವೇ ಆರಿಸಿಕೊಂಡು 3 ದಿನಗಳ ವಿಬಿಎಸ್ ನಡೆಸಬಹುದು. ಈ ಪಠ್ಯವನ್ನು ನಿಮ್ಮ ಸೇವೆಗೆ ಸಿದ್ಧಪಡಿಸಲಾಗಿದೆಯೇ ಹೊರತು ಇದು ನೀವು ಪಾಲಿಸಲೇ ಬೇಕಾದ ನಿಯಮವಲ್ಲ.

## ಜಾಹೀರಾತು

ಕಾರ್ಯಕ್ರಮ ಪ್ರಾರಂಭವಾಗಲು 4-6 ವಾರಗಳು ಇರುವಾಗಲೇ ನೀವು ಜಾಹೀರಾತು ಪ್ರಾರಂಭಿಸಬಹುದು. ಅದನ್ನು ವೇದಿಕೆಯ ಮೇಲಿಂದಲೇ ಪ್ರಕಟಿಸಿರಿ ಮತ್ತು ಸಮುದಾಯದ ಮಕ್ಕಳನ್ನು ದೇವರ ಕಡೆಗೆ ನಡೆಸುವ ದರ್ಶನವನ್ನು ಸೂಕ್ತವಾಗಿ ವ್ಯಕ್ತಪಡಿಸಿರಿ.

- ರಜಾದಿನದ ಶಾಲೆಯು ಸುವಾರ್ತಿಕರಣಕ್ಕೆ ಸೂಕ್ತವಾಗಿರುವ ಮೊದಲನೆಯ ಹೆಜ್ಜೆಯಾಗಿದೆ, ಯಾಕಂದರ ಮಕ್ಕಳನ್ನು ಸಭೆಗೆ ಕರೆದುಕೊಂಡು ಬರಲು ಜನರಿಗೆ ಹೆದರಿಕೆಯಿರಬಹುದು, ಆದರ ರಜಾದಿನಗಳಲ್ಲಿ ಒಂದು ವಾರಗಳ ಕಾಲ ಮಕ್ಕಳನ್ನು ಕಳುಹಿಸಿಕೊಡಲು ಯಾರಿಗೂ ಯಾವುದೇ ಸಮಸ್ಯೆ ಇರುವದಿಲ್ಲ. ಇದರಿಂದ

  ಕುಟುಂಬಗಳನ್ನು ಸಂಧಿಸಲು ಅವರಿಗೆ ಅವಕಾಶ ಸಿಗುತ್ತದೆ ಮತ್ತು ಮಕ್ಕಳು ಏನನ್ನು ಕಲಿಯುತ್ತಿದ್ದಾರೆ ಎಂಬದನ್ನು ನೋಡಲು ತಂದೆತಾಯಿಗಳು ಬರಬಹುದು. ಇದರಿಂದ ವಿಶ್ವಾಸಿಗಳ ಮನಸ್ಸನಲ್ಲಿ ಯಾವ ಕುಟುಂಬಗಳು ಇವೆಯೋ ಅವರ ಬಗ್ಗೆ ಯೋಚಿಸಲು ಸಾಧ್ಯವಾಗುತ್ತದೆ.
- ಆಹ್ವಾನ ಪತ್ರಿಕೆಗಳು, ಕರಪತ್ರಗಳನ್ನು ಹಂಚುವ ಮೂಲಕ ಜಾಹೀರಾತಿನಲ್ಲಿ ಭಾಗಿಯಾಗಲು ಮಕ್ಕಳನ್ನು ಆಹ್ವಾನಿಸಿರಿ. ಜಾಹೀರಾತು ಮಾಡಲು ಬೇಕಾಗುವಷ್ಟು ಸಾಮಗ್ರಿಗಳು ನಿಮ್ಮಲ್ಲಿವೆಯೇ ಎಂದು ದೃಢಪಡಿಸಿಕೊಳ್ಳಿರಿ.

ವಿವಿಧ ಸ್ಥಳಗಳಲ್ಲಿ (ಅಂಗಡಿಗಳು, ಸಾರ್ವಜನಿಕ ಸ್ಥಳಗಳು) ಕೆಲವು ಭಿತ್ತಿ ಪತ್ರಗಳನ್ನು ಇಡಿರಿ. ವಿಬಿಎಸ್ ಗೆ ಅಧಿಕ ಅತಿಥಿಗಳನ್ನು ಯಾರು ಕರೆದುಕೊಂಡು ಬರುತ್ತಾರೋ ಅವರಿಗೆ ಬಹುಮಾನ ಕೊಡಲು ಸ್ಪರ್ಧೆಯನ್ನು ಏರ್ಪಡಿಸಿರಿ. (ಬಹುಮಾನ ಒಳ್ಳೆಯ ಊಟವಾಗಿರಬಹುದು ಅಥವಾ ಬೇರೆ ಏನಾದರೂ ಕೊಡುಗೆಯಾಗಿರಬಹುದು)..

## ನೋಂದಣಿ

ಕಾರ್ಯಕ್ರಮ ಪ್ರಾರಂಭಿಸುವ ಮೊದಲು ನೋಂದಣಿ ಮಾಡಿಸಿಕೊಳ್ಳಲು ಪ್ರೋತ್ಸಾಹಪಡಿಸಿರಿ. ಇದರಿಂದ ನಿಗದಿತ ಸಂಖ್ಯೆಯ ಭಾಗವಹಿಸುವಿಕೆದಾರರನ್ನು ಲೆಕ್ಕಿಸಲು ಸಹಾಯವಾಗುತ್ತದೆ, ಆಗ ಎಷ್ಟು ಸಾಮಗ್ರಿಗಳು ಬೇಕೋ ಅದನ್ನು ನಿರ್ಧರಿಸಬಹುದು. ಎಚ್ಚರಿಕೆಯಿಂದ ದಾಖಲೆ ಮಾಡುವಾಗ ಭವಿಷ್ಯದಲ್ಲಿ ಬೇರೆ ಏನಾದರೂ ಸುವಾರ್ತಾ ಕಾರ್ಯಗಳನ್ನು ನಡೆಸುವಾಗ ಎಷ್ಟು ಮಕ್ಕಳು ಹಾಗು ಎಷ್ಟು ಕುಟುಂಬಗಳು ಬರುತ್ತವೆ ಎಂಬದರ ಲೆಕ್ಕ ನಿಮಗೆ ಸಿಗುತ್ತದೆ.







## ಪುನರಾವರ್ತನೆಯ ಠಾಣೆಗಳು

ಈ ವಿಬಿಎಸ್ ಅನ್ನು ನಿಮ್ಮ ಇಷ್ಟದ ಪ್ರಕಾರ ನೀವು ನಡೆಸಬಹುದು, ಆದರೆ ಒಂದು ದಿನಕ್ಕೆ ಮೂರು ಠಾಣೆಗಳ ಪುನರಾವರ್ತನೆಯ ಕಾರ್ಯಕ್ರಮವಾಗಿ ಉಪಯೋಗಿಸಬಹುದು. ಇದರ ಅರ್ಥ ನೀವು ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಬೇಕು, ಮತ್ತು ಠಾಣೆಗಳೆಲ್ಲರೂ ಒಂದೇ ಪ್ರದೇಶದಲ್ಲಿದ್ದರೂ, ಮಕ್ಕಳನ್ನು ಮೂರೂ ಠಾಣೆಗಳಿಗೆ ಕಳುಹಿಸಬೇಕು. ಪ್ರತಿಯೊಂದು ಠಾಣೆಗಳು 20 ರಿಂದ 40 ನಿಮಿಷಗಳ ತನಕ ಇರುತ್ತವೆ ಮತ್ತು ಮಕ್ಕಳು ಮೂರೂ ಠಾಣೆಗಳಿಗೆ ಹೋಗಬೇಕಾಗುತ್ತದೆ. ಮಕ್ಕಳನ್ನು ಅವರ ವಯಸ್ಸಿನ ಮೇರೆಗೆ ಸುಲಭವಾಗಿ ವಿಂಗಡಿಸಬಹುದು, ಇದರಿಂದ ಮಕ್ಕಳ ಪುಸ್ತಕಗಳನ್ನು ವಿಂಗಡಿಸಲು ಸಹ ಸಹಾಯವಾಗುತ್ತದೆ:

- ಸುಲಭ (4-6 ವರ್ಷಗಳು)
- ಮಧ್ಯಮ (7-9 ವರ್ಷಗಳು)
- ಕಷ್ಟ (10-12 ವರ್ಷಗಳು)

ಒಂದುವೇಳೆ ಪ್ರೌಢ ವಯಸ್ಸಿನ ಅಂದರೆ 13+ ಮಕ್ಕಳು ವಿಬಿಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸಿದರೆ ಅವರಿಗಾಗಿ ನಾವು ಮತ್ತೊಂದು ಗುಂಪು ಮಾಡಬಹುದು. ಪ್ರತಿಯೊಂದು ವಯಸ್ಸಿನ ತಂಡದಲ್ಲಿರುವ ಮಕ್ಕಳ




ಸಂಖ್ಯೆಯ ಪ್ರಕಾರ ಪುನರಾವರ್ತನೆಯ ಠಾಣೆಗಳಿಗೆ ನೀವು ಮಕ್ಕಳು ವಿಂಗಡಿಸಬಹುದು ಅಥವಾ ದಿನದ ಕೊನೆಯಲ್ಲಿ ಆಟದ ಚಟುವಟಿಕೆಯೊಂದಿಗೆ ತರಗತಿ ಮತ್ತು ಕರಕುಶಲ ಠಾಣೆಯನ್ನು ನಡೆಸಬಹುದು.

ಠಾಣೆಗಳ ಪುನರಾವರ್ತನಯನ್ನು ನಡೆಸಲು ಒಂದು ಮೆಚ್ಚಿನ ಮಾರ್ಗವೆಂದರೆ, ಬದಲಾಯಿಸುವಾಗ ಹಾಡುಗಳನ್ನು ಹಾಕಬೇಕು, ಆದ್ದರಿಂದ ಮಕ್ಕಳು ಒಂದು ಠಾಣೆಯಿಂದ ಮತ್ತೊಂದು ಠಾಣೆಗೆ ಹೋಗುವಾಗ ವಿಧ್ಯಾರ್ಥಿಗಳಲ್ಲಿ ಹೆಚ್ಚು ಉತ್ಸುಕತೆಯಿರುತ್ತದೆ. ಠಾಣೆಗಳನ್ನು ಉಪಯೋಗಿಸುವದರಲ್ಲಿರುವ ಅನುಕೂಲತೆ ಏನೆಂದರೆ ಶಿಕ್ಷಕರು ಹೆಚ್ಚು ಕಾರ್ಯಗಳನ್ನು ಸಿದ್ಧಮಾಡುವ ಅವಶ್ಯಕತೆಯಿರುವದಿಲ್ಲ, ಬದಲಾಗಿ ತರಗತಿಯ ಒಂದು ಭಾಗವನ್ನು ಮಾತ್ರವೇ ಸಿದ್ಧಮಾಡಬೇಕಾಗುತ್ತದೆ ಮತ್ತು ಅದನ್ನೇ 3 ಸಲ ಪುನರಾವರ್ತಿಸಬೇಕಾಗುತ್ತದೆ. (ಪ್ರತಿಯೊಬ್ಬ ಶಿಕ್ಷಕಿಯ ಕೆಲಸದ ಭಾರ ಕಡಿಮೆಯಾಗುತ್ತದೆ).

## ಪುನರಾವರ್ತನೆಯ ವೇಳಾಪಟ್ಟಿ

ಎಲ್ಲರೂ ಒಂದೇ ಗುಂಪಿನಲ್ಲಿರಬೇಕು:

- ಪ್ರಾರಂಭ
- ಹಾಡು
- ನಾಟಕ
- ಮುಖ್ಯ ಸಂದೇಶ
- ಐಸ್ ಬ್ರೇಕರ್ ಆಟ
- ಸತ್ಯವೇದದ ಪಾಠ

ವಿದ್ಯಾರ್ಥಿಗಳ ಪುನರಾವರ್ತನೆ:

ವಿದ್ಯಾರ್ಥಿ ಪುಸ್ತಕದ ಚಟುವಟಿಕೆಗಳು

ಆಟಗಳು (ಕಡೆಯಲ್ಲಿ ಎಲ್ಲರನ್ನು ಸೇರಿಸಿ ಒಟ್ಟಾಗಿ ಆಡಿಸಿರಿ)

ದಿನದ ಕರಕುಶಲತೆ

ಎಲ್ಲರೂ ಒಟ್ಟಾಗಿ ಒಂದೇ ಗುಂಪಿನಲ್ಲಿ:

- ತಿಂಡಿ
- ಹಾಡು
- ಮುಕ್ತಾಯ

## ಪುನರಾವರ್ತನೆಯ ವೇಳಾಪಟ್ಟಿ

ಎಲ್ಲರೂ ಒಟ್ಟಾಗಿ ಒಂದೇ ಗುಂಪಿನಲ್ಲಿ:

- ಪ್ರಾರಂಭ
- ಹಾಡು
- ನಾಟಕ
- ಮುಖ್ಯ ಸಂದೇಶ
- ಐಸ್ ಬ್ರೇಕರ್ ಆಟ

ತರಗತಿಯ ಕಾರ್ಯಗಳು:

- ಸತ್ಯವೇದ ಪಾಠ
- ವಿದ್ಯಾರ್ಥಿ ಪುಸ್ತಕಗಳು
- ಕರಕುಶಲಗಳು
- ತಿಂಡಿ

ಎಲ್ಲರೂ ಒಟ್ಟಾಗಿ ಆಟವಾಡುವದು

ಎಲ್ಲರೂ ಒಟ್ಟಾಗಿ ಒಂದೇ ಗುಂಪಿನಲ್ಲಿ

- ಹಾಡು
- ಮುಕ್ತಾಯ




## ಐಸ್ ಬ್ರೇಕರ್ ಆಟಗಳು

ಐಸ್ ಬ್ರೇಕರ್ಸ್ ಚಿಕ್ಕ ಆಟಗಳಾಗಿದ್ದು ನಿಮ್ಮ ವಿದ್ಯಾರ್ಥಿಗಳ ಬಿಡುವಿನ ಸಮಯದಲ್ಲಿ ಅವರಿಗೆ ಆಡಿಸಬಹುದು. ಮಕ್ಕಳು ಗುಂಪಿನಲ್ಲಿರುವಾಗ ಒಬ್ಬರೊಂದಿಗೊಬ್ಬರು ಬೆರೆಯಲು ಸಹಾಯವಾಗುತ್ತದೆ. ಸಹಕಾರ ಮತ್ತು ಭಾಗವಹಿಸುವೆಯನ್ನು ಪ್ರೋತ್ಸಾಹಪಡಿಸುವ ಮೂಲಕ ಐಸ್ ಬ್ರೇಕರ್ಸ್ ಗಳು ನಿಮ್ಮ ಕಲಿಸುವಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಸಣ್ಣ ಗುಂಪುಗಳಲ್ಲಿ ಕೆಳಗಿನ ಕಾರ್ಯಗಳನ್ನು ಮಾಡುವ ಮೂಲಕ ಇವುಗಳು ಅಧ್ಯಯನ ಹಾಗೂ ಚರ್ಚೆಗೆ ಬೇಕಾಗುವ ಸಕಾರಾತ್ಮಕ ಪ್ರೋತ್ಸಾಹವನ್ನು ಕೊಡುತ್ತವೆ:

- ಹೊಸ ತಂಡದವರು ಒಬ್ಬರನ್ನೊಬ್ಬರು ತಿಳಿದುಕೊಳ್ಳಲು ಸಹಾಯವಾಗುತ್ತದೆ.
- ಹೊಸ ಸದಸ್ಯರು ತಂಡವನ್ನು ಸೇರಿಕೊಳ್ಳಲು ಸಹಾಯವಾಗುತ್ತದೆ.
- ಯೌವನಸ್ಥರು ಒಟ್ಟಾಗಿ ಅನುಕೂಲವಾಗಿರಲು ಸಹಾಯವಾಗುತ್ತದೆ.
- ಸಹಕಾರವನ್ನು ಪ್ರೋತ್ಸಾಹಪಡಿಸುತ್ತದೆ.

- ತಂಡವಾಗಿ ಕೆಲಸ ಮಾಡಲು ಪ್ರೋತ್ಸಾಹಪಡಿಸುತ್ತದೆ.
- ಯೌವನಸ್ಥರು ತಮ್ಮ ಕಾರ್ಯವನ್ನು ಮುಂದುವರೆಸಲು ಪ್ರೋತ್ಸಾಹಪಡಿಸುತ್ತದೆ.
- ಸಾಮಾಜಿಕ ಕೌಶಲ್ಯಗಳು ಅಭಿವೃದ್ಧಿಯಾಗುತ್ತವೆ.
- ನಾಯಕರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.
- ಕಲಿತುಕೊಳ್ಳಲು ಮತ್ತು ಭಾಗವಹಿಸಲು ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತದೆ.

ಮುಖ್ಯ ಸಂದೇಶವನ್ನು ಕೇಳಿಸಕೊಂಡ ನಂತರ ನೇರವಾಗಿ ಸತ್ಯವೇದ ಕಥೆಯನ್ನು ಕೇಳಲು ನಿಮ್ಮ ವಿದ್ಯಾರ್ಥಿಗಳಿಗೆ ಆಸಕ್ತಿಕರವಾಗಿರವದಿಲ್ಲ! ಮಾತನಾಡುವದು ಮತ್ತು ಬೋಧಿಸುವದರಿಂದ ಅಧಿಕ ಒತ್ತಡವಾಗುತ್ತದೆ. ನಾವು ಪ್ರತಿಯೊಂದು ಪಾಠದಲ್ಲಿಯೂ ಐಸ್ ಬ್ರೇಕರ್ ಆಟದ ಮೂಲಕ "ಮಾತುಗಳನ್ನು" ವಿಭಾಗಿಸಿದ್ದೇವೆ. ಪ್ರತಿದಿನದ ಪಾಠವನ್ನು ಕಲಿಯಲು ಮತ್ತು ಗಮನಹರಿಸಲು ವಿದ್ಯಾರ್ಥಿಗಳಿಗೆ ಸಹಾಯವಾಗುವ ಸಲುವಾಗಿ ಈ ಆಟಗಳನ್ನು ಉಪಯೋಗಿಸಿರಿ.

## ಆಟಗಳು

ಈ ಪಠ್ಯದಲ್ಲಿ ಶಾಲೆಯ ಮಕ್ಕಳಿಗೆಂದು ಪ್ರತಿ ಪಾಠದಲ್ಲಿ ಎರಡು ಆಟಗಳನ್ನು ಕೊಡಲಾಗಿದೆ. ಒಂದು ಆಟ ತಂಡಗಳನ್ನೊಳಗೊಂಡಿರುವ ರಿಲೇ ಶೈಲಿಯಲ್ಲಿರುತ್ತದೆ ಮತ್ತು ಇನ್ನೊಂದು ಆಟ ವ್ಯಕ್ತಿಗತವಾಗಿರುತ್ತದೆ, ಅದರಲ್ಲಿ ಮಕ್ಕಳಿಗೆ ಸ್ಪರ್ಧೆಯನ್ನು ಏರ್ಪಡಿಸಲು ಗೆಲ್ಲುವವರನ್ನು ನಿಶ್ಚಯಿಸಲಾಗುತ್ತದೆ. ವಿಬಿಎಸ್ ಕಾರ್ಯಕ್ರಮ ಆಸಕ್ತಿಕರವಾಗಿರಲು ನೀವು ಆಟಗಳನ್ನು ಉಪಯೋಗಿಸಬೇಕು, ಆಗ ಮಕ್ಕಳು ಪ್ರತಿದಿನ ಬರಲು ಸಾಧ್ಯವಾಗುತ್ತದೆ. ಒಂದುವೇಳೆ ನಿಮಗೆ ಆಸಕ್ತಿಯಿದ್ದರೆ, ತಂಡಗಳನ್ನು ಏರ್ಪಡಿಸಬಹುದು ಮತ್ತು ಆಟಗಳಲ್ಲಿ ಗೆಲ್ಲುವ ತಂಡಗಳಿಗೆ ಅಂಕಗಳನ್ನು ನೀಡಬಹುದು.

# ಹೆಚ್ಚುವರಿ ಆಲೋಚನೆಗಳು

## ಬಾಗಿಲು ಅಲಂಕಾರ

ನಿಮ್ಮ ತರಗತಿಯ ಬಾಗಿಲನ್ನು ಮುಕ್ತಾಯದ ಗೆರೆಯೊಂದಿಗೆ ಅಲಂಕರಿಸಿರಿ ಅದುವೇ ನಿಮ್ಮ ತರಗತಿಯ ಪ್ರಾರಂಭದ ಸೂಚನೆಯಾಗಿರಲಿ ಅಥವಾ ನಿಮ್ಮ ತರಗತಿಯಲ್ಲಿರುವ ಮಕ್ಕಳನ್ನು ಪ್ರತಿನಿಧಿಸಲು ಮೋಟರ್ ಸೈಕಲ್ ಗಳಿಂದ ಅಲಂಕರಿಸಿರಿ. ಅಲಂಕಾರ ಮಾಡಲು ನೀವು ವಿಶೇಷವಾದ ಹಾಳೆಗಳನ್ನು ಉಪಯೋಗಿಸಬಹುದು.






## ಸಂಚಾರಿ ದೀಪಗಳು

ಇದನ್ನು ನೀವೇ ತಯಾರಿಸಬಹುದು. ಇದಕ್ಕಾಗಿ ನಿಮಗೆ ಬೇಕಾಗುವ ಸಾಮಗ್ರಿಗಳು:

- ಕಾರ್ಡ್ ಬೋರ್ಡ್ ಬಾಕ್ಸ್
- ಕೆಲವು ಕ್ಯಾನ್ ಗಳು
- ನಿಲ್ಲಿಸಲು ಒಂದು ಕೋಲು





## ಬಲೂನ್ಸ್

ಸಂಚಾರಿ ದೀಪಗಳು, ಟೈರ್ ಗಳು ಅಥವಾ ರೇಸ್ ಟ್ರಾಕ್ ಬಣ್ಣದ ವಿವಿಧ ಬಲೂನ್ ಗಳಿಂದ ನಿಮ್ಮ ತರಗತಿಯನ್ನು ಅಲಂಕಾರ ಮಾಡಿರಿ.






## ಪೇಪರ್ ಕರ್ಟೇನ್ಸ್ (ಪರದೆಗಳು)

ಅವುಗಳನ್ನು ಬಾಗಿಲುಗಳು ಅಥವಾ ಕಿಟಕಿಗಳಿಗೆ ಹಾಕಿರಿ.









## ಪೇಪರ್ ವೃತ್ತಗಳು

ವಿವಿಧ ಆಕಾರಗಳಲ್ಲಿ, ನಿಮಗೆ ಹೊಂದಿಕೆಯಾಗುವ ವಿನ್ಯಾಸಗಳು ಅಥವಾ ಬಣ್ಣಗಳಿಂದ ಇವುಗಳನ್ನು ಮಾಡಿರಿ.






## ರಸ್ತೆಯ ಸಂಕೇತಗಳು

ಇವುಗಳು ಹೆಚ್ಚು ಆಸಕ್ತವಾಗಿರುವವು ಮತ್ತು ಸೂಕ್ತವಾದ ವಾತಾವರಣ ನಿರ್ಮಾಣಕ್ಕೆ ಸಹಾಯ ಮಾಡುವವು.




## ಮೋಟೋ ಸೆಲ್ಫಿ

ಮಕ್ಕಳ ಚಿತ್ರಗಳನ್ನು ತೆಗೆದುಕೊಳ್ಳಲು ಇದು ಉತ್ತಮವಾದ ಅವಕಾಶವಾಗಿದೆ.




## ಮೋಟರ್ ಸೈಕಲ್

ಇದನ್ನು ಕಾರ್ಡ್ ಬೋರ್ಡ್ ಸಹಾಯದಿಂದ




## ಟೈರ್ ಗಳು

ರೀಸೈಕಲ್ಡ್ ಟೈರ್ ಗಳನ್ನೇ ಅಲಂಕರಿಸಿ ಬಳಸಬಹುದು.





# 1 ನನ್ನ ಪಾಪಗಳನ್ನು ಅರಿತುಕೊಳ್ಳುವದು



**ಸತ್ಯವೇದ ಕಥೆ: ಪೇತ್ರನು ಪಶ್ಚಾತ್ತಾಪಪಟ್ಟನು / ಮತ್ತಾಯ 26:69-75, ಯೋಹಾನ 21**

## ವಾಕ್ಯ

**“ಪ್ರತಿಯಾಗಿ, ನಮ್ಮ ಪಾಪಗಳನ್ನು ಒಪ್ಪಿಕೊಂಡರೆ, ಆಗ ನಂಬಿಕಸ್ಥರೂ ನೀತಿವಂತರೂ ಆದ ದೇವರು ನಮ್ಮ ಪಾಪಗಳನ್ನು ಕ್ಷಮಿಸಿ ಎಲ್ಲಾ ಅನೀತಿ - ಅಧರ್ಮಗಳಿಂದ ನಮ್ಮನ್ನು ಶುದ್ಧೀಕರಿಸುತ್ತಾರೆ. ”೧ ಯೊವಾನ್ನನು 1:9**

## ನಾಟಕ

**ಸುಳ್ಳು ಹೇಳುವ ಮೆಕಾನಿಕ್**

- ತನ್ನ ಕೈಗಳಿಗೆ ಅಂಟಿರುವ ಗ್ರೀಸ್ ಒರೆಸಿಕೊಂಡು ಜೋರಾಗಿ ನಗುತ್ತಾ ಮೆಕಾನಿಕ್ ಬರುತ್ತಾನೆ. ಅವನು ಸೋಫಾ ಮೇಲೆ ಕುಳಿತು, ತಂಪು ಪಾನೀಯ ಕುಡಿಯುತ್ತಾನೆ. ಅವನು ಮಕ್ಕಳಿಗೆ ತನ್ನ ಜೀವನ ಹೇಗಿದೆ ಎಂಬದನ್ನು ಹೇಳಲು ಪ್ರಾರಂಭಿಸುತ್ತಾನೆ: ನಾನು ತುಂಬಾ ಒಳ್ಳೆಯ ಮೆಕಾನಿಕ್, ನನ್ನ ಹೆಸರು ಗ್ರೀಸಿ. ನನಗೆ ಸುಂದರವಾದ ಹೆಂಡತಿ ಇದ್ದಾರೆ, ಒಳ್ಳೆಯ ಮಗಳಿದ್ದಾಳೆ ಆದರೆ ಅವಳು ಸ್ವಲ್ಪ ತುಂಟತನ ಮಾಡುತ್ತಾಳೆ, ಯಾವಾಗಲೂ ನನ್ನ ಮಾತು ಕೇಳುವ ಚಿಕ್ಕ ನಾಯಿ ಮರಿ ಇದೆ ಎಂಬದನ್ನು ಹೇಳುತ್ತಾ, ತನ್ನ ಮನೆ ಎಲ್ಲಿದೆ ಎಂಬದನ್ನು ತಿಳಿಸುತ್ತಾನೆ. (ನಿಮ್ಮ ಕ್ಷೇತ್ರದಲ್ಲಿರುವ ಯಾವುದಾದರು ಪಟ್ಟಣದ ಹೆಸರು ಹೇಳಿರಿ)

> **ಗಮನ ಸೆಳೆಯುವದು**
>
> ಸ್ಪೀಕರ್: “ಇದು ರೇಸ್ ಸಮಯ!”
> ಮಕ್ಕಳು: “ಬೀಪ್! ಬೀಪ್-ಬೀಪ್!” (ಪ್ರತಿಬಾರಿ ಬೀಪ್ ಹೇಳುವಾಗಲೂ ಮುಷ್ಟಿ ಹಿಡಿಯಬೇಕು)
> “ಊಊಊಹ್” (ಕೈಯನ್ನು ಮೇಲೆ ಕೆಳಗೆ ಎತ್ತಿ ಇಳಿಸಿ ಒಂದು, ಎರಡು, ಮೂರು ಎಣಿಸಬೇಕು) “ಹೌದು!” (ಕೈಗಳನ್ನು ನಿಧಾನವಾಗಿ ಮೋಟರ್ ಬೈಕ್ ಓಡಿಸುವ ರೀತಿಯಲ್ಲಿ ಮಾಡಬೇಕು)

- ಅವನು ಮತ್ತೊಮ್ಮೆ ನಗುವದಕ್ಕೆ ಆರಂಭಿಸುತ್ತಾನೆ, ಅವನು ಬಹಳ ಖುಷಿಯಲ್ಲಿದ್ದಾನೆ, ತಾನು ಯಾಕೆ ಖುಷಿಯಲ್ಲಿದ್ದಾನೆ ಎಂಬದನ್ನು ಮಕ್ಕಳೊಂದಿಗೆ ಹಂಚಿಕೊಳ್ಳಲು ಬಯಸುತ್ತಾನೆ. 10 ದಿವಸಗಳ ಹಿಂದೆ ಏನೋ ಒಂದು ವಿಷಯ ನಡೆದಿದೆ; ಒಬ್ಬ ಗ್ರಾಹಕ (ವ್ಯಕ್ತಿ) ತಮ್ಮ ಕಾರಿನ ಆಯಿಲ್ ಬದಲಾಯಿಸಲು ಅವನ ಬಳಿಗೆ ಬಂದಿದ್ದರು. ಅವರ ಕಾರಿಗೆ ಹೊಸದಾದ, ಉತ್ತಮವಾದ ಮತ್ತು ಬೆಲೆಬಾಳುವ ಆಯಿಲ್ ಹಾಕುವ ಬದಲು ಅವನು, ಉಪಯೋಗವಾಗಿದ್ದ ಮತ್ತು ಪ್ರಯೋಜನವಿಲ್ಲದ ಆಯಿಲ್ ಹಾಕಿದ್ದನು. ಈ ವಿಷಯ ಕಾರಿನ ಯಜಮಾನನಿಗೆ ಗೊತ್ತಾಗುವದಿಲ್ಲ, ಅಲ್ಲದೆ ಹೆಚ್ಚು ಹಣ ಸಹ ಸಿಗುತ್ತದೆ ಎಂಬದಾಗಿ ಅವನು ನೆನೆಸಿದನು.
- ಆ ಕ್ಷಣದಲ್ಲಿ, ಗ್ರಾಹಕನು ಮೆಕಾನಿಕ್ ಮೇಲೆ ಕೋಪವುಳ್ಳವನಾಗಿ ಅವನನ್ನು ಚೆನ್ನಾಗಿ ಹೊಡೆಯಲು ಅವನ ಕಡೆಗೆ ಓಡಿ ಬಂದನು. ಮೆಕಾನಿಕ್ ಕೂಡಲೇ ಸೋಫಾದ ಹಿಂದೆ ಬಚ್ಚಿಟ್ಟುಕೊಂಡನು. ಅವರಿಬ್ಬರು ಕೆಲವು ನಿಮಿಷ ಮಕ್ಕಳ ಎದುರಿನಲ್ಲಿ ಒಬ್ಬರ ಹಿಂದೊಬ್ಬರು ಓಡಬೇಕು, ಕೂಗಾಡಬೇಕು, ಮೆಕಾನಿಕ ಆದಾರೋ ನಾನೇನು ತಪ್ಪು ಮಾಡಿಲ್ಲ ಎಂದು ಹೇಳಬೇಕು.
- ಕೂಗಾಡುತ್ತಿರುವ ಗ್ರಾಹಕನು ಇಂದು ಬೆಳಗ್ಗೆ ನನ್ನ ಇಂಜಿನ್ ಕೆಟ್ಟು ಹೋಯಿತು, ಯಾಕೆ ಕೆಟ್ಟು ಹೋಯಿತು ಎಂದು ಪರೀಕ್ಷಿಸಿದಾಗ, ತುಂಬಾ ದಿನಗಳಿಂದ ಆಯಿಲ್ ಬದಲಾಯಿಸಿಲ್ಲ ಎಂಬದಾಗಿ ಅನೇಕರು ಹೇಳುತ್ತಿದ್ದಾರೆ ಎಂಬದಾಗಿ ಹೇಳುವನು. ಅಲ್ಲದೆ ನಾನು ಆಯಿಲ್ ಬದಲಾಯಿಸಿದ್ದೇನೆ ಎಂಬದಾಗಿ ಹೇಳಿದರೂ ಯಾರೂ ನಂಬುತ್ತಿಲ್ಲ, ಆಯಿಲ್ ಬದಲಾಯಿಸದೆ ತುಂಬಾ ಸಮಯವಾಗಿದೆ ಎಂಬದಾಗಿ ಜನರು







ಹೇಳುತ್ತಿದ್ದಾರೆ ಎಂಬದಾಗಿಯೂ ಮೆಕಾನಿಕ್ ಗೆ ಹೇಳಬೇಕು. ಗ್ರಾಹಕನು ಮೆಕಾನಿಕ್ ಮೇಲೆ ಕೂಗಾಡುತ್ತಲೇ, ನೀನೀಗ ಆಯಿಲ್ ಬದಲಾಯಿಸಿ ಕೊಡಲೇ ಬೇಕು ಎಂದು ಒತ್ತಾಯಿಸುವನು. ಹಾಗೆ ಇಬ್ಬರೂ ವಾದ ಮಾಡುತ್ತಾ ಓಡುತ್ತಿರಬೇಕು. ಶಿಕ್ಷಕರಲ್ಲಿ ಒಬ್ಬರು ಮುಂದೆ ಬಂದು, "ಕೊನೆಯಲ್ಲಿ ಏನಾಗುವದೆಂದು ಸ್ವಲ್ಪಸಮಯದ ನಂತರ ನೋಡೋಣ" ಎಂದು ಹೇಳಬೇಕು.

- ಯಾರೋ ಒಬ್ಬರು "ಸ್ವಲ್ಪ ಸಮಯದ ನಂತರ" ಎಂಬ ಬೋರ್ಡ್ ಹಿಡಿದು ಹಾದು ಹೋಗಬೇಕು. ಈಗ ಮೆಕಾನಿಕ್ ಪಶ್ಚಾತ್ತಾಪದ ಹೃದಯದೊಂದಿಗೆ ಬಂದು ಗ್ರಾಹಕನೊಂದಿಗೆ ಮಾತನಾಡಬೇಕು. ನಾನು ಉಪಯೋಗವಾಗಿದ್ದ ಆಯಿಲ್ ಹಾಕಿದ್ದೆ, ದಯವಿಟ್ಟು ನನ್ನನ್ನು ಕ್ಷಮಿಸಿರಿ ಎಂದು ಗ್ರಾಹಕನಿಗೆ ಹೇಳಬೇಕು. ತನ್ನ ತಪ್ಪಿನ ನಿಮಿತ್ತ ಹಾಳಾಗಿರುವ ಇಂಜಿನ್ ಬದಲು ಹೊಸ ಇಂಜಿನ್ ಹಾಕಿಸಿಕೊಡುವದಾಗಿ ಹೇಳಬೇಕು.

ಅವನ ಮಾತುಗಳನ್ನು ಕೇಳಿ ಗ್ರಾಹಕನು ಮೆಕಾನಿಕ್ ಅನ್ನು ಕ್ಷಮಿಸಿದನು. ಅವರು ಒಬ್ಬರನ್ನೊಬ್ಬರು ಅಪ್ಪಿಕೊಂಡರು. ಮೆಕಾನಿಕ್ ತನ್ನ ಹೊಸ ಸ್ನೇಹಿತನ ಬೆನ್ನು ತಟ್ಟಿದನು ಮತ್ತು ಗ್ರಾಹಕನು ಪ್ರತಿಯಾಗಿ ಅವನ ಬೆನ್ನು ತಟ್ಟಿದನು. ಸ್ವಲ್ಪ ಗೊಂದಲದಿಂದಲೇ, ನಗುತ್ತಾ ಮೆಕಾನಿಕ್ ಇನ್ನು ಸ್ವಲ್ಪ ಗಟ್ಟಿಯಾಗಿ ಅವನ ಬೆನ್ನು ತಟ್ಟಿದನು, ಅದಕ್ಕೆ ಪ್ರತಿಯಾಗಿ ಗ್ರಾಹಕನೂ ಸ್ವಲ್ಪ ಗಟ್ಟಿಯಾಗಿ ಅವನ ಬೆನ್ನು ತಟ್ಟಿದನು. ಇಬ್ಬರೂ ನಗುತ್ತಾ ತಮ್ಮ ಕೆಲಸಗಳಿಗೆ ಹೋದರು.

## ಸಂದೇಶ

ಮಕ್ಕಳೇ, "ನಿಮ್ಮ ಇಂಜಿನ್ ಪ್ರಾರಂಭಿಸಿರಿ!" ಎಂಬ ಹೊಸ ವಿಬಿಎಸ್ ಕಾರ್ಯಕ್ರಮದ ಪ್ರಾರಂಭಕ್ಕೆ ನಿಮಗೆ ಸ್ವಾಗತ

ಇಂದು ನಾವು ಇಂಜಿನ್ ನಲ್ಲಿ ಆಯಿಲ್ ಇರಬೇಕಾದದ್ದರ ಪ್ರಾಮುಖ್ಯತೆಯನ್ನು ನೋಡಿಕೊಳ್ಳೋಣ. ಮೋಟರ್ ಸೈಕಲ್ ಅಥವಾ ಕಾರ್ ಯಾವುದೇ ವಾಹನವಾಗಲಿ ಅದಕ್ಕೆ ಆಯಿಲ್ ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ, ಆಯಿಲ್ ಇಲ್ಲದೆ ನೀವು ವಾಹನ ಚಾಲನೆ ಮಾಡಿದರೆ, ಇಂಜಿನ್ ಹಾಳಾಗುತ್ತದೆ! ಆಗ ನೀವು ಮುಂದಕ್ಕೆ ಹೋಗಲು ಆಗುವದಿಲ್ಲ. ಇಂಜಿನ್ ಪೂರ್ತಿಯಾಗಿ ಹಾಳಾಗುವದು ದುಃಖದ ವಿಷಯವಾಗಿದೆ, ನೀವು ಮಾಡಬೇಕಾಗಿರುವದೆಲ್ಲಾ ಆಯಿಲ್ ಪರೀಕ್ಷಿಸಬೇಕು ಮತ್ತು ಹಾಕಿಸಿ ಬಹಳ ದಿನವಾಗಿದ್ದರೆ ಅದನ್ನು ಬದಲಾಯಿಸಬೇಕು. ಇಂಜಿನ್ ನಲ್ಲಿರುವ ಆಯಿಲ್ ಕಾಲ ಕ್ರಮೇಣ ಹೆಚ್ಚೆಚ್ಚು ಮಲಿನಗೊಳ್ಳುತ್ತದೆ. ಆದ್ದರಿಂದ ಕೆಲವು ದಿವಸಗಳಾದ ನಂತರ ನಾವು ಅದನ್ನು ಬದಲಾಯಿಸಿ ಹೊಸ ಆಯಿಲ್ ಹಾಕಬೇಕು. ಆದ್ದರಿಂದ ಸಮಯಾಸಮಯಕ್ಕೆ ಆಯಿಲ್ ಪರೀಕ್ಷಿಸಿರಿ, ಕೆಲವೊಮ್ಮೆ ಹೆಚ್ಚಾಗಿ ಖರೀದಿಸಬೇಕಾಗುತ್ತದೆ, ಆದರೆ ಆಯಿಲ್ ಕಡಿಮೆಯಾಗಿ, ಇಂಜಿನ್ ಹಾಳಾದರೆ ಆಗುವ ಖರ್ಚು ಮತ್ತು ಸಮಯವನ್ನು ನೀವು ಉಳಿಸಬಹುದು. ದೊಡ್ಡ ಪಾಪದಲ್ಲಿ ಸಿಕ್ಕಿಕೊಳ್ಳುವದು ನಮ್ಮ ಕಾರ್ ನ ಇಂಜಿನ್ ಹಾಳುಮಾಡಿಕೊಂಡಿರುವದಕ್ಕೆ ಸಮಾನವಾಗಿದೆ.



ದೇವರು ಕ್ಷಮಿಸಿದ ನಂತರವೂ ಅನೇಕ ಪಾಪಗಳ ಪರಿಣಾಮಗಳು ಬಹಳವಾಗಿರುತ್ತವೆ. ಕೆಲವು ಪಾಪಗಳು ಅನೇಕ ವರ್ಷಗಳ ಸೆರೆವಾಸ ಅನುಭವಿಸುವಂತೆ ಮಾಡುತ್ತವೆ, ಇನ್ನು ಕೆಲವು ಪಾಪಗಳು ನಿಮ್ಮ ಕುಟುಂಬದ ಸದಸ್ಯರೇ ನಿಮ್ಮನ್ನು ಮನೆಯಿಂದ ಹೊರಗೆ ಹಾಕುವಂತೆ ಮಾಡುತ್ತವೆ ಮತ್ತೂ ಕೆಲವು ಪಾಪಗಳು ನಿಮ್ಮನ್ನು ಶಾಲೆಯಿಂದ ತೆಗೆದುಹಾಕುವಂತೆ ಮಾಡುತ್ತವೆ. ಸಣ್ಣ ವಿಷಯಗಳಲ್ಲಿಯೂ ನಾವು ಬಲಿಷ್ಠಾಗಿದ್ದೇವೆ ಎಂಬದನ್ನು ಮನಃಪೂರ್ವಕವಾಗಿ ನಾವು ಒಪ್ಪಿಕೊಳ್ಳುವಾಗ ದುಬಾರಿಯಾಗುವ ಪಾಪಗಳಿಂದ ದೂರವರಲು ನಮಗೆ ಸಹಾಯ ಮಾಡುತ್ತದೆ. ಖಂಡಿತವಾಗಿಯೂ ಯಾರಿಗೂ ಸಹಜವಾಗಿ ನಾನು ತಪ್ಪು ಮಾಡಿದ್ದೇನೆ ಎಂಬದಾಗಿ ಒಪ್ಪಿಕೊಳ್ಳುವ ಧೈರ್ಯ ಇರುವದಿಲ್ಲ. ನಾನು ತಪ್ಪು ಮಾಡುವದಿಲ್ಲ, ನಾವು ಮಾಡುವದ ಸರಿ ಎಂಬ ಅಭಿಪ್ರಾಯವು ನಾವು ಪ್ರಾಕೃತ ಸ್ವಭಾವವಾಗಿದೆ. ಆದರೆ ಇದು ಸತ್ಯವಲ್ಲ. ನಾವು ಯಾವಾಗಲೂ ತಪ್ಪು ಮಾಡುತ್ತಿರುತ್ತೇವೆ, ಕೆಲವು ತಪ್ಪುಗಳು ಕೆಲವು ತಪ್ಪುಗಳಿಗಿಂತ ದೊಡ್ಡದಾಗಿರುತ್ತವೆ. ಇಂದು ನಾವು ಸತ್ಯವೇದದಲ್ಲಿ ತಪ್ಪು







ಮಾಡಿದ ಒಬ್ಬ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳೋಣ, ಅವನಹೆಸರು, ಪೇತ್ರ. ಅವನು ಪಾಪ ಮಾಡುವಾಗಲೇ ಸಿಕ್ಕಿಬಿದ್ದನು, ಒಂದುವೇಳೆ ಅವನು ಹಾಗೆಯೇ ಮುಂದುವರೆದಿದ್ದರೆ, ಖಂಡಿತವಾಗಿಯೂ ತನ್ನ ಜೀವವನ್ನು ಹಾಳುಮಾಡಿಕೊಳ್ಳುತ್ತಿದ್ದನು.

ಆದರೆ ಹಾಗೆಯೇ ಮುಂದುವರೆಯದೆ ಪೇತ್ರನು ತನ್ನ ಪಾಪವನ್ನು ಒಪ್ಪಿಕೊಂಡನು ಮತ್ತು ದೇವರ ಎದುರಿನಲ್ಲಿ ಪಶ್ಚಾತ್ತಾಪಪಟ್ಟನು. ಈ ಕ್ರಿಯೆ ಅವನು ಜೀವನದ ಓಟಕ್ಕೆ ಹಿಂದಿರುಗುವಂತೆ ಮಾಡಿ ಅವನನ್ನು ಪುನಃ ಸರಿಯಾದ ದಾರಿಗೆ ಕರೆದುಕೊಂಡು ಬಂದಿತು. ಪೇತ್ರನು ದೇವರಲ್ಲಿ ಬಲಗೊಂಡನು. ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮ್ಮ ಜೀವಿತದಲ್ಲಿ ವಿಶೇಷವಾದ ಆಲೋಚನೆಗಳನ್ನು ಹೊಂದಿದ್ದಾನೆ. ಸತ್ಯವೇದದ ಪೇತ್ರನ ಹಾಗೆ, ನೀವು ಆತನಲ್ಲಿ ಬಲಗೊಳ್ಳಬೇಕೆಂದು ಆತನು ಬಯಸುತ್ತಾನೆ.

ಆದರೆ ನಾನು ನೀವು ಈ ಓಟವನ್ನು ಗೆಲ್ಲಬೇಕಾದರೆ, ಪೇತ್ರನ ಪಾಠದಿಂದ ನಾವು ಕಲಿತುಕೊಳ್ಳಬೇಕು; ನಾವು ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಬೇಕು ಮತ್ತು ಪಶ್ಚಾತ್ತಾಪಪಡಬೇಕು. ಗೆಲ್ಲಬೇಕಾದರೆ, ನಾವು ನಿಜವಾಗಿಯೂ ತಪ್ಪು ಮಾಡಿದ್ದೇವೆ ಮತ್ತು ನಮ್ಮಲ್ಲಿ ಪರಿಪೂರ್ಣತೆಯಿಲ್ಲ ಎಂಬದನ್ನು ನಾವು ಒಪ್ಪಿಕೊಳ್ಳಬೇಕು. ಆಗ ನಾವು ನಮ್ಮ ಪಾಪಗಳನ್ನು ದೇವರೆದುರಿನಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ. ಆತನು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ನಮ್ಮನ್ನು ಶುದ್ಧೀಕರಿಸುತ್ತಾನೆ, ಅದರಿಂದ ನಾವು ಶುದ್ಧರಾಗಿರಲು ಹಾಗೂ ದೇವರನ್ನು ಹಿಂಬಾಲಿಸಲು ಸುಲಭವಾಗುತ್ತದೆ. ಆದರೆ ನಾವು ಪರಿಪೂರ್ಣರಲ್ಲವಾದ್ದರಿಂದ, ಮತ್ತೆ ಪಾಪ ಮಾಡುತ್ತೇವೆ ಮತ್ತು ಮತ್ತೆ ವಿಧಾನವು ಪ್ರಾರಂಭವಾಗುತ್ತದೆ. ಮೋಟರ್ ಸೈಕಲ್ ಇಂಜಿನ್ ಗೆ ಯಾವಾಗಲೂ ಹೊಸ ಆಯಿಲ್ ಬೇಕಿರುವ ಹಾಗೆ, ನಾನು ಮತ್ತು ನೀವು ನಮ್ಮ ಪಾಪಗಳನ್ನು ಯಾವಾಗಲೂ ದೇವರ ಎದುರಿನಲ್ಲಿ ಒಪ್ಪಿಕೊಳ್ಳಬೇಕು. ಇದು ಒಂದು ಸಮಯ ಮಾಡುವ ಕಾರ್ಯವಲ್ಲ ಬದಲಾಗಿ ಓಟವನ್ನು ಗೆಲ್ಲಲು ಬಯಸುವದಾದರೆ ಇದನ್ನು ಸತತವಾಗಿ ಅಭ್ಯಾಸ ಮಾಡಬೇಕು. ನಾನು ಮತ್ತೆಮತ್ತೆ ರಕ್ಷಣೆ ಹೊಂದಬೇಕು ಎಂಬದರ ಬಗ್ಗೆ ಮಾತನಾಡುತ್ತಿಲ್ಲ, ಬದಲಾಗಿ ನೀವು ತಪ್ಪು ಮಾಡುವಾಗ ಅದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಈ ಅಭ್ಯಾಸವು ನಿಮ್ಮ ಇಂಜಿನ್ ಆಯಿಲ್ "ಶುದ್ಧವಾಗಿರುವಂತೆ" ನೋಡಿಕೊಳ್ಳುತ್ತದೆ ಮತ್ತು ನೀವು ಜೀವಿತದ ಓಟದ ಮುಂದೆ ಸಾಗಲು ಸಾಧ್ಯವಾಗುತ್ತದೆ.

## ಐಸ್ ಬ್ರೇಕರ್ ಆಟಗಳು

### ಫ್ರೂಟ್ ಬ್ಯಾಸ್ಕೇಟ್ ಅಪ್ ಸೆಟ್

ಈ ಐಸ್ ಬ್ರೇಕರ್ ನಲ್ಲಿ, ವಿಬಿಎಸ್ ಕಾರ್ಯಕ್ರಮಕ್ಕೆ ಬರುವ ಮಕ್ಕಳ ಹೆಸರುಗಳನ್ನು ತಿಳಿದುಕೊಳ್ಳುವದು ಮುಖ್ಯ ಉದ್ದೇಶವಾಗಿದೆ; ವಿಬಿಎಸ್ ನಲ್ಲಿ ಭಾಗವಹಿಸುವ ಎಲ್ಲರನ್ನೂ ಸೇರಿಸಿಕೊಳ್ಳುವದು ಉತ್ತಮವಾದ ಆಲೋಚನೆಯಾಗಿದೆ. ಮಕ್ಕಳನ್ನು ಸಾಲಾಗಿ ಕೂರಿಸಿದರೆ ಈ ಚಟುವಟಿಕೆಯನ್ನು ನಡೆಸಲು ಯಾವುದೇ ತೊಂದರೆಯಾಗುವದಲ್ಲ.

ಸಾಲಿನಲ್ಲಿರುವ ಪ್ರತಿಯೊಂದು ಮಗು ತನ್ನ ಹೆಸರನ್ನು ಜೋರಾಗಿ ಹೇಳಬೇಕು. ಮೊದಲನೆಯ ಸಾಲು ಮತ್ತು ಕಡೆಯ ಸಾಲಿನಲ್ಲಿರುವ ಮಕ್ಕಳು ಗಮನವಿಟ್ಟು ಕೇಳಿಸಿಕೊಳ್ಳಬೇಕು. ಭಾಗವಹಿಸುವವರಿಗೆ ಟೀಚರ್ ಒಂದು ಹಣ್ಣಿನ ಹೆಸರನ್ನು ಹೇಳುವರು ಅಂದರೆ ಆರೆಂಜ್, ನಿಂಬೆ ಹಣ್ಣು, ಬಾಳಿ ಹಣ್ಣು, ಕಲ್ಲಂಗಡಿ ಅಥವಾ ಹಣ್ಣಿನ ಬುಟ್ಟಿ. ಹಣ್ಣು ಏನನ್ನು ಸೂಚಿಸುತ್ತದೆಯೋ ಅದರ ಪ್ರಕಾರ ಭಾಗವಹಿಸುವವನು ತನ್ನ ಜೊತೆಗಾರನ ಹೆಸರನ್ನು ಹೇಳಬೇಕು.

### ಉದಾಹರಣೆ:

ಆರೆಂಜ್: ಎಂದರೆ ನಿಮ್ಮ ಬಲಗಡೆಯಲ್ಲಿರುವ ಜೊತೆಗಾರನ ಹೆಸರು ಹೇಳಬೇಕು

ನಿಂಬೆ ಹಣ್ಣು: ನಿಮ್ಮ ಎಡಗಡೆಯಲ್ಲಿರುವ ಜೊತೆಗಾರನ ಹೆಸರು ಹೇಳಬೇಕು

ಬಾಳೆ ಹಣ್ಣು: ನಿಮ್ಮ ಹೆಸರು ಹೇಳಬೇಕು

ಕಲ್ಲಂಗಡಿ: ನಿಮ್ಮ ಮುಂದಿರುವ ಮಗುವಿನ ಹೆಸರು ಹೇಳಬೇಕು


ಹಣ್ಣಿನ ಬುಟ್ಟಿ: ಎಲ್ಲರೂ ಸ್ಥಳವನ್ನು ಬದಲಾಯಿಸಬೇಕು

ವಿದ್ಯಾರ್ಥಿಗಳನ್ನು ಅಥವಾ ಭಾಗವಹಿಸುವ ಸಿಬ್ಬಂದಿಗಳನ್ನು ಗುರುತಿಸಲು ನೀವು ಸಾಲುಗಳ ನಡುವೆ ನಡೆಯಬಹುದು. "ಫ್ರೂಟ್ ಬ್ಯಾಸ್ಕೆಟ್ ಅಪ್ ಸೆಟ್" ಎಂದು ಹೇಳುವ ಮೂಲಕ ಎಲ್ಲರನ್ನು ಓಡಾಡುವಂತೆ ಮಾಡುವದು ಅತ್ಯಂತ ಸಂತೋಷದ ಸಂಗತಿಯಾಗಿದೆ.

## ಸತ್ಯವೇದ ಪಾಠ

ಪೇತ್ರನು ಪಶ್ಚಾತ್ತಾಪಪಟ್ಟನು

1. ಪೇತ್ರನು ಯೇಸು ಕ್ರಿಸ್ತನ ಶಿಷ್ಯನಾಗಿದ್ದನು, ಅಂದರೆ ಅವನು ಯೇಸು ಕ್ರಿಸ್ತನಿಂದ ಕಲಿತುಕೊಳ್ಳಲು ಆತನನ್ನು ಹಿಂಬಾಲಿಸುವ ವ್ಯಕ್ತಿಯಾಗಿದ್ದನು. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ, "ಬನ್ನಿರಿ ನನ್ನನ್ನು ಹಿಂಬಾಲಿಸಿರಿ." ಪೇತ್ರನು ಯೇಸು ಕ್ರಿಸ್ತನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. "ನೀನು ದೇವಕುಮಾರನು" ಎಂಬದಾಗಿ ಶಿಷ್ಯರೊಳಗೆ ಮೊದಲು ಹೇಳಿದವನು ಅವನೇ ಆಗಿದ್ದಾನೆ. ಶಿಷ್ಯ ಎಂಬ ಪದ ಹೇಳುವಾಗ: ನಿಮ್ಮ ಕೈಗಳನ್ನು ಮಡಚಿಕೊಂಡು, ಮುಂದಕ್ಕೆ ಚಾಚಿರಿ ಮತ್ತು ಕೆಳಗಿಳಿಸುವಾಗ  ಮಡಚಿಕೊಂಡಿರುವದನ್ನು ತೆಗೆಯಿರಿ.




2. ತನ್ನ ಶಿಷ್ಯರೊಂದಿಗೆ ಮೂರು ವರ್ಷಗಳು ಇದ್ದ ನಂತರ, ನನ್ನನ್ನು ಬಂಧಸುವರು ಮತ್ತು ಕೊಲ್ಲುವರು ಎಂದು ಆತನು ಅವರಿಗೆ ಹೇಳಿದನು. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ, ನೀವು ಓಡಿಹೋಗುವಿರಿ ಮತ್ತು ನನ್ನ ಪರಿಚಯ ಇಲ್ಲವೆಂದು ಹೇಳುವಿರಿ.



ಆದರೆ ಪೇತ್ರನು ಎದ್ದು ನಿಂತು ಹೇಳಿದ್ದೇನಂದರೆ: "ನಾನೆಂದಿಗೂ ನಿನ್ನನ್ನು ಅರಿಯೆನು ಎಂದು ಹೇಳುವದಿಲ್ಲ," ಅವನೊಂದಿಗೆ ಉಳಿದ ಶಿಷ್ಯರು ಸಹ, "ನಾವೆಂದಿಗೂ ನಿನ್ನನ್ನು ಅರಿಯೆವು ಎಂದು ಹೇಳುವದಲ್ಲ" ಎಂಬದಾಗಿ ಹೇಳಿದರು.


ನಾವೆಂದಿಗೂ ಎಂಬ ಪದ ಹೇಳುವಾಗ: ನಿಮ್ಮ ಕೈಗಳನ್ನು ಅರೆ-ವೃತ್ತವಾಗಿ ತಿರುಗಿಸಿರಿ ಮತ್ತು ನಿಮ್ಮ ಕೈಗಳನ್ನು ಬಲಗಡೆಗೆ ಕೆಳಗಿಳಿಸಿರಿ.

3. ಯೇಸು ಕ್ರಿಸ್ತನು ಅವರಿಗೆ ಹೇಳಿದ ಹಾಗೆಯೇ ಮೂರೂ ಕಾರ್ಯಗಳು ನಡೆದವು. ಸಿಪಾಯಿಗಳು ಬಂದರು ಮತ್ತು ಯೇಸು ಕ್ರಿಸ್ತನನ್ನು ಬಂಧಿಸಿದರು. ಶಿಷ್ಯರೆಲ್ಲರೂ ಓಡಿಹೋದರು ಆದರೆ ಯೇಸು ಕ್ರಿಸ್ತನಿಗೆ ಏನಾಗುವದೆಂದು ತಿಳಿಯಲು ಪೇತ್ರನು ದೂರದಿಂದ ಆತನನ್ನು ಹಿಂಬಾಲಿಸಿಕೊಂಡು ಹೋದನು. ಮಹಾಯಾಜಕನ ಮನೆಯಲ್ಲಿ ಯೇಸು ಕ್ರಿಸ್ತನ ವಿಚಾರಣೆ ನಡೆಯುತ್ತಿದ್ದಾಗ, ಪೇತ್ರನು ಹೊರಗೆ ಬಹಳ ಚಳಿ ಇದ್ದರಿಂದ ಬಿಸಿ ಕಾಯಿಸಿಕೊಳ್ಳುತ್ತಿದ್ದನು, ಆಗ ಒಬ್ಬ ಚಾಕರಿಯವಳು, "ನೀನು ಯೇಸು ಕ್ರಿಸ್ತನ ಜೊತೆಯಿದ್ದವನಲ್ಲವೇ?" ಎಂದು ಹೇಳಿದಳು, ಆಗ ಪೇತ್ರನು, "ನೀನು ಏನು ಹೇಳುತ್ತಿರುವೆ ಎಂದು ನನಗೆ ಗೊತ್ತಿಲ್ಲ" ಎಂದು ಹೇಳಿದನು.  ಮತ್ತೊಬ್ಬ ಹುಡುಗಿ ಅಲ್ಲಿದ್ದ ಒಬ್ಬ ವ್ಯಕ್ತಿ ಗಟ್ಟಿಯಾಗಿ ಹೀಗೆ ಹೇಳಿದಳು: "ಯೇಸು ಕ್ರಿಸ್ತನ ಶಿಷ್ಯರಲ್ಲಿ ಇವನೂ ಒಬ್ಬನು," (ನಾನು ಎಂದಿಗೂ ನಿನ್ನನ್ನು ಅಲ್ಲಗಳೆಯುವದಿಲ್ಲ ಎಂಬದಾಗಿ ಹೇಳಿದ್ದರೂ) "ಇಲ್ಲ" ಎಂಬದಾಗಿ ಹೇಳಿದನು. ಇನ್ನು ಕೆಲವು ಸಮಯದ ನಂತರ ಬೇರೆ ಯಾರೋ ಒಬ್ಬರು, "ನೀನು ಖಂಡಿತವಾಗಿಯೂ ಆತನ ಶಿಷ್ಯರಲ್ಲಿ ಒಬ್ಬನು, ನೀನು ಗಲಿಲಾಯದವನು" ಎಂಬದಾಗಿ ಹೇಳಿದರು, ಪೇತ್ರನು ಕೆಲವು ಕೆಟ್ಟ ಮಾತುಗಳನ್ನು ಹೇಳಿದನು ಮತ್ತು "ನೀವು ಹೇಳುತ್ತಿರುವದು ನನಗೆ ಗೊತ್ತಿಲ್ಲ" ಎಂಬದಾಗಿ




ಕೂಗಿಕೊಂಡನು. ನನಗೆ ಗೊತ್ತಿಲ್ಲ ಎಂಬ ಪದ ಹೇಳುವಾಗ: ನಿಮ್ಮ ಬಲಗೈ ಬೆರಳುಗಳನ್ನು ಹಣೆಯ ಮೇಲೆ ಇಟ್ಟುಕೊಳ್ಳಿರಿ ಮತ್ತು ಮೇಲಕ್ಕೆತ್ತಿರಿ.

4. ಆಗ ಕೂಡಲೇ ಕೋಳಿ ಕೂಗಿತು: ಯೇಸು ಕ್ರಿಸ್ತನು ಅವನಿಗೆ ಹೇಳಿದ ಮಾತುಗಳು ಪೇತ್ರನಿಗೆ ನೆನಪಾದವು, "ಕೋಳಿ ಕೂಗುವ ಮೊದಲು ಮೂರು ಸಲ ನೀನು ನನ್ನನ್ನು ಅಲ್ಲಗಳೆಯುವೆ." ಪೇತ್ರನು ಅಳಲು ಪ್ರಾರಂಭಿಸಿದನು ಯಾಕಂದರೆ ಇತರೆ ಶಿಷ್ಯರ ಎದುರಿನಲ್ಲಿ ನಾನು ಎಂದಿಗೂ ಆತನನ್ನು ಅಲ್ಲಗಳೆಯುವದಿಲ್ಲ ಎಂಬದಾಗಿ ಅವನು ಹೇಳಿದ್ದನು. ಆದರೆ ಈಗ ಮೂರು ಸಲ ಆತನನ್ನು ಅಲ್ಲಗಳೆದಿದ್ದನು. ಪೇತ್ರನಿಗೆ ಬಹಳ ದುಃಖವಾಯಿತು. ತಾನು ದೊಡ್ಡ ತಪ್ಪು ಮಾಡಿರುವದಾಗಿ ಪೇತ್ರನಿಗೆ ಅರಿವಾಯಿತು. "ಈಗ ನಾನೇನು ಮಾಡಲಿ? ಏನು ಮಾಡಬೇಕೆಂದೇ ನನಗೆ ಅರ್ಥವಾಗುತ್ತಿಲ್ಲ" ಎಂಬದಾಗಿ ಪೇತ್ರನು ಅಂದುಕೊಂಡಿರಬಹುದು. ಕೋಳಿ ಎಂಬ ಪದ ಬರುವಾಗ: ನಿಮ್ಮ ಬಲಗೈಯ ಹೆಬ್ಬೆರಳನ್ನು ಹಣೆಯ ಮೇಲೆ ಇಟ್ಟುಕೊಳ್ಳಿರಿ ಮತ್ತು ಉಳಿದ ಎರಡು ಬೆರಳುಗಳನ್ನು ಮೇಲಕ್ಕೆತ್ತಿರಿ.



5. ಕೆಲವು ತಾಸುಗಳ ನಂತರ, ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಿದರು. ಪಾಪದ ಕ್ರಯವನ್ನು ಪಾವತಿಸಲು ಆತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟನು. ಶಿಷ್ಯರೆಲ್ಲರೂ ಬಹಳ ದುಃಖದಲ್ಲಿದ್ದರು, ಆದರೆ ಪೇತ್ರನು ಎಲ್ಲಿದ್ದನು? ಅವನು ಬಚ್ಚಿಟ್ಟುಕೊಂಡಿದ್ದನು, ಪಶ್ಚಾತ್ತಾಪಪಟ್ಟಿದ್ದನು ಮತ್ತು ಹೆದರಿಕೊಂಡಿದ್ದನು. ಅವನು ದೊಡ್ಡ ತಪ್ಪು ಮಾಡಿದ್ದನು. ಮೂರು ದಿನಗಳ ನಂತರ, ಯೇಸು ಕ್ರಿಸ್ತನು ಪುನರುತ್ಥಾನಗೊಂಡನು (ಮತ್ತು ಬದುಕಿ ಬಂದನು). ಆತನು ಶಿಲುಬೆಯ ಮೇಲೆ ಇಲ್ಲ, ಸಮಾಧಿಯಲ್ಲಿಯೂ ಇಲ್ಲ, ಯೇಸು ಕ್ರಿಸ್ತನು ಹೇಳಿದ ಮೊದಲನೆಯ ಮಾತು ಏನೆಂದರೆ ಶಿಷ್ಯರಿಗೆ ತಿಳಿಸಿರಿ ಮತ್ತು ನನ್ನನ್ನು ಭೇಟಿಯಾಗುವಂತೆ ಪೇತ್ರನಿಗೆ ಹೇಳಿರಿ. ಶಿಲುಬೆ ಪದ ಬರುವಾಗ: ನಿಮ್ಮ ಬೆರಳುಗಳನ್ನು ಮಡಚಿರಿ ಮತ್ತು ಹೆಬ್ಬೆರಳನ್ನು ನೇರ ಮಾಡಿ, ಶಿಲುಬೆಯನ್ನು ರೂಪಿಸಿರಿ, ಮೊದಲು ಮೇಲಿನಿಂದ ಕೆಳಗೆ ನಂತರ ಎಡದಿಂದ ಬಲಕ್ಕೆ.



6. "ಅಬ್ಬಾ, ಈಗ ಸರಿ," ಎಂದು ಪೇತ್ರನು ಹೇಳಿದನು ಮತ್ತು ಸಮಾಧಾನದ ಉಸಿರು ಬಿಡಲಾರಂಭಿಸಿದನು. ಪೇತ್ರನು ಯೇಸು ಕ್ರಿಸ್ತನ ಪ್ರಸನ್ನತೆಯಲ್ಲಿರುವಾಗ ಹೆಚ್ಚು ಆನಂದವುಳ್ಳವನಾಗಿದ್ದನು. ಅಷ್ಟು ದಿವಸಗಳಲ್ಲಿ ಪೇತ್ರನು, "ಏನು ಮಾಡಬೇಕೆಂದೇ ನನಗೆ ಗೊತ್ತಾಗುತ್ತಿಲ್ಲ" ಎಂಬದಾಗಿ ಅಂದುಕೊಳ್ಳುತ್ತಿದ್ದನು. ಗಲಿಲಾಯದಲ್ಲಿದ್ದಾಗ ಒಂದು ದಿನ ಪೇತ್ರನು ಉಳಿದ ಶಿಷ್ಯರಿಗೆ, ನಾನು ಮೀನು ಹಿಡಿಯಲು ಹೋಗುತ್ತಿದ್ದೇನೆ ಎಂದು ಹೇಳಿದನು, ಆಗ ಅವರೆಲ್ಲರೂ ಅವನ ಜೊತೆಯಲ್ಲಿ ಹೋದರು. ಅವರು ನದಿಗೆ ಹೋದರು ಮತ್ತು ಇಡೀ ರಾತ್ರಿ ಬಲೆ ಬೀಸಿ ಮೀನುಗಳಿಗಾಗಿ ಕಾಯುತ್ತಿದ್ದರು ಆದರೆ ಒಂದು ಮೀನೂ ಅವರಿಗೆ ಸಿಗಲಿಲ್ಲ. ದಡದಲ್ಲಿದ್ದ ಯಾರೋ ಒಬ್ಬರು ಅವರಿಗೆ ಬಲಗಡೆಗೆ ಬಲೆ ಬೀಸಿರಿ ಎಂದು ಹೇಳಿದರು (ಬಹಳ ಕತ್ತಲಾಗಿದ್ದರಿಂದ, ಹೇಳಿದವರು ಯಾರು ಎಂದು ಅವರಿಗೆ ಗೊತ್ತಾಗಲಿಲ್ಲ). ಅವರು ಬಲಗಡೆಗೆ ಬಲೆ ಬೀಸಿದಾಗ ಅವರಿಗೆ ರಾಶಿ ರಾಶಿ ಮೀನುಗಳು ಸಿಕ್ಕಿದವು. ಮೀನು ಎಂಬ ಪದ ಬರುವಾಗ, ನಿಮ್ಮ ಕೈಗಳನ್ನು ಮಡಚಿರಿ, ಎಡಗೈಯನ್ನು ಬಲಗೈಯ ಮೇಲಿಟ್ಟು ಮೇಲಿಂದ ಕೆಳಗೆ ಅವುಗಳನ್ನು ಆಡಿಸಿರಿ.









7. “ಅವರು ಸ್ವಾಮಿಯವರು” ಎಂಬದಾಗಿ ಯೋಹಾನನು ಹೇಳಿದನು. ಪೇತ್ರನು ಅದನ್ನು ಕೇಳಿಸಿಕೊಂಡಾಗ, ಸಮುದ್ರದೊಳಗೆ ಧುಮುಕಿದನು ಮತ್ತು ಈಜುತ್ತಾ ಯೇಸು ಕ್ರಿಸ್ತನ ಬಳಿಗೆ ಹೋದನು. ನಾನು ಕ್ಷಮಿಸಿರುವದು ಪೇತ್ರನಿಗೆ ಗೊತ್ತಾಗಬೇಕೆಂದು ಯೇಸು ಕ್ರಿಸ್ತನು ಬಯಸಿದನು. ಯೇಸು ಕ್ರಿಸ್ತನು ಪೇತ್ರನಿಗೆ ಹೇಳಿದ್ದೇನೆಂದರೆ, “ನನ್ನ ಕುರಿಮರಿಗಳನ್ನು ಮೇಯಿಸು, ಕುರಿಗಳನ್ನು ಕಾಯಿ.” ಯೇಸು ಕ್ರಿಸ್ತನು ಪೇತ್ರನಿಗೆ ತೋರಿಸಿದ ಪ್ರೀತಿಯನ್ನು ಅವನು ಇತರರಿಗೆ ಹೇಳಬೇಕೆಂದು ಅತನು ಬಯಸಿದನು. ಪೇತ್ರನೊಂದಿಗೆ ಯೇಸು ಕ್ರಿಸ್ತನ ಕಾರ್ಯಗಳು ಮುಗಿದಿರಲಿಲ್ಲ, ಅವನು ತನ್ನ ಜೀವಿತದಲ್ಲಿ ಇನ್ನೂ ಪ್ರಾಮುಖ್ಯವಾದ ಕಾರ್ಯಗಳನ್ನು ಮಾಡಬೇಕಾಗಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ, ಯೇಸು ಕ್ರಿಸ್ತನು ನನ್ನನ್ನು ಕ್ಷಮಿಸಿದ್ದಾನೆ ಮತ್ತು ನಾನು ಹೊಸ ಜೀವಿತವನ್ನು ಪ್ರಾರಂಭಿಸಬಹುದು ಎಂಬದನ್ನು ಪೇತ್ರನು ಅರಿತುಕೊಂಡಿದ್ದನು. ಕ್ಷಮಾಪಣೆ ಪದ ಬರುವಾಗ: ನಿಮ್ಮ ಎಡಗೈ ಬೆರಳುಗಳನ್ನು ಬಲಗೈ ಮೇಲೆ ಇಡಿರಿ.



8. ಈ ಕಥೆಯನ್ನು ನೀವು ನಿಮ್ಮ ಜೀವಿತಕ್ಕೆ ಅಳವಡಿಸಕೊಳ್ಳಬಹುದು ಯಾಕಂದರೆ, ಪೇತ್ರನ ಹಾಗೆ ನೀವು ಆತನ ಶಿಷ್ಯನಾಗಿದ್ದೀರಿ ಮತ್ತು ಆತನನ್ನು ಹಿಂಬಾಲಿಸುವವರಾಗಿದ್ದೀರಿ. ನಿಮ್ಮ ಪಾಪಗಳನ್ನು ಯೇಸು ಕ್ರಿಸ್ತನ ಎದುರಿನಲ್ಲಿ ಅರಿಕೆ ಮಾಡಿಕೊಳ್ಳಲು ಇನ್ನೂ ಸಮಯ ಇದೆ. “ಏನು ಮಾಡಬೇಕೆಂದೇ ನನಗೆ ಗೊತ್ತಿಲ್ಲ” ಎಂದು ನೀವು ಹೇಳಿದರೂ, ಯಾವುದನ್ನೂ ಮರೆಮಾಡದಿರುವದು ಮತ್ತು ಸುಳ್ಳು ಹೇಳದಿರುವದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ನಿಮ್ಮ ಪಾಪವನ್ನು ನಿಮಗೆ ಜ್ಞಾಪಕಪಡಿಸಲು ಬಹುಶಃ ನಿಮ್ಮ ಪಕ್ಕದಲ್ಲಿ ಕೋಳಿ ಇಲ್ಲದಿರಬಹುದು, ಆದರೆ ನಿಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸಲು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟನು ಎಂಬದು ಈಗ ನಿಮಗೆ ಗೊತ್ತಾಯಿತು. ಈಗ ನೀವು ಮನುಷ್ಯರನ್ನು ಹಿಡಿಯುವ ಬೆಸ್ತರಾಗಬೇಕೆಂದು ಆತನು ಬಯಸುತ್ತಾನೆ. ಯೇಸು ಕ್ರಿಸ್ತನು ಸಂತೋಷವುಳ್ಳವನಾಗಿ ನಿಮ್ಮನ್ನು ಕ್ಷಮಿಸುವದು ಅರಿಕೆಯಿಂದ ಉತ್ತಮ ಭಾಗವಾಗಿದೆ.

(ಎಲ್ಲಾ ಕ್ರಿಯೆಗಳು)

## ಪುನರಾವರ್ತನೆಯ ಠಾಣೆಗಳು

ಠಾಣೆಗಳಿಗೆ ಕಳುಹಿಸಲು 3 ಗುಂಪುಗಳನ್ನು ಮಾಡಿರಿ

### ಗ್ಯಾರೇಜ್ ಕರಕುಶಲತೆಗಳು

ಮೋಟೋಕ್ರಾಸ್ ಟ್ರ್ಯಾಕ್

ಪ್ರತಿಯೊಬ್ಬ ವಿದ್ಯಾರ್ಥಿಗೆ ಹಂಚಿರಿ:

ದಾರಿಯನ್ನು ಮುದ್ರಿಸಿರುವ 1 ಹಾಳೆ

ಸ್ವಲ್ಪ ಮರಳು ಮತ್ತು/ಅಥವಾ ಗ್ಲಿಟ್ಟರ್




- ಸಮವಾದ ಚತುಷ್ಕೋನಾಕೃತಿಯಲ್ಲಿ ಹಾಳೆಯನ್ನು ಮತ್ತು ಮೋಟರ್ ಸವಾರರ ಚಿತ್ರವನ್ನು ಕತ್ತರಿಸಿರಿ.
- ಚತುಷ್ಕೋನಾಕೃತಿಯ ಹಾಳೆಯನ್ನು ಗೆರೆಗನುಸರವಾಗಿ ಒಂದು ದಿಕ್ಕಿಗೆ ಮಡಚಿ, ಪ್ರತಿಯೊಂದು ಚತುಷ್ಕೋನಾಕೃತಿಗೆ ಎರಡು ಟ್ಯಾಬ್ ಗಳನ್ನು ಮಾಡಿರಿ.
- ಬಾಗಿರುವ ಟ್ಯಾಬ್ ಗೆ ಗ್ಲೂ ಹಾಕಿರಿ ಮತ್ತು ಸಣ್ಣ ಆಣೆಕಟ್ಟು ಮಾಡುವ ಮೂಲಕ ನಿಮ್ಮ ಮಾರ್ಗಕ್ಕೆ ಎಲ್ಲಿ ಬೇಕೋ ಅಲ್ಲಿಗೆ ಅಂಟಿಸಿರಿ.







- ನಿಮ್ಮ; ಇಡೀ ಟ್ರ್ಯಾಕ್ ಮೇಲೆ ಸ್ವಲ್ಪ ಗ್ಲೂ ಹಾಕಿರಿ, ನಂತರ ಮರಳು ಮತ್ತು/ಅಥವಾ ಗ್ಲಿಟ್ಟರ್ ಅನ್ನು ಗ್ಲೂ ಮೇಲೆ ಹಾಕಿ ಮೋಟೋಕ್ರಾಸ್ ಟ್ರ್ಯಾಕ್ ಮಾಡಿರಿ.
- ಅಂತಿಮವಾಗಿ, ಮೋಟರ್ ಸವಾರರಿಗೆ ಬಣ್ಣ ಹಚ್ಚಿರಿ, ಅವುಗಳೊಂದಿಗೆ ಆಟವಾಡಿರಿ ಅಥವಾ ನಿಮ್ಮ ಟ್ರ್ಯಾಕ್ ಗೆ ಅಂಟಿಸಿರಿ.

## ಸ್ನಾಕ್ (ತಿಂಡಿ) ಸ್ಟ್ಯಾಂಡ್

### ಚಾಕೊಲೇಟ್ ಕಡಬು/ಕಸ್ಟರ್ಡ್ ವಿತ್ ಕುಕ್ಕೀಸ್



ಸಾಮಗ್ರಿಗಳು:

- ಚಾಕೊಲೇಟ್ ಕಡಬು/ಕಸ್ಟರ್ಡ್
- ಕುಕ್ಕೀಸ್
- ಪ್ಲಾಸ್ಟಿಕ್ ಸ್ಪೂನ್

ಸೂಚನೆಗಳು:

1. ಚಾಕೊಲೇಟ್ ಕಡಬು/ಕಸ್ಟರ್ಡ್ ತೆಗೆಯಿರಿ
2. ಕುಕ್ಕೀಸ್ ಪ್ಯಾಕೆಟ್ ತೆರೆಯಿರಿ
3. ಕುಕ್ಕೀಸ್ ಗಳನ್ನು ಚಿಕ್ಕ ತುಂಡುಗಳಾಗಿ ಮುರಿಯಿರಿ
4. ಕುಕ್ಕೀಸ್ ತುಂಡುಗಳನ್ನು ಕಸ್ಟರ್ಡ್ ನಲ್ಲಿ ಹಾಕಿರಿ
5. ಕಡಬು/ಕಸ್ಟರ್ಡ್ ನಲ್ಲಿರುವ ಕುಕ್ಕೀಸ್ ತುಂಡುಗಳನ್ನು ಚಮಚದಿಂದ ಕಲಸಿರಿ.

ಈಗ ನೀವು ಮುಂದಿನ ಸಾಲಿನಲ್ಲಿರುವವರಂತೆ ಧೂಳು ತಿನ್ನುತ್ತಾ ಸಂತೋಷಿಸಬಹುದು!!!

## ಡ್ರೈವಿಂಗ್ ಕ್ಲಾಸ್

"ಡ್ರೈವಿಂಗ್ ಕ್ಲಾಸ್" ಗೆ ಸ್ವಾಗತ, ಇಲ್ಲಿ ನಾವು ನಮ್ಮ ವಿದ್ಯಾರ್ಥಿಗಳ ಪುಸ್ತಕದನುಸಾರ ಕಾರ್ಯಗಳನ್ನು ಮಾಡೋಣ. ಈ ದಿನದ ವಾಕ್ಯ ಮತ್ತು ಪಾಠದ ಹೆಸರನ್ನು ಗಟ್ಟಿಯಾಗಿ ಹೇಳುವ ಮೂಲಕ ನಾವು ತರಗತಿಯನ್ನು ಪ್ರಾರಂಭಿಸೋಣವೇ? ಪ್ರಾರಂಭಿಸೋಣ!!!


ಪ್ರಶ್ನೆಗಳು ಮತ್ತು ಉತ್ತರಗಳು

1. ಒಂದುವೇಳೆ ನಾನು ಪಶ್ಚಾತ್ತಾಪಪಡಲಿಲ್ಲವೆಂದರೆ ಏನಾಗುತ್ತದೆ?
   ನಿಮ್ಮ ಹೃದಯದಲ್ಲಿ ಸಮಾಧಾನ ಇರುವದಿಲ್ಲ ಯಾಕಂದರೆ ದೇವರು ತನ್ನ ವಾಕ್ಯದಲ್ಲಿ ಪಶ್ಚಾತ್ತಾಪಪಡಿರಿ ಎಂದು ಹೇಳಿದ್ದಾನೆ ಮತ್ತು ಆತನು ನಮ್ಮನ್ನು ಕ್ಷಮಿಸುತ್ತಾನೆ ಹಾಗೂ ಸತ್ಯವೇದದಲ್ಲಿ ಹೇಳಿರುವ ಪ್ರಕಾರ ಶುದ್ಧೀಕರಿಸುತ್ತಾನೆ.
2. ನಾನು ಯಾವ ಸ್ಥಳದಲ್ಲಾದರೂ, ಯಾವ ಸಮಯದಲ್ಲಾದರೂ ಕ್ಷಮಾಪಣೆ ಕೇಳಬಹುದೇ?
   ಖಂಡಿತವಾಗಿಯೂ, ಇದು ನಾವು ಮಾಡಬಹುದಾದ ಅತ್ಯುತ್ತಮವಾದ ಕಾರ್ಯವಾಗಿದೆ. ನೀವು ಶಾಲೆಯಲ್ಲಿರಬಹುದು ಅಥವಾ ಸ್ನೇಹಿತನ ಮನೆಯಲ್ಲಿರಬಹುದು, ನೀವು ಎಲ್ಲೇ ಇದ್ದರೂ ದೇವರು ನಿಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ.
3. ನಾನು ಜನರ ಬಳಿಗೆ ಕ್ಷಮಾಪಣೆ ಕೇಳುವಾಗ ಒಂದುವೇಳೆ ಅವರು ನನ್ನನ್ನು ಕ್ಷಮಿಸದಿದ್ದರೆ ನಾನೇನು ಮಾಡಬೇಕು?
   ಇತರರ ಕಾರ್ಯಗಳಿಗೆ ನೀವು ಜವಾಬ್ದಾರರಾಗುವದಿಲ್ಲ, ನೀವೇನು ಮಾಡುತ್ತೀರೋ ಅದಕ್ಕೆ ಮಾತ್ರವೇ ನೀವು ಜವಾಬ್ದಾರರಾಗಿರುವಿರಿ.
4. ಪೇತ್ರನು ಎಲ್ಲಿನವನಾಗಿದ್ದನು?
   ಪೇತ್ರನು ಗಲಿಲಾಯದವನಾಗಿದ್ದನು.

5. **ಪೇತ್ರನು ಯೇಸು ಕ್ರಿಸ್ತನ ಶಿಷ್ಯನಾಗುವ ಮೊದಲು ಯಾವ ಕೆಲಸ ಮಾಡುತ್ತಿದ್ದನು?**


**ಮೀನುಗಾರನಾಗಿದ್ದನು**

## ಡ್ರೈವಿಂಗ್ ಕ್ಲಾಸ್ ಉತ್ತರಗಳು



### ಈ ಚಿತ್ರಗಳಿಗನುಸಾರವಾಗಿ ಪ್ರಾರ್ಥನೆ ಹೇಗಿದೆ?

ಮೊಬೈಲ್ ಫೋನ್



ಫೋನ್ ಕಾಲ್ ಮಾಡುವ ಹಾಗೆ, ನಾನು ಪ್ರಾರ್ಥನೆಯ ಮೂಲಕ ದೇವರ ಸಂಗಡ ಮಾತನಾಡುತ್ತೇನೆ. ದೇವರು ನನಗೆ ವಾಕ್ಯ ಸಂದೇಶವನ್ನು ಕಳುಹಿಸುವನು ಮತ್ತು ನಾನು ಆತನ ವಾಕ್ಯ ಸಂದೇಶವನ್ನು ನನ್ನ ಸತ್ಯವೇದದಲ್ಲಿ ಓದುವೆನು. ಒಂದುವೇಳೆ ನನಗೆ ಏನೂ ಅನ್ನಿಸದಿದ್ದರೂ, ಸಂದೇಶವನ್ನು ಕಳುಹಿಸಬಹುದು. ಆತನು ಅದನ್ನು ಅಂಗೀಕರಿಸಕೊಳ್ಳುತ್ತಾನೆ.

ಸಿಂಕ್



1 ಯೋಹಾನ 1:9 ನಾನು ನನ್ನ ಪಾಪಗಳನ್ನು ಅರಿಕೆಮಾಡಿಕೊಂಡು ಶುದ್ಧನಾಗಬಹುದು. ಆತ್ಮೀಕವಾದ ಬಾಯಾರಿಕೆಯಿರುವಾಗ, ಪ್ರಾರ್ಥನೆಯ ಮೂಲಕ ನಾನು ಆತನ ಬಳಿಗೆ ಹೋಗಬಹುದು.

ಎಲೆಕ್ಟ್ರಿಕ್ ಕೇಬಲ್



ಕನೆಕ್ಟ್ ಮಾಡುವ ತನಕ ಅದರಿಂದ ಯಾವುದೇ ಪ್ರಯೋಜನವಿರುವದಿಲ್ಲ. ಪ್ರಾರ್ಥನೆಯ ಮೂಲಕ ದೇವರೊಂದಿಗೆ ಕನೆಕ್ಟ್ ಆಗುವಾಗ, ಅದುವೇ ನನಗೆ ಬಲವನ್ನು ಕೊಡುತ್ತದೆ.

ಕೋಳಿ



ಪೇತ್ರನೊಂದಿಗೆ ಮಾತನಾಡಿದ ಹಾಗೆ, ಯಾವುದರ ಮೂಲಕವಾದರೂ ದೇವರು ನನ್ನ ಸಂಗಡ ಮಾತನಾಡುತ್ತಾನೆ.




ಆಕೆ ಯಾವ ವಿಷಯದಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಳೆ ಮತ್ತು ಕ್ಷಮಾಪಣೆ ಬೇಡಿಕೊಳ್ಳುತ್ತಿದ್ದಾಳೆ? ನಿಮ್ಮ ಆಲೋಚನೆಗನುಸಾರವಾಗಿ ಚಿತ್ರ ಬಿಡಿಸಿರಿ.



| | | | | | | | | |
|---|---|---|---|---|---|---|---|---|
| ಜ | ಣ್ಣ್ | ಶ್ಚಾ | ಲ್ಲ | ಗ | ಮೀ | ವ್ | ಪ್ರೀ | ತ್ರ |
| ರ್ | ಯೇ | ಸು | ಕ್ರಿ | ಸ್ತ | ನು | ಸ | ಯ | ವ್ |
| ಪೇ | ಹ | ಖ | ಉ | ದ | ತ್ತ | ಭ | ಮೂ | ಹಾ |
| ತ್ರ | ಕ್ರಿ | ಕ | ಳೆ | ಪ | ಕ್ರಿ | ಶು | ಭ | ರು |
| ದ | ಡಿ | ಗ | ಯ್ | ಶ್ಚಾ | ಹಾ | ಖ | ಬೆಂ | ಕಿ |
| ಳಿ | ಲ್ಲ | ಶ್ರ | ಮೆ | ತ್ತಾ | ಮೂ | ರ | ಅ | ಭ್ |
| ಅ | ಲ್ಲ | ಕೋ | ಕ್ರಿ | ಪ | ಸ್ತ | ಣೆ | ಪ್ರೀ | ನು |
| ಮೀ | ಫೂ | ಳಿ | ಫ | ಜ್ಞ | ದೋ | ಮೀ | ಕ್ | ತಿ |

## ರೆಡಿ, ಸೆಟ್, ಆಟಗಳು!


**ಕ್ರಾಶ್ ರೇಸ್ (ವ್ಯಕ್ತಿಗತವಾದ ಆಟಗಳು)**




ಎಲ್ಲಾ ತಂಡಗಳು ಭಾಗವಹಿಸಬಹುದು. ಪ್ರತಿಯೊಂದು ತಂಡದಿಂದ ಒಂದು ಮಗುವನ್ನು ಆಯ್ಕೆಮಾಡಬೇಕು ಆತನು ಇತರರನ್ನು ಟ್ಯಾಗ್ ಮಾಡಬೇಕು. ಒಂದು ಮಗುವನ್ನು ಎಲಿಮಿನೇಟ್ ಮಾಡಲು, ಎರಡು ಸಲ ಟ್ಯಾಗ್ ಮಾಡಬೇಕು. ಶಿಕ್ಷಕರು "ಗೋ" ಎಂದು ಹೇಳುವಾಗ, ಆರಿಸಲ್ಪಟ್ಟಿರುವ ಮಗು ಟ್ಯಾಗ್ ಮಾಡಲು ಎಲ್ಲರನ್ನು ಮುಟ್ಟಲು ಪ್ರಯತ್ನಿಸಬೇಕು, ಇದಾದ ನಂತರ, ಟ್ಯಾಗ್ ಆಗಿರವ ಮಗು ತನಗೆ ಎಲ್ಲಿ ಟ್ಯಾಗ್ ಮಾಡಲಾಗಿದೆಯೋ ಅಲ್ಲಿ ಕೈಯನ್ನು ಇಡಬೇಕು. ಉದಾಹರಣೆಗೆ: ಒಂದುವೇಳೆ ಬೆನ್ನ ಮೇಲೆ ಅಥವಾ ಕಾಲ ಮೇಲೆ ಟ್ಯಾಗ್ ಆಗಿದ್ದರೆ, ಆ ಮಗು ತನ್ನ ಬೆನ್ನು ಅಥವಾ ಕಾಲಿನ ಮೇಲೆ ಕೈಯಿಟ್ಟುಕೊಂಡು ಓಡುವದನ್ನು ಮುಂದುವರೆಸಬೇಕು ಮತ್ತು ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕು. ಅವರ ಕೈಗಳು ಸ್ವತಂತ್ರವಾಗಿರುವ ತನಕ ಅವರು ಆಟದಲ್ಲಿ ಮುಂದುವರೆಯಬಹುದು. ಎರಡನೆ ಸಲ ಟ್ಯಾಗ್ ಆದರೆ ಮಗು ಎಲಿಮಿನೇಟ್ ಆಗುತ್ತದೆ. ನಂತರ ಎಲ್ಲಿ ಟ್ಯಾಗ್ ಆಗಿರುತ್ತಾರೋ ಅಲ್ಲಿ ತಮ್ಮ ಇನ್ನೊಂದು ಕೈಯನ್ನು ಇಡಬೇಕು ಮತ್ತು ಆಟ ಮುಗಿಯುವ ತನಕ ಅಲುಗಾಡದೆ ಹಾಗೆಯೇ ನಿಂತಿರಬೇಕು. ಯಾರು ಎಲಿಮಿನೇಟ್ ಆಗುವದಿಲ್ಲವೋ ಅವರೇ ವಿನ್ನರ್. ಗೆಲ್ಲುವ ತಂಡಕ್ಕೆ ಅಂಕಗಳು ಸಿಗುತ್ತವೆ.

**ಬಾಲ್ ರೇಸ್ (ತಂಡಗಳಿಗೆ ಆಟ)**

1. ವಿಬಿಎಸ್ ತಂಡಗಳು ನಾಯಕನನ್ನು ಆಯ್ಕೆ ಮಾಡಿಕೊಳ್ಳಬೇಕು.
2. ಪ್ರತಿಯೊಂದು ತಂಡದ ಸದಸ್ಯರು ಒಂದೊಂದು ಹೆಜ್ಜೆ ಅಂತರದಲ್ಲಿ ಸಾಲಾಗಿ ನಿಲ್ಲಬೇಕು. ನಾಯಕನು ಎರಡು ಹಜ್ಜೆ ಅಂತರದಲ್ಲಿ ಮುಂದೆ ನಿಲ್ಲಬೇಕು.
3. ಪ್ರತಿಯೊಬ್ಬ ನಾಯಕನಿಗೆ ಬಾಲ್ (ಚೆಂಡು) ಕೊಡಲಾಗುವದು (ಉದಾಹರಣೆಗೆ ಪೇಪರ್ ಚೆಂಡು)
4. ಪ್ರಾರಂಭದ ಸ್ಥಳದಲ್ಲಿ ಕೆಲವು ಮೀಟರ್ ದೂರದಲ್ಲಿ ಮಾರ್ಕರ್ ಇಡಿರಿ (ಉದಾಹರಣೆಗೆ, ಖುರ್ಚಿ), ಓಡುವಾಗ ಅವರು ಅದನ್ನು ಸುತ್ತಿ ಬರಬೇಕು.
5. ನಾಯಕನು ಸಾಲಿನಲ್ಲಿ ನಿಂತಿರುವ ಮೊದಲನೆಯ ಸದಸ್ಯನಿಗೆ ಚೆಂದು ಎಸೆಯುವಾಗ ಆಟ ಪ್ರಾರಂಭವಾಗುತ್ತದೆ. ಆ ವ್ಯಕ್ತಿ ನಿಗದಿಪಡಿಸಲಾಗಿರುವ ಗುರಿ ಅಥವಾ ಮಾರ್ಕರ್ ಕಡೆಗೆ ಚೆಂಡನ್ನು ಹಿಡಿದು ಓಡಬೇಕು, ಮತ್ತು ಮಾರ್ಕರ್ ಸುತ್ತಿಕೊಂಡು ಬರಬೇಕು. ಅವನು ತನ್ನ ತಂಡದವರೊಂದಿಗೆ ಸಾಲಿಗೆ ಮರಳುವಾಗ, ಚೆಂಡನ್ನು ನಾಯಕನಿಗೆ ಎಸೆಯಬೇಕು. ನಂತರ ಕುಳಿತುಕೊಳ್ಳಬೇಕು.
6. ನಾಯಕನು ತಂಡದಲ್ಲಿರುವ ಎಲ್ಲಾ ಸದಸ್ಯರಿಗೆ ಇದೇ ಪ್ರಕಾರ ಚೆಂಡನ್ನು ಎಸೆಯಬೇಕು. ತಂಡದವರೆಲ್ಲರೂ ಕುಳಿತುಕೊಂಡ ನಂತರ, ಆತನು ಸಹ ಮಾರ್ಕರ್ ಸುತ್ತ ಓಡಬೇಕು.
7. ತಂಡದ ನಾಯಕನು ಬಂದು ಸಾಲಿನಲ್ಲಿ ಕುಳಿತುಕೊಳ್ಳುವಾಗ ಆಟವು ಕೊನೆಗೊಳ್ಳುತ್ತದೆ.
8. ಯಾವ ತಂಡ ಮೊದಲು ಮುಗಿಸುತ್ತದೋ ಅವರೇ ವಿನ್ನರ್.



ಮತ್ತೊಮ್ಮೆ ಆಡಲು, ಪ್ರತಿಯೊಂದು ತಂಡದಲ್ಲಿಯೂ ಹೊಸ ನಾಯಕರನ್ನು ನೇಮಕ ಮಾಡಿರಿ.

## ಮುಕ್ತಾಯ

ನಮ್ಮ ರಜಾದಿನಗಳ ಸತ್ಯವೇದ ಶಾಲೆಯ ಮೊದಲನೆಯ ದಿನವು ಅದ್ಭುತವಾಗಿ ಕೊನೆಗೊಂಡಿದೆ! ನಾವು ಅತ್ಯಂತ ಸುಮಧುರವಾದ ಸಮಯವನ್ನು ಕಳೆದಿದ್ದೇವೆ ಮತ್ತು ಪೇತ್ರನು ಒತ್ತಡಕ್ಕೆ ಒಳಗಾಗಿ ತನ್ನ ಕರ್ತನನ್ನು ನಿರಾಕರಿಸುವ ತಪ್ಪು ಮಾಡಿದ್ದರ ಬಗ್ಗೆ ಕಲಿತುಕೊಂಡಿದ್ದೇವೆ. ಆದರೆ ಅವನು ತನ್ನ ಪಾಪವನ್ನು ಒಪ್ಪಿಕೊಂಡು ಅರಿಕೆ ಮಾಡುವ ಮೂಲಕ ಅದನ್ನು ಜಯಿಸಿದನು. ನಾವೆಲ್ಲವೂ ಪೇತ್ರನಿಂದ ಕಲಿತುಕೊಳ್ಳಬಹುದು ಮತ್ತು ನಮ್ಮ ತಪ್ಪುಗಳನ್ನು ಅರಿತುಕೊಳ್ಳಬೇಕು ಹಾಗೂ ನಮ್ಮ ಪಾಪಗಳನ್ನು ಸತತವಾಗಿ ಅರಿಕೆ

ಮಾಡಿಕೊಳ್ಳುವವರಾಗಿರಬೇಕು. ಈ ರೀತಿಯಲ್ಲಿ, ನಾವು ನಮ್ಮ ಇಂಜಿನ್ ಗಳಲ್ಲಿ “ಆಯಿಲ್” ಅನ್ನು ನೂತನವಾಗಿಟ್ಟುಕೊಳ್ಳಲು ಮತ್ತು ಜೀವಿತದ ಓಟದಲ್ಲಿ ಓಡಿ ಗೆಲ್ಲಲು ಸಾಧ್ಯವಾಗುತ್ತದೆ

2

# ದೇವರಿಗೆ ವಿಧೇಯರಾಗುವದು



**ಸತ್ಯವೇದ ಕಥೆ: ನೋಹ ವಿಧೇಯನಾದನು / ಆದಿಕಾಂಡ 6:9-14, 7:1-24**

## ವಾಕ್ಯ

"ನಾವು ದೇವರ ಆಜ್ಞೆಗಳನ್ನು ಕೈಗೊಂಡು ನಡೆದರೆ ಅದರಿಂದಲೇ ಅವರ ಅರಿವು ನಮಗಿದೆ ಎಂದು ಖಚಿತವಾಗುತ್ತದೆ." ೧ ಯೊವಾನ್ನನು 2:3

## ನಾಟಕ

ಬದಲಾವಣೆ

- ಮೆಕಾನಿಕ್ ಟೇಬಲ್ ಮುಂದೆ ಕುಳಿತಿದ್ದಾನೆ, ಅವನ ಹೆಂಡತಿ ತಿಂಡಿ ಬಡಿಸುತ್ತಿದ್ದಾಳೆ, ಆಗ ಅವನ ಮಗಳು ಮನೆಯೊಳಗೆ ಬರುತ್ತಾಳೆ. ಆ ಹುಡುಗಿಗೆ ಸಹಜವಾಗಿ ತುಂಟತನ ಜಾಸ್ತಿ, ಅವಳು ಎಲ್ಲರಿಗೂ ಹೈ ಫೈ ಕೊಡುತ್ತಾಳೆ ಮತ್ತು ಅವರೆಲ್ಲರೂ ಒಟ್ಟಾಗಿ ಫ್ರೀಜ್ ಆಗುತ್ತಾರೆ.
- ಆಗ ಪ್ರಕಟಿಸುವವನು ಒಳಗೆ ಬಂದು, ಮೆಕಾನಿಕ್ ಮತ್ತು ಅವನ ಹೆಂಡತಿಗೆ ಗೊತ್ತಿರದ ಒಂದು ಸಂಗತಿ ಇದೆ ಏನೆಂದರೆ ನಾವು ತುಂಟಳಾಗಿದ್ದ ಅವರ ಮಗಳನ್ನು ಒಳ್ಳೆಯವಳಾಗಿ, ಕ್ರೈಸ್ತಳಾಗಿ ಬದಲಾಯಿಸಿದ್ದಾರೆ. ನಂತರ ಅವನು ಹೇಳಿದ್ದೇನೆಂದರೆ, "ನಾವು ಬದಲಾವಣೆಯನ್ನು ನೋಡೋಣ." ಮೆಕಾನಿಕ್ ಮತ್ತು ಅವನ ಕುಟುಂಬದವರು ಅನ್ ಫ್ರೀಜ್ ಆಗಿ ನಾಟಕದೊಂದಿಗೆ ಮುಂದುವರೆಯುತ್ತಾರೆ.
- ತಾಯಿ ಮೊದಲು ತನ್ನ ಮಗಳ ಬಟ್ಟೆಗಳನ್ನು ಗಮನಿಸುತ್ತಾಳೆ. ಶಾಲೆಯಲ್ಲಿ ನಿನಗೆ ಹೊಸ ಬಟ್ಟೆಗಳನ್ನು ಹಾಕಿಕೊಂಡು ಬರಲು ಹೇಳಿದ್ದಾರೆಯೇ ಎಂದು ವಿಚಾರಿಸುತ್ತಾಳೆ. ಅಲ್ಲದೆ ನಿನ್ನ ಮೂಗುತಿ ಮತ್ತು ಸಹಜವಾಗಿ ನೀನು ಹಾಕಿಕೊಳ್ಳುತ್ತಿದ ಬಟ್ಟೆ ಎಲ್ಲಿ ಎಂಬದಾಗಿಯೂ ಕೇಳುತ್ತಾಳೆ. ಮಗಳು ತನ್ನ ತಂದೆಗೆ ದಿನಪತ್ರಿಕೆ ಮತ್ತು ಕಾಫಿ ತಂದುಕೊಡುತ್ತಾಳೆ.
- ಮಗಳು ತಾನು ಹೋಮ್ ವರ್ಕ್ ಬರೆದು ಮುಗಿಸಿರುವದನ್ನು ಮತ್ತು ಪರೀಕ್ಷೆಗಳಿಗಾಗಿ ಓದಿಕೊಂಡದ್ದನ್ನು ಹೇಳುತ್ತಾಳೆ. ಆಗ ಮೆಕಾನಿಕ್ ಏನಾದರು ತೆಗೆದುಕೊಳ್ಳಲು ಹಣ ಬೇಕೇ ಎಂದು ಕೇಳುತ್ತಾಳೆ, ಆಕೆ ಬೇಡ ಎಂದು ಹೇಳುತ್ತಾಳೆ.
- ತಂದೆತಾಯಿಗಳು ಈಗ ತಮ್ಮ ಮಗಳನ್ನು ಎಷ್ಟು ಇಷ್ಟಪಡುತ್ತಿದ್ದಾರೆ ಮತ್ತು ಆಕೆಯಿಂದ ಎಷ್ಟು ಸಂತೋಷವಾಗಿದ್ದಾರೆ ಎಂಬದಾಗಿ ಹೇಳುತ್ತಾರೆ. ಹೋಗುವಾಗ, ಮಗಳು ತನ್ನ ಶಿಕ್ಷಕರಿಗೆ ಉಡುಗೊರೆಯನ್ನು ತೆಗೆದುಕೊಂಡು ಹೋಗುತ್ತಾಳೆ.
- ಆಕೆ ಹೋಗುವಾಗ, ಮೆಕಾನಿಕ್ ಮತ್ತು ಅವನ ಹೆಂಡತಿ, ಆಶ್ಚರ್ಯದಿಂದ ಏನಾಗಿರಬಹುದು ಎಂಬದಾಗಿ ಚಿಂತಿಸುತ್ತಿದ್ದರು. ಮೆಕಾನಿಕ್ ಈ ರೀತಿಯಾಗಿ ಆಲೋಚಿಸುತ್ತಾನೆ, "ಇವರು ಯಾರು, ನಮ್ಮ ಮಗಳಿಗೆ ಏನು ಮಾಡಿದರು?"

### ಗಮನ ಸೆಳೆಯುವದು

ಸ್ಪೀಕರ್: "ನೀವು ದೇವರಿಗೆ ವಿಧೇಯರಾಗುತ್ತೀರೋ?"
ಮಕ್ಕಳು: "ಆಗುತ್ತೇವೆ" ("ಆಗುತ್ತೇವೆ" ಎಂದು ಹೇಳುವಾಗ ಎರಡು ಸಲ ಚಪ್ಪಾಳೆ ಹೊಡೆಯಿರಿ ನಂತರ ಕಾಲುಗಳಿಗೆ ಎರಡೂ ಕೈಗಳನ್ನು ಬಡಿಯಿರಿ)
"ಆಗುತ್ತೇವೆ" ("ಆಗುತ್ತೇವೆ" ಎಂದು ಹೇಳುವಾಗ ಎರಡು ಸಲ ಚಪ್ಪಾಳೆ ಹೊಡೆಯಿರಿ ನಂತರ ಕಾಲುಗಳಿಗೆ ಎರಡೂ ಕೈಗಳನ್ನು ಬಡಿಯಿರಿ)
"ನಾನು ದೇವರಿಗೆ ವಿಧೇಯನಾಗುತ್ತೇನೆ!" ("ಆಗುತ್ತೇನೆ" ಎಂದು ಹೇಳುವಾಗ ಎರಡು ಸಲ ಚಪ್ಪಾಳೆ ಹೊಡೆಯಿರಿ ಹಾಗೂ ದೇವರನ್ನು ಸೂಚಿಸಿರಿ, ನಂತರ "ವಿಧೇಯನಾಗುತ್ತೇನೆ" ಎಂದು ಹೇಳುವಾಗ ಎರಡೂ ಕೈಗಳನ್ನು ಕಾಲುಗಳಿಗೆ ಎರಡು ಸಲ ಬಡಿಯಿರಿ.







ಪ್ರಕಟಿಸುವವನು ಹಿಂದಿರುಗಿ ಬಂದು, ನೀವು ಬದಲಾವಣೆಯನ್ನು ಗಮನಿಸಲಿಲ್ಲ ಎಂದು ಹೇಳುತ್ತಾನೆ, ಏನೆಂದರೆ; ಅವರಿಗೆ ಬದಲಾವಣೆ ಬಹಳ ಇಷ್ಟವಾಯಿತು. ಪ್ರಕಟಿಸುವಾತನು ತುಂಟರಾಗಿರುವ ನಿಮ್ಮ ಮಕ್ಕಳನ್ನು ಕ್ರೈಸ್ತ ಮಕ್ಕಳಾಗಿ ಬದಲಾಯಿಸಿರಿ ಎಂಬ ಸಲಹೆಯನ್ನು ಕೊಡುತ್ತಾನೆ.

## ಸಂದೇಶ

ಮಕ್ಕಳೇ ರೇಸ್ ಗೆ ಮತ್ತು "ನಿಮ್ಮ ಇಂಜಿನ್ ಗಳನ್ನು ಪ್ರಾರಂಭಿಸಿರಿ" ವಿಬಿಎಸ್ ಕಾರ್ಯಕ್ರಮಕ್ಕೆ ಸ್ವಾಗತ! ಇಂದು ನಾವು ರೇಸಿಂಗ್ ಬೈಕ್ ಗಳ ಮತ್ತೊಂದು ಪ್ರಾಮುಖ್ಯವಾದ ಭಾಗವಾಗಿರುವ, ಟೈರ್ ಗಳ ಬಗ್ಗೆ ತಿಳಿದುಕೊಳ್ಳೋಣ. ರೇಸ್ ನಲ್ಲಿ ಮೋಟರ್ ಬೈಕ್ ಗಳಿಗಿರುವ ಟೈರ್ ಗಳು ಬಹಳ ಪ್ರಾಮುಖ್ಯವಾಗಿರುತ್ತವೆ! ಅವುಗಳಿಲ್ಲದೆ ಮೋಟರ್ ಬೈಕ್ ಗಳು ಖಂಡಿತವಾಗಿಯೂ ಚಲಿಸಲು ಆಗುವದಿಲ್ಲ, ಆದರೆ ಉತ್ತಮವಾದ ಎಳೆತ ಸಹ ಪ್ರಾಮುಖ್ಯವಾಗಿರುತ್ತದೆ!!! ಟೈರ್ ಗಳಿಂದ ದೊರೆಯುವ ಉತ್ತಮವಾದ ಎಳೆತ ಬೈಕ್ ಗಳು ರಸ್ತೆಗಳಲ್ಲಿ ಉತ್ತಮವಾಗಿ ಸಾಗಲು ಸಾಧ್ಯವಾಗುತ್ತದೆ, ಅಂದರೆ ಟ್ರ್ಯಾಕ್ ನಲ್ಲಿ ಸ್ಲಿಪ್ ಆಗುವ ಸಾಧ್ಯತೆಗಳು ಬಹಳ ಕಡಿಮೆಯಾಗಿರುತ್ತವೆ. ರೇಸ್ ನಲ್ಲಿ ಭಾಗವಹಿಸುವ ಬೈಕ್ ಗಳಿಗೆ ರೇಸ್ ಪ್ರಾರಂಭವಾಗುವ ಮೊದಲು ಹೊಸ ಟೈರ್ ಗಳನ್ನು ಹಾಕಲಾಗುತ್ತದೆ. ಇದರ ನಿಮಿತ್ತ, ಮುಂದಿನ ಸಲ ಟ್ರ್ಯಾಕ್ ನಲ್ಲಿ ಹೋಗುವಾಗ ಉತ್ತಮ ಸೆಳೆತ ಸಿಗುತ್ತದೆ ಎಂಬ ದೃಢತೆ ಅವರಿಗುಂಟಾಗುತ್ತದೆ.

ಎಲ್ಲಾ ವಿಷಯಗಳಲ್ಲಿ ದೇವರಿಗೆ ವಿಧೇಯರಾಗುವದು ನಿಮ್ಮ ಬೈಕ್ ಗಳಿಗೆ ಹೊಸ ಟೈರ್ ಗಳನ್ನು ಹಾಕಿಸಿಕೊಳ್ಳುವಂತೆ ಮತ್ತು ರೇಸ್ ಟ್ರ್ಯಾಕ್ ನಲ್ಲಿ ಉತ್ತಮ ಸೆಳೆತ ಸಿಗುವಂತೆ ಇರುತ್ತದೆ. ಒಂದುವೇಳೆ ನೀವು ನಿಮ್ಮ ಜೀವಿತದಲ್ಲಿ ನಿಜವಾಗಿಯೂ ಯಾವುದಾದರು ಹಂತವನ್ನು ತಲುಪಬೇಕಾದರೆ ಮತ್ತು ದೇವರಿಗಾಗಿ ಮಹತ್ತಾದ ಕಾರ್ಯಗಳನ್ನು ಮಾಡಬೇಕೆಂದು ಬಯಸಿದರೆ, ನಿಮಗೆ ಉತ್ತಮ ಸೆಳೆತ ಇರಬೇಕು. ಇದರ ಅರ್ಥ ನಿಮಗೇನು ಬೇಕು? ವಿಧೇಯತೆ! ನಾವು ಏನಾದರೂ ಸಾಧನೆ ಮಾಡಬೇಕಾದರೆ ಉತ್ತಮವಾದ ತೀರ್ಮಾನ ತೆಗೆದುಕೊಳ್ಳಬೇಕು ಮತ್ತು ನಮ್ಮಲ್ಲಿ ಆತ್ಮವಿಶ್ವಾಸ ಇರಬೇಕು ಎಂಬದಾಗಿ ಲೋಕವು ಹೇಳುತ್ತದೆ ಆದರೆ ದೇವರು ಹೇಳುವದೇನೆಂದರೆ ನಾವು ವಿಧೇಯರಾಗಬೇಕು ಹಾಗೂ ಆತನ ಆಜ್ಞೆಗಳನ್ನು ಅನುಸರಿಸಬೇಕು. ನಾವು ನಮ್ಮ ಮೇಲೆ ನಂಬಿಕೆಯುಳ್ಳವರಾಗಿರುವದಕ್ಕಿಂತ ಹೆಚ್ಚಾಗಿ ನಾವು ಸೇವಿಸುವ ಅಧ್ಭುತನಾದ ದೇವರ ಮೇಲೆ ನಮಗೆ ನಂಬಿಕೆ ಇರಬೇಕು. ಆತನು ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ, ನಾವು ನಮ್ಮ ಜೀವಿತದಲ್ಲಿ ಪ್ರಾಮುಖ್ಯವಾದ ಸ್ಥಳಕ್ಕೆ ಸೇರಬೇಕೆಂದು ಆತನು ಬಯಸುತ್ತಾನೆ! ನಮ್ಮ ಜೀವಿತದಲ್ಲಿರುವ ಚಕ್ರಗಳನ್ನು ನಾವು ಕಾರ್ಯಗತಗೊಳಿಸಬೇಕು ಎಂಬದನ್ನು ವಿಧೇಯತೆಯು ನಮಗೆ ಕಲಿಸುತ್ತದೆ. ಇಂದು ನಾವು ವೃದ್ಧನಾಗಿದ್ದ ನೋಹನ ವಿಧೇಯತೆಯ ಬಗ್ಗೆ ಕಲಿತುಕೊಳ್ಳೋಣ. ದೇವರಿಗೆ ವಿಧೇಯನಾಗಲು ಕಾರಣವೇ ಇಲ್ಲದೆ, ವರ್ಷಗಳು ಗತಿಸಿದರೂ ಅವನು ದೇವರಿಗೆ ವಿಧೇಯನಾದನು. ಇದರಿಂದ ನಾನು ಮತ್ತು ನೀವು ಏನನ್ನು ಕಲಿಯಬಹುದು?

ನಮ್ಮ ತಂದೆತಾಯಿಗಳಿಗೆ ವಿಧೇಯರಾಗಬೇಕೆಂದರೆ ಏನು ಎಂಬದು ನಮಗೆ ಗೊತ್ತು – ಅವರಿಗೆ ವಿಧೇಯರಾಗುವದೆಂದರೆ ಅವರು ಏನು ಹೇಳುತ್ತಾರೋ ಅದನ್ನು ಮಾಡುವದಾಗಿದೆ. ದೇವರಿಗೆ ವಿಧೇಯರಾಗುವದೆಂದರೆ ಏನು? ಆತನು ನೋಡಲು ಅಥವಾ ಆತನ ಮಾತುಗಳನ್ನು ಕೇಳಿಸಿಕೊಳ್ಳಲು ನಮ್ಮಿಂದ ಆಗದಿರುವಾಗ, ಆತನು ನಮ್ಮಿಂದ ಏನನ್ನು ಬಯಸುತ್ತಾನೆ ಎಂಬದನ್ನು ನಾವು ತಿಳಿದುಕೊಳ್ಳುವದು ಹೇಗೆ? ದೇವರು ಸತ್ಯವೇದದಲ್ಲಿ ತಿಳಿಸಿರುವ ಆಜ್ಞೆಗಳಿಗೆ ವಿಧೇಯರಾಗುವದೇ ಆತನಿಗೆ ನಾವು ವಿಧೇಯರಾಗಿ ನಡೆದುಕೊಳ್ಳಲು ಸಹಾಯ ಮಾಡುವ ಮುಖ್ಯ ಸಂಗತಿಯಾಗಿದೆ. ಯೇಸು ಕ್ರಿಸ್ತನ ಹಾಗೆ, ನಾವು ಜೀವಿಸುವದು ಹೇಗೆ ಮತ್ತು ಇತರರೊಂದಿಗ ನಡೆದುಕೊಳ್ಳುವದು ಹೇಗೆ ಎಂಬದನ್ನು ಸತ್ಯವೇದದಿಂದ ತಿಳಿದುಕೊಳ್ಳುತ್ತೇವೆ. ಇದಲ್ಲದೇ, ನಮ್ಮ ಹಿತಕ್ಕಾಗಿ ದೇವರು ನಮ್ಮ ಮೇಲೆ ಅಧಿಕಾರಿಗಳನ್ನು ನೇಮಿಸಿದ್ದಾನೆ. ಆದ್ದರಿಂದ ನಾವು ನಮ್ಮ ತಂಡೆತಾಯಿಗಳಿಗ, ನಮ್ಮ ಟೀಚರ್ಸ್ ಗಳಿಗೆ ಅಥವಾ ನಮ್ಮ ಸಭಪಾಲಕರಿಗೆ ವಿಧೇಯರಾಗುವಾಗ ದೇವರಿಗೂ ವಿಧೇಯರಾಗುತ್ತೇವೆ. ಕೆಲವೊಮ್ಮ ದೇವರು ನಮಗ ವೈಯಕ್ತಿಕವಾಗಿಯೂ ಕೆಲವು ಆದೇಶಗಳನ್ನು ಕೊಡುತ್ತಾನೆ. ಕೆಲವೊಮ್ಮೆ ನಮ್ಮ ಆತ್ಮದಲ್ಲಿ ನಾವು ಯಾರಿಗೋ ಸಹಾಯ ಮಾಡಬೇಕು, ಏನನ್ನೋ ಕೊಡಬೇಕು ಅಥವಾ ಯಾರಿಗೋ ದಯೆ ತೋರಿಸಬೇಕು ಎಂಬದಾಗಿ ಅನ್ನಿಸುತ್ತಿರುತ್ತದೆ. ಸತ್ಯವೇದದಲ್ಲಿ ದೇವರು ತಿಳಿಸಿರುವ ಆಜ್ಞೆ ಎಂಬದಾಗಿ ಯಾವುದಾದರು ವಿಷಯದಲ್ಲಿ ವಿಶೇಷವಾದ ಪ್ರೇರಣೆ ನಮಗೆ ದೊರೆಯುವಾಗ ಮತ್ತು ನಮ್ಮ ತಂದೆತಾಯಿಗಳು ಅಥವಾ ಸಭಾಪಾಲಕನು ಅದನ್ನು ಒಪ್ಪಿಕೊಳ್ಳುವಾಗ, ನಾವು ಆಜ್ಞೆಗೆ ಅನುಸಾರವಾಗಿ ನಡೆದುಕೊಳ್ಳಬಹುದು ಮತ್ತು ಅದರಿಂದ ನಮಗೆ ಹಿತವಾಗುತ್ತದೆ ಎಂಬದನ್ನು ತಿಳಿದುಕೊಳ್ಳಬಹುದು. ದೇವರಿಗೆ ವಿಧೇಯರಾಗುವ ಮೂಲಕ







ನಾವು ನಮ್ಮ ಜೀವಿತದಲ್ಲಿ ವಿಶೇಷವಾದ ಕಾರ್ಯವನ್ನು ಮಾಡುತ್ತೇವೆ; ನಮ್ಮ ರೇಸಿಂಗ್ ಬೈಕ್ ಗೆ ಹೊಸ ಟೈರ್ ಗಳನ್ನು ಹಾಕಿಸಿಕೊಳ್ಳುತ್ತೇವೆ . . . ಮತ್ತು ಜೀವಿತದಲ್ಲಿ ನಮಗೆ ಕೆಲವು ಸೆಳೆತ ಸಿಗುತ್ತದೆ. ನಾವು ಸತ್ಯವೇದಕ್ಕೆ, ನಮ್ಮ ಅಧಿಕಾರಿಗಳಿಗೆ ಮತ್ತು ನಮ್ಮೊಳಗಿರುವ ಪವಿತ್ರಾತ್ಮನ ಸ್ವರಕ್ಕೆ ವಿಧೇಯರಾಗುವ ಮೂಲಕ ದೇವರನ್ನು ಮತ್ತು ನೋಹನ ಉದಾಹರಣೆಯನ್ನು ಅನುಸರಿಸೋಣ. ಹುಡುಗರೇ ಮತ್ತು ಹುಡುಗಿಯರೇ, ಸೆಳೆತದೊಂದಿಗೆ ಈ ಓಟವನ್ನು ಜಯಿಸಲು ಓಡಿರಿ

## ಐಸ್ ಬ್ರೇಕರ್ ಆಟ

### ಎಲೆಕ್ಟ್ರಿಕ್ ಸಿಟಿ

ನಿಮ್ಮ ವಿದ್ಯಾರ್ಥಿಗಳನ್ನು ಎರಡು ಅಥವಾ ನಾಲ್ಕು ತಂಡಗಳಾಗಿ ವಿಭಾಗಿಸಿರಿ. ನಿಮ್ಮ ಗುಂಪಿನ ಆಧಾರದ ಮೇರೆಗೆ ಎಷ್ಟು ತಂಡಗಳನ್ನು ಮಾಡಬೇಕೆಂದು ತೀರ್ಮಾನಿಸಿರಿ. ವಿದ್ಯಾರ್ಥಿಗಳನ್ನು ಎದುರುಬದುರು ಸಾಲಿನಲ್ಲಿ ನಿಲ್ಲಿಸಿರಿ. ಸಾಲುಗಳ ನಡುವೆ ಯಾವುದಾದರು ವಸ್ತುವನ್ನು ಇಡಿರಿ. ವಿದ್ಯಾರ್ಥಿಗಳು ತಮ್ಮ ಪಕ್ಕದಲ್ಲಿರುವವರ ಕೈಗಳನ್ನು ಹಿಡಿದುಕೊಳ್ಳಬೇಕು. ನಾಯಕನು ಪ್ರತಿಯೊಂದು ತಂಡದ ಮೊದಲನೆ ಹುಡುಗ ಹಾಗೂ ಹುಡುಗಿಯ ಕೈಯನ್ನು ಹಿಡಿದುಕೊಳ್ಳುವನು (ಪ್ರತಿ ಎರಡು ತಂಡಗಳಿಗೆ ನೀವು ಒಬ್ಬನನ್ನು ನಾಯಕನನ್ನಾಗಿ ಮಾಡಬಹುದು).




ಪ್ರತಿಯೊಂದು ತಂಡದ ಮೊದಲನೆಯ ಮಗುವಿನ ಕೈಯನ್ನು ನಾಯಕನು ಹಿಂಡುವನು. ನಿಮ್ಮ ಕೈಯನ್ನು ಹಿಂಡುವಾಗ ನೀವು ಸಾಲಿನಲ್ಲಿ ನಿಮ್ಮ ಪಕ್ಕ ನಿಂತಿರುವ ಮಗುವಿನ ಕೈಯನ್ನು ಹಿಂಡಬೇಕು, ಆದಷ್ಟು ಬೇಗ ಸಾಲಿನಲ್ಲಿರುವ ಎಲ್ಲರೂ ಇದನ್ನು ಮಾಡಬೇಕು. ಯಾರು ಇದನ್ನು ಬೇಗ ಮುಗಿಸಿ ಮಧ್ಯದಲ್ಲಿ ಇಟ್ಟಿರುವ ವಸ್ತುವನ್ನು ತೆಗೆದುಕೊಳ್ಳುತ್ತಾರೆ ಅವರು ಗೆಲ್ಲುತ್ತಾರೆ. ಇನ್ನೂ ಆಕರ್ಷಕಗೊಳಿಸಬೇಕಾದರೆ, ಮಕ್ಕಳ ಕಣ್ಣುಗಳನ್ನು ಮುಚ್ಚಿಸಿ ಆಡಿಸಬಹುದು.

## ಸತ್ಯವೇದ ಪಾಠ

### ನೋಹ ವಿಧೇಯನಾದನು



1. ದೇವರು ಲೋಕವನ್ನು ಉಂಟುಮಾಡಿದ ನಂತರ, ಜನರು ಅಭಿವೃದ್ಧಿಯಾಗಲಾರಂಭಿಸಿದರು ಮತ್ತು ಜನರ ಸಂಖ್ಯೆ ಹೆಚ್ಚಾಗುತ್ತಲೇ ಹೋಯಿತು. ಹೀಗೆ ಸಾಗುತ್ತಿರುವಾಗ, ದೇವರು ನಮ್ಮ ನಿರ್ಮಾಣಿಕನು ಎಂಬದನ್ನೇ ಜನರು ಮರೆತುಹೋಗಲಾರಂಭಿಸಿದರು. ನಾವು ದೇವರಿಗೆ ವಿಧೇಯರಾಗಬೇಕು ಎಂಬದನ್ನೂ ಅವರು ಮರೆತು ಹೋದರು ಮತ್ತು ತಮ್ಮ ಮನಸ್ಸಿಗೆ ಬಂದ ಹಾಗೆ ನಡೆದುಕೊಳ್ಳಲಾರಂಭಿಸಿದರು; ಸುಳ್ಳು ಹೇಳುವದು, ಗಾಯಮಾಡುವದು ಮತ್ತು ಕೊಲೆ ಮಾಡುವದು ಅವರ ಕಾರ್ಯಗಳಾಗಿದ್ದವು. ದೇವರು ಏನು ಬಯಸುತ್ತಾನೆ ಎಂಬದನ್ನು ಅವರು ಚಿಂತಿಸಲಿಲ್ಲ, ಇದು ದೇವರಿಗೆ ಬಹಳ ನೋವನ್ನುಂಟುಮಾಡಿತು.

   ಜನರು ಎಂಬ ಪದ ಬರುವಾಗ: ನಿಮ್ಮ ಮಧ್ಯ ಬೆರಳನ್ನು ಹೆಬ್ಬೆರಳಿಗೆ ಜೋಡಿಸಿ, ವೃತ್ತಗಳನ್ನು ರೂಪಿಸಿರಿ.









2. ಅವಿಧೇಯರಾಗಿ ಜೀವಿಸುತ್ತಿದ್ದ ಜನರ ನಡುವೆ ಒಬ್ಬ ವ್ಯಕ್ತಿ ದೇವರನ್ನು ಪ್ರೀತಿಸುತ್ತಾ, ಆತನಿಗೆ ವಿಧೇಯನಾಗಿ ನಡೆದುಕೊಳ್ಳುತ್ತಿದ್ದನು. ಅವನ ಹೆಸರು ನೋಹ. ಒಂದುದಿನ ದೇವರು ಜಲಪ್ರಳದ ಮೂಲಕ ಅವಿಧೇಯರಾದ ಜನರನ್ನು ಮುಗಿಸಬೇಕೆಂದು ತಿರ್ಮಾನಿಸಿದನು. ಆದ್ದರಿಂದ ದೇವರು ನೋಹನ ಸಂಗಡ ಮಾತನಾಡಿ ನಾವು ದೊಡ್ಡ ಮಳೆ ಬರಮಾಡುತ್ತೇನೆ ಎಂದು ಹೇಳಿದನು. ಆ ಸಮಯದಲ್ಲಿ ಭೂಮಿಯ ಮೇಲೆ ಮಳೆಯೇ ಬಂದಿರಲಿಲ್ಲ ಮತ್ತು ನೋಹನಿಗೆ ಮಳೆ ಎಂದರೆ ಏನು ಎಂಬದೇ ಗೊತ್ತಿರಲಿಲ್ಲ. ತನಗೆ ಗೊತ್ತಿಲ್ಲದ ಅಥವಾ ಅರ್ಥವಾಗದ ವಿಷಯಕ್ಕೆ ವಿಧೇಯನಾಗಿ ನಡೆದುಕೊಳ್ಳುವದು ನೋಹನಿಗೆ ಕಷ್ಟವಾಗಿತ್ತು. ದೇವರು ನೋಹನಿಗೆ ಹೇಳಿದ್ದೇನೆಂದರ, "ಇಡೀ ಭೂಮಿಯು ನೀರಿನಿಂದ ತುಂಬುವ ತನಕ ನಾನು ಮಳೆಯನ್ನು ಬರಮಾಡುವೆನು, ಆದರ ನಾನು ಉಂಟುಮಾಡಿರುವ ನೀನು, ನಿನ್ನ ಕುಟುಂಬದವರು ಮತ್ತು ಪ್ರಾಣಿಗಳ ಸುರಕ್ಷಿತೆಗಾಗಿ ದೊಡ್ಡ ನಾವೆಯನ್ನು ನೀನು ಕಟ್ಟಬೇಕು."

*ವಿಧೆಯತ ಪದ ಬರುವಾಗ: ನಿಮ್ಮ ಮುಷ್ಟಿಯನ್ನು ಬಿಗಿಯಾಗಿ ಹಿಡಿದು ಹಣೆಗೆ ಇಟ್ಟುಕೊಳ್ಳಿರಿ; ನಂತರ ಕೈಯನ್ನು ಕೆಳಗಿಳಿಸುವಾಗ ಮುಷ್ಟಿಯನ್ನು ತೆರೆಯಿರಿ.*

3. ದೇವರು ಅವನಿಗೆ ನಾವೆಯನ್ನು ಹೇಗೆ ಕಟ್ಟಬೇಕು, ಯಾವ ಮರವನ್ನು ಉಪಯೋಗಿಸಬೇಕು ಮತ್ತು ಅದು ಎಷ್ಟು ದೊಡ್ಡದಾಗಿರಬೇಕು ಎಂಬದನ್ನು ವಿವರವಾಗ ಹೇಳಿದನು. ಅದರ ಅಳತೆಯು ಫುಟ್ ಬಾಲ್ ಕ್ರೀಡಾಂಗಣಕ್ಕಿಂತಲೂ ದೊಡ್ಡದಾಗಿತ್ತು. ನೋಹ ಮರಗಳನ್ನು ಕಡಿದು ಅವುಗಳಿಗೆ ಮೊಳೆ ಹೊಡೆಯುವ ಮೂಲಕ ತನ್ನ ಕೆಲಸವನ್ನು ಪ್ರಾರಂಭಿಸಿದನು. ನೋಹ ಮತ್ತು ಅವನ ಕುಟುಂಬದವರು ದೊಡ್ಡ ಗಾತ್ರದ ನಾವೆಯನ್ನು ಕಟ್ಟಲು ಹಲವಾರು ವರ್ಷಗಳ ಕಾಲ ಪ್ರಯಾಸಪಟ್ಟರು. ನೂರಾರು ವರ್ಷಗಳ ಕಾಲ ದೇವರಿಗೆ ವಿಧೇಯರಾಗಿ, ನಿಮಗೆ ಅರ್ಥವಾಗದಿರುವ ಕಾರ್ಯವನ್ನು ಮಾಡುತ್ತಾ, ದೇವರು ತನ್ನ ವಾಗ್ದಾನವನ್ನು ಯಾವ ರೀತಿ ನೆರವೇರಿಸುತ್ತಾನೆ ಎಂಬದನ್ನು ಯೋಚಿಸುವದು ಹೇಗಿರುತ್ತದೆ ಎಂಬದನ್ನು ಊಹಿಸಿಕೊಳ್ಳಿರಿ?



*ದೇವರು ಎಂಬ ಪದ ಬರುವಾಗ: ನಿಮ್ಮ ತೋರ ಬೆರಳನ್ನು ಮುಂದಕ್ಕೆ ಮಾಡಿರಿ; ನಂತರ ಕೆಳಗಿಳಿಸಿ, ಹೆಬ್ಬೆರಳನ್ನು ಮಡಚಿ, ಉಳಿದ ನಾಲ್ಕು ಬೆರಳುಗಳನ್ನು ತೆರೆಯಿರಿ.*



4. ಒಂದುದಿನ ದೇವರು ನೋಹನಿಗೆ ಹೇಳಿದ್ದೇನೆಂದರೆ, "ನೀನು ನಿನ್ನ ಕುಟುಂಬದವರೊಂದಿಗೆ ನಾವೆಯೊಳಗೆ ಸೇರು, ನಿನ್ನೊಂದಿಗೆ ಎಲ್ಲಾ ಪ್ರಾಣಿಗಳೂ ನಾವೆಯೊಳಗೆ ಸೇರುವವು." ಮತ್ತೊಮ್ಮೆ ನೋಹ ವಿಧೇಯನಾದನು, ಅವನು ಎಲ್ಲಾ ಪ್ರಾಣಿಗಳಿಗೆ ಮತ್ತು ತನ್ನ ಕುಟುಂಬದವರಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ತೆಗೆದುಕೊಂಡನು. ದೇವರು ಎಲ್ಲಾ ಪ್ರಾಣಿಗಳನ್ನು ಬರಮಾಡಿದಾಗ, ಚಿಕ್ಕವುಗಳಿಂದ ಹಿಡಿದು ದೊಡ್ಡವುಗಳ ತನಕ ಎಲ್ಲವೂ ನಾವೆಯನ್ನು ಹತ್ತಿದವು. ಕಡೆಯಲ್ಲಿ ನೋಹ ಮತ್ತು ಅವನ ಕುಟುಂಬದವರು ಹತ್ತಿದರು. ಕೂಡಲೇ, ಚಿಟಪಟ ಚಿಟಪಟ ಅಂಥ ಎಂಬ ಶಬ್ದವು ಕೇಳಲಾರಂಭಿಸಿತು, ಮಳೆ ಹನಿಗಳು ಬೀಳಲಾರಂಭಿಸಿದವು, ಮಳೆ ಜೋರಾಗುತ್ತಿದ್ದಂತೆ ದೇವರು ಬಾಗಿಲನ್ನು ಮುಚ್ಚಿದನು.

ಕುಟುಂಬ ಎಂಬ ಪದ ಬರುವಾಗ: ಹೆಬ್ಬೆರಳು ಮತ್ತು ತೋರು ಬೆರಳಿನಿಂದ ಹೊರಾಂಗಣ ವೃತ್ತವನ್ನು ಮಾಡಿರಿ.

5. ಮಳೆ ಆಗಲೇ ಜೋರಾಗಿ ಸುರಿಯಲಾರಂಭಿಸಿತು, ನೀರಿನ ಹೊಂಡಗಳು ದೊಡ್ಡದಾಗುತ್ತಿದ್ದವು, ಜಲಪ್ರಳಯದ ನಿಮಿತ್ತ ಭೂಮಿಯು ನೀರಿನಲ್ಲಿ ಮುಳುಗಲಾರಂಭಿಸಿತು ಮತ್ತು ನಾವೆಯು ತೇಲಲಾರಂಭಿಸಿತು. (ಮೋಡಗಳು ಮತ್ತು ಮಳೆಯ ಚಿತ್ರವನ್ನು ಬಿಡಿಸಿರಿ). 40 ದಿನ ಹಗಲು ರಾತ್ರಿ ಎಡೆಬಿಡದೆ ಮಳೆ ಸುರಿಯಿತು. ಮಳೆ ಪ್ರಬಲವಾಗಿದ್ದರಿಂದ ದೊಡ್ಡ ಬೆಟ್ಟಗಳು ನೀರಿನಲ್ಲಿ ಮುಳುಗಿ ಹೋದವು. ಆದರೆ ಒಂದುದಿನ ಎಲ್ಲವೂ ಶಾಂತವಾಯಿತು, ಮಳೆ ನಿಂತು ಹೋಯಿತು. (ಸೂರ್ಯನ ಚಿತ್ರ ಬಿಡಿಸಿರಿ) ಭೂಮಿ ಸಂಪೂರ್ಣವಾಗಿ ಒಣಗಲು ಸುಮಾರು ಒಂದು ವರ್ಷ ಬೇಕಾಯಿತು. ಆಗ ದೇವರು ಒಂದು ದಿನ ನೋಹನಿಗೆ, ನೀನು ನಿನ್ನ ಕುಟುಂಬದವರೊಂದಿಗೆ ನಾವೆಯೊಳಗಿಂದ ಹೊರಗೆ ಬಾ ಎಂದು ಹೇಳಿದನು. ಮತ್ತೊಮ್ಮೆ ಭೂಮಿಯ ಮೇಲೆ ಕಾಲಿಡುವಾಗ ಅವರಿಗೆ ಬಹಳ ರೋಮಾಂಚನವಾಗಿರಬಹುದು! ನೋಹ ಮತ್ತು ಅವನ ಕುಟುಂಬದವರು ಸೂರ್ಯನ ಬೆಳಕಿನಲ್ಲಿ ಜಿಗಿಯುತ್ತಾ ಓಡಿದರು.



ಮಳೆ ಎಂಬ ಪದ ಬರುವಾಗ: ಮೇಲಕ್ಕೆ ಕೈಗಳನ್ನೆತ್ತಿರಿ; ಬೆರಳಿನಿಂದ ವೃತ್ತದ ಆಕಾರ ಮಾಡಿರಿ.

6. ದೇವರು ತಮ್ಮನ್ನು ಸುರಕ್ಷಿತವಾಗಿ ಕಾಪಾಡಿದ್ದಕ್ಕೆ ನೋಹ ಮೊದಲನೆಯದಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿದನು. ನೋಹನ ನಡವಳಿಕೆ ದೇವರಿಗೆ ಮೆಚ್ಚಿಕೆಯಾಯಿತು ಮತ್ತು ದೇವರು "ನಾನು ನೀರಿನ ಮೂಲಕ ಇನ್ನೆಂದಿಗೂ ಭೂಮಿಯನ್ನು ಹಾಳುಮಾಡುವದಿಲ್ಲ" ಎಂದು ವಾಗ್ದಾನ ಮಾಡಿದನು. ಆ ವಾಗ್ದಾನವನ್ನು ನಮಗೆ ನೆನಪಿಸಲು ದೇವರು ಸುಂದರವಾದ ಕಾಮನಬಿಲ್ಲನ್ನು ಆಕಾಶದಲ್ಲಿ ಇಟ್ಟನು. ದೇವರು ಹೇಳಿದ ವಿಷಯಗಳೆಲ್ಲವೂ ನೋಹನಿಗೆ ಅರ್ಥವಾಗದಿದ್ದರೂ, ಅವನು ದೇವರಿಗೆ ವಿಧೇಯನಾದ್ದರಿಂದ ದೇವರು ಅವರ ವಿಷಯದಲ್ಲಿ ಬಹಳ ಸಂತೋಷಿಸಿದನು. ಪ್ರತಿಸಲ ನೀವು ಕಾಮನಬಿಲ್ಲನ್ನು ನೋಡುವಾಗಲೂ, ನೀರಿನಿಂದ ಭೂಮಿಯನ್ನು ಎಂದಿಗೂ ನಾಶಮಾಡುವದಲ್ಲ ಎಂಬದಕ್ಕೆ ಗುರತಾಗಿ ದೇವರು ಅದನ್ನು ಆಕಾಶದಲ್ಲ ಇಟ್ಟಿದ್ದಾನೆ ಎಂಬದನ್ನು ನೆನಪಿಗೆ ತಂದುಕೊಳ್ಳಿರಿ. ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಾವು ಆತನಿಗೆ ವಿಧೇಯರಾಗುವಾಗಲೆಲ್ಲಾ ತನ್ನ ಪ್ರೀತಿಯನ್ನು ನಮಗೆ ತೋರಿಸಲು ಬಯಸುತ್ತಾನೆ.



ಕೃತಜ್ಞತೆ ಎಂಬ ಪದ ಬರುವಾಗ: ನಿಮ್ಮ ಬೆರಳುಗಳನ್ನು ಬಾಯ ಮೇಲೆ ಇಟ್ಟುಕೊಳ್ಳಿರಿ ಮತ್ತು ಅವುಗಳನ್ನು ಮೇಲೆ ಕೆಳಗೆ ಮಾಡಿರಿ.

## ಪುನರಾವರ್ತನೆಯ ಠಾಣೆಗಳು

ಠಾಣೆಗಳ ಪುನರಾವರ್ತನೆಗಾಗಿ ಮೂರು ಗುಂಪುಗಳನ್ನು ಮಾಡಿರಿ

### ಗ್ಯಾರೇಜ್ ಕರಕುಶಲತೆಗಳು

ಬೈಕರ್ ಹೆಲ್ಮೆಟ್

ಪ್ರತಿಯೊಬ್ಬ ವಿದ್ಯಾರ್ಥಿಗೆ ಕೊಡಿರಿ:

ಸತ್ಯವೇದದ ವಾಕ್ಯವಿರುವ ಹೆಲ್ಮೆಟ್ ಪ್ರಿಂಟ್ ಔಟ್

ನೀಲಿ ಬಣ್ಣದ 1 ಹಾಳೆ

ಹಳದಿ ಬಣ್ಣದ 2 ಹಾಳೆ

ಹಸಿರು ಬಣ್ಣದ 1 ಹಾಳೆ

1 ಸೇಫ್ಟಿ ಪಿನ್









ಸೂಚನೆಗಳು:

- ಬಣ್ಣದ  ಹಾಳೆ ಮತ್ತು ಪ್ರಿಂಟ್ ಆಗಿರುವ ಹೆಲ್ಮೆಟ್ ನಿಂದ ಅದೇ ವಿಧಾನವನ್ನು ತಯಾರಿಸಿರಿ.
- ಸರಿಯಾಗಿ ಕತ್ತರಿಸಿದ ನಂತರ ಗೊಂದಿನಿಂದ ಅಂಟಿಸಿರಿ.

ಅವುಗಳಿಗೆ ಸೇಪ್ಟಿ ಪಿನ್ ಹಾಕಿರಿ, ಅದನ್ನು ಬಟ್ಟೆಗೆ ಚುಚ್ಚಲು ಸಹಾಯವಾಗುತ್ತದೆ.

## ಸ್ನಾಕ್ ಸ್ಟಾಂಡ್



ಆಪಲ್ ಕಾರ್

ಸಾಮಗ್ರಿಗಳು:

- ಆಪಲ್
- ನೀಲಿ ದ್ರಾಕ್ಷೆಗಳು
- ಟೂತ್ ಪಿಕ್ಸ್

ಸೂಚನೆಗಳು:

1. ಆಪಲ್ ಗಳನ್ನು ಅರ್ಧ ಚಕ್ರದ ಆಕಾರದಲ್ಲಿ ಕತ್ತರಿಸರ
2. ಆಪಲ್ ಗಳ ಸಮ ಭಾಗವನ್ನು ಕೆಳಗೆ ಇಡಿರಿ
3. ಆಪಲ್ ಮಧ್ಯದಲ್ಲಿ ಟೂತ್ ಪಿಕ್ ಸಿಕ್ಕಿಸಿರಿ, ಒಂದು ಮುಂದೆ, ಇನ್ನೊಂದು ಹಿಂದೆ
4. ಟೂತ್ ಪಿಕ್ ಗಳ ನಾಲ್ಕು ಮೂಲೆಗೆ ದ್ರಾಕ್ಷೆಯನ್ನು ಸಿಕ್ಕಿಸಿರಿ, ಅವು ಟಯರ್ ರೂಪ ಪಡೆದುಕೊಳ್ಳುತ್ತವೆ.

ಈಗ ನಮ್ಮೆದುರಿನಲ್ಲಿ ಸ್ವಾದಿಷ್ಟವಾದ ಕಾರ್ ಸಿದ್ಧವಾಗಿದೆ!!

## ಡ್ರೈವಿಂಗ್ ಕ್ಲಾಸ್

"ಡ್ರೈವಿಂಗ್ ಕ್ಲಾಸ್" ಗೆ ಸ್ವಾಗತ, ಇಲ್ಲಿ ನಾವು ವಿದ್ಯಾರ್ಥಿಗಳ  ಪುಸ್ತಕದನುಸಾರ ಕಾರ್ಯಗಳನ್ನು ಮಾಡೋಣ. ದಿನದ ವಾಕ್ಯದೊಂದಿಗೆ, ದಿನದ ಪಾಠವನ್ನು ಒಟ್ಟಾಗಿ ಹೇಳುವ ಮೂಲಕ ತರಗತಿಯನ್ನು ಪ್ರಾರಂಭಿಸೋಣವೇ? ಪ್ರಾರಂಭಿಸೋಣ!!!

| | | | | | | | |
|---|---|---|---|---|---|---|---|
| ಆ | ಕ | ಮ | ಪಾ | ಪ್ರಾ | ಳ | ನಾ | ವೆ |
| ಮ | ಜ್ಞ | ಟ್ಟಿ | ಳು | ಕಾ | ಣಿ | ಟ್ | ಳು |
| ರ | ಕ್ತಿ | ಸಿ | ದ | ಮ | ಡಿ | ಗ | ವ |
| ನೋ | ಗ | ಳ | ದ | ನು | ನ | ದ | ಳು |
| ರ | ಹ | ಡಿ | ನೆ | ರ್ಶ | ಠ | ಕ್ಕ | ನು |
| ಕ್ತಿ | ಪಾ | ಳು | ದ | ರೆ | ಮ | ಆ | ಜ್ಞೆ |
| ಕಾ | ಸಿ | ರ್ಗ | ನಂ | ನಾ | ಯ | ಪ್ರಾ | ದೇ |
| ದ | ಮಾ | ನು | ಬಿ | ಗ | ಳ | ವ | ವ |
| ಪ್ರ | ಳ | ಯ | ಕೆ | ಮ | ದ | ನು | ರು |

ಕೆಳಗಿನ ವಾಕ್ಯಗಳು ಸರಿಯಾಗಿವೆಯೇ ಅಥವಾ ತಪ್ಪಾಗಿವೆಯೇ ಎಂದು ಗುರುತಿಸಲು, ಸತ್ಯವೇದ ನೋಡಿರಿ.

1.ಜಲಪ್ರಳಯವಾದ  ನಂತರ ನೋಹ 350 ವರ್ಷ ಬದುಕಿದನು (ಒಟ್ಟು 950 ವರ್ಷಗಳು). ಆದಿ 9:28-29 — ಸರಿಯಾಗಿವೆಯೇ ತಪ್ಪಾ

2.ಇನ್ನೆಂದಿಗೂ ಮಳೆ ಬರುವದಿಲ್ಲ ಎಂಬ ವಾಗ್ದಾನವನ್ನು ದೃಢಪಡಿಸಲು — ಸರಿಯಾಗಿವೆಯೇ ತಪ್ಪಾ
ಗುರುತಾಗಿ ದೇವರು ನೋಹನಿಗೆ ಕಾಮನಬಿಲ್ಲು ತೋರಿಸಿದನು. — ಸರಿಯಾಗಿವೆಯೇ ತಪ್ಪಾ

3.ನಾವೆಯೊಳಗೆ ಶುದ್ಧವಾದ ಪ್ರಾಣಿಗಳು 14 ಕ್ಕಾಗಿ ಬಂದವು. ಆದಿ 7:2 — ಸರಿಯಾಗಿವೆಯೇ ತಪ್ಪಾ

4.ನೋಹನ ಪೂರ್ವಜರು ಯಾರು ಎಂಬದು ನಮಗೆ ಗೊತ್ತಿಲ್ಲ. ಆದಿ 5

5.(ಸತ್ಯವೇದದಲ್ಲಿ ಹೆಚ್ಚು ವರ್ಷ ಬದುಕಿದ, 969 ವರ್ಷಗಳು) — ಸರಿಯಾಗಿವೆಯೇ ತಪ್ಪಾ
ಮೆತೂಷಲಹನು ನೋಹನ ತಾತ. ಆದಿ 5:25-28 — ಸರಿಯಾಗಿವೆಯೇ ತಪ್ಪಾ

6.ನಾವೆಯನ್ನು ಕಟ್ಟಲು 100 ಕ್ಕೂ ಅಧಿಕ ವರ್ಷಗಳು ಹಿಡಿದವು. ಆದಿ 7:6

7.ಪಕ್ಷಿಗಳ ಪ್ರತಿ ಜಾತಿಯಿಂದಲೂ ಅವುಗಳು ಜೋಡಿಯಾಗಿ ನಾವೆಯೊಳಗೆ ಬಂದವು. ಆದಿ 7:3 — ಸರಿಯಾಗಿವೆಯೇ ತಪ್ಪಾ









ಪ್ರತಿಯೊಂದು ಪ್ರಾಣಿಯನ್ನು ಎರಡಾಗಿ ಗುರುತಿಸಿರಿ. ಸಂಗಾತಿಗಳಿಗಾಗಿ ಕಾಯುತ್ತಿರುವ ಪ್ರಾಣಿಗಳಿಗೆ ವೃತ್ತವನ್ನು  ಹಾಕಿರಿ. ಈ ಚಿತ್ರವನ್ನು ನೋಡದೆ 1 ನಿಮಿಷದೊಳಗೆ ಎಷ್ಟು ಪ್ರಾಣಿಗಳ ಹೆಸರುಗಳನ್ನು ಹೇಳಬಲ್ಲಿರಿ?



## ಪ್ರಶ್ನೆಗಳು ಮತ್ತು ಉತ್ತರಗಳು

**1.** ನನ್ನ ತಂದೆತಾಯಿಗಳು ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳದಿದ್ದರೆ ಏನಾಗುತ್ತದೆ?

ಜೀವನ ಸರಿಯಾಗಿರುವದಿಲ್ಲ, ಉದಾಹರಣೆಗೆ, ಒಂದುವೇಳೆ ಭೂಕಂಪವಾದರೆ, ಒಳ್ಳೆಯವರು ಕೆಟ್ಟವರು ಎಲ್ಲರೂ ಅದರಿಂದ ಬಾಧಿಸಲ್ಪಡುತ್ತಾರೆ. ನಮ್ಮ ಮನೆಗಳಲ್ಲಿಯೂ ಕೆಲವೊಮ್ಮೆ ಅನ್ಯಾಯಗಳು ನಡೆಯುತ್ತವೆ. ನಮ್ಮ ತಂದೆತಾಯಿಗಳು ನಮಗೆ ಏನಾದರು ಕೆಟ್ಟದ್ದನ್ನು ಮಾಡಲು ಹೇಳುವಾಗ, ಅದರಿಂದ ಹೊರಬರಲು ನಮಗ ಯಾವ ಮಾರ್ಗವೂ ಇಲ್ಲವೆ? ನಮ್ಮ ತಂದತಾಯಿಗಳಿಗೆ ಗೊತ್ತಾಗದಿದ್ದರೂ, ದೇವರು ಎಲ್ಲವನ್ನೂ ನೋಡುತ್ತಾನೆ. ಒಂದು ಉದಾಹರಣೆ: ಸುಳ್ಳು ಹೇಳುವದು.

**2.** ದೇವರು ನಿಮಗೆ ಏನಾದರೂ ಮಾಡಲು ಹೇಳಿದ್ದಾನೆಯೇ? ದೇವರೇ ನಿಮ್ಮೊಂದಿಗೆ ಮಾತನಾಡುತ್ತಿದ್ದಾನೆ ಎಂದು ನಿಮಗೆ ಹೇಗೆ ಗೊತ್ತಾಯಿತು?

ಕೆಲವೊಮ್ಮೆ ನಾವು ಯಾರಿಗಾದರೂ ಸಹಾಯ ಮಾಡಬೇಕು ಎಂಬದಾಗಿ ನಮಗೆ ಅನ್ನಿಸುತ್ತಿರುತ್ತದೆ, ಅಥವಾ ಯಾರೋ ನಮ್ಮನ್ನು ಒತ್ತಾಯಪಡಿಸುತ್ತಿರುವದಾಗಿ ಅಥವಾ ನಾವು ಮಾಡಬೇಕಾಗಿರುವ ಕಾರ್ಯದ ಬಗ್ಗೆ ನಮಗೆ ನೆನಪಿಸುತ್ತಿರುವದಾಗಿ ನಮಗೆ ಅನ್ನಿಸುತ್ತದೆ. ದೇವರು ನಮಗೆ ಜ್ಞಾಪಕಪಡಿಸುತ್ತಿರುತ್ತಾನೆ ಯಾಕಂದರೆ ನಾವು ಮರೆತುಹೋಗಲು ಪ್ರಯತ್ನಿಸಿದರೂ ನಮ್ಮಿಂದ ಮರೆಯಲು ಆಗುವದಿಲ್ಲ. ಕೆಲವೊಮ್ಮೆ ನಾವು ಮಾಡಬೇಕಾಗಿರುವ ಕಾರ್ಯದ ಬಗ್ಗೆ ರಾತ್ರಿಯಲ್ಲಿ ಕನಸು ಕಾಣುತ್ತಿರುತ್ತೇವೆ..

**3.** ನಾನು ದೇವರಿಗೆ ವಿಧೇಯನಾಗಿದ್ದೇನೆ ಎಂಬ ಭಾವನೆ ನಿಮಗಿದೆಯೇ?







ಒಬ್ಬರ ವಿಷಯದಲ್ಲೊಬ್ಬರು ತೀರ್ಪು ಮಾಡದಿರುವ ಸ್ಥಳಗಳಲ್ಲಿ, ಮಕ್ಕಳೊಂದಿಗೆ ನೇರವಾಗಿ ಚರ್ಚೆ ಮಾಡಿರಿ. ಅವರು ತಮ್ಮ ಮನಸ್ಸಿನಲ್ಲಿರುವದನ್ನು ನೇರವಾಗಿ ಹೇಳಲು ಸಹಾಯವಾಗುವ ಹಾಗೆ ನಿಮ್ಮ ತಪ್ಪುಗಳನ್ನು ಹಾಗೂ ವಿಫಲತೆಗಳನ್ನು ಅವರೊಂದಿಗೆ ಹಂಚಿಕೊಳ್ಳಿರಿ. ಯಾವ ಕ್ರಿಯೆಗಳು ವಿಧೇಯತೆಯನ್ನು ತೋರಿಸುತ್ತವೆ ಮತ್ತು ಯಾವ ಕ್ರಿಯೆಗಳು ಅವಿಧೇಯತೆಯನ್ನು ತೋರಿಸುತ್ತವೆ ಎಂಬದನ್ನು ಚರ್ಚಿಸಿರಿ.

4. ನಾವೆಯೊಳಗೆ ಎಷ್ಟು ಜನರು ಸೇರಿದರು?

   ಎಂಟು ಜನರು.

5. ನೋಹನ ಮಕ್ಕಳ ಹೆಸರುಗಳೇನು?

ಶೇಮ್, ಹಾಮ್ ಮತ್ತು ಯೆಫೇತ್

## ರೆಡಿ, ಸೆಟ್, ಆಟಗಳು!

ಟೋ ಟ್ರಕ್ ಕ್ಯಾಚಿಂಗ್ (ವ್ಯಕ್ತಿಗತವಾಗಿ)

ಆಟ ಆಡುವ ಮೊದಲು:

- ಮಗುವನ್ನು ನೇಮಿಸಿರಿ (ಟೋ ಟಕ್), ಆ ಮಗು ಮೋಟರ್ ಬೈಕ್ ಗಳನ್ನು (ಉಳಿದ ಮಕ್ಕಳು) ಹುಕ್ ಮಾಡಬೇಕು.
- ಆಟದ ಸ್ಥಳದನುಸರವಾಗಿ ಮೇರೆಗಳನ್ನು ನೇಮಿಸಿರಿ.

ಆಟ ಆಡುವದು:

ನಿಗದಿಪಡಿಸಲಾಗಿರುವ ಮೇರೆಯೊಳಗೆ ಮೋಟರ್ ಬೈಕ್ ಗಳು ಇರಬೇಕು ಮತ್ತು ಟೋ ಟಕ್ ಅವರನ್ನು ಹುಕ್ ಮಾಡಲು ಪ್ರಯತ್ನಿಸಬೇಕು. ಅವನು ತನ್ನ ಕೈಯಿಂದ ಮೋಟರ್ ಬೈಕ್ ಅನ್ನು ಹುಕ್ ಮಾಡುವಾಗ, ಆ ಮೋಟರ್ ಬೈಕ್ ತನ್ನ ಕೈಯನ್ನು ಆಟಗಾರನಿಗ ಹುಕ್ ಮಾಡಬೇಕು. ಮೋಟರ್ ಬೈಕ್ ಅವನ ಕೈಗೆ ಹುಕ್ ಆಗಿರವದರಿಂದ, ಸರಪಣಿಯನ್ನು ನಿರ್ಮಿಸಲು ಉಳಿದ ಮೋಟರ್ ಬೈಕ್ ಗಳನ್ನು ಹುಕ್ ಮಾಡಲು ಟೋ ಟಕ್ ಪ್ರಯತ್ನಿಸಬೇಕು.

ಒಂದುವೇಳೆ ಯಾರದರೂ ನಿಗದಿಪಡಿಸಲಾಗಿರುವ ಮೇರೆಯಿಂದ ಹೊರಗೆ ಹೋಗುವದಾದರೆ, ಅವರು ತಮ್ಮನ್ನು ತಾವೇ ಹೊಸ ಟೋ ಟಕ್ ಗೆ ಹುಕ್ ಮಾಡಿಕೊಳ್ಳಬೇಕು.

ಗಮನಿಸಿರಿ: ಗುಂಪು ದೊಡ್ಡದಾಗಿದ್ದರೆ, 2 ಸರಪಣಿ ನಿರ್ಮಿಸುವ ಅವಶ್ಯಕತೆ ಇರುತ್ತದೆ ಮತ್ತು ಮೋಟರ್ ಬೈಕ್ ಗಳನ್ನು ಹಿಡಿಯಲು 2 ಟೋ ಟಕ್ ಗಳು ಸಹಕರಿಸುತ್ತಿರುತ್ತವೆ.

ರಿಲೇ ರೇಸ್ (ತಂಡವಾಗಿ)



ಈ ರಿಲೇ ರೇಸ್ ಗಾಗಿ, ಇಬ್ಬರು ಮಕ್ಕಳನ್ನು ನಿಲ್ಲಿಸಿ ಒಬ್ಬನ ಒಂದು ಕಾಲನ್ನು ಇನ್ನೊಬ್ಬನ ಒಂದು ಕಾಲಿಗೆ ಕಟ್ಟಿರಿ.

ತಂಡಗಳನ್ನು ಮಾಡಿರಿ, ಪ್ರತಿ ತಂಡದಲ್ಲಿಯೂ ಆಟಗಾರರು ಸಮಾನ ಸಂಖ್ಯೆಯಲ್ಲಿರಬೇಕು.

ಆಡುವ ಸ್ಥಳದಲ್ಲಿ, ಪ್ರತಿಯೊಂದು ತಂಡಕ್ಕೆ ಟ್ರಾಕ್ ಮಾಡಿರಿ.

ಸಿಗ್ನಲ್ ಕೊಡುತ್ತಲೇ, ಮೊದಲನೆಯ ಜೋಡಿ ಟ್ರಾಕ್ ಸುತ್ತಲೂ ಓಡಬೇಕು, ನಂತರ ಎರಡನೆಯವರು, ಹಾಗೆ ಇಡೀ ತಂಡದವರು ಓಡಬೇಕು.

ಯಾವ ತಂಡದವರು ಮೊದಲು ಓಡಿ ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.







# ಮುಕ್ತಾಯ

ನಮ್ಮ ರಜಾದಿನದ ಸತ್ಯವೇದ ಶಾಲೆಯ ಮತ್ತೊಂದು ಅದ್ಭುತವಾದ ದಿನ ಮುಗಿಯಿತು! ನೋಹ ದೇವರ ಸ್ವರವನ್ನು ಕೇಳಿಸಿಕೊಂಡದ್ದು ಮಾತ್ರವಲ್ಲ ಬದಲಾಗಿ ದೇವರಿಗೆ ವಿಧೇಯನಾಗುವ ಮೂಲಕ ತನ್ನ ಜೀವತದ ಗಾಲಿಗಳಲ್ಲಿ ಉತ್ತಮ ಸೆಳೆತವನ್ನು ಹೊಂದಿದ್ದನು ಎಂಬದನ್ನು ಕಲಿತುಕೊಳ್ಳುವದರೊಂದಿಗ, ಉತ್ತಮವಾದ ಸಮಯವನ್ನು ಕಳೆದಿದ್ದೇವೆ. ನಾವೆಲ್ಲರೂ ನೋಹನಿಂದ ಕಲಿತುಕೊಳ್ಳಬಹುದು ಮತ್ತು ನಮ್ಮ ಜೀವಿತಗಳಲ್ಲಿ ಸತತವಾಗಿ ದೇವರಿಗ ವಿಧೇಯರಾಗಬಹುದು. ಈ ರೀತಿಯಾಗಿ ನಾವು ವೇಗವಾಗಿ ಚಲಿಸಲು ಮತ್ತು ಜೀವಿತದ ರೇಸ್ ನಲ್ಲಿ ಓಡಿ ಗೆಲ್ಲಲು ನಮ್ಮ "ಬೈಕ್ ಗಳಿಗೆ" ಒಳ್ಳೆಯ "ಟಯರ್ ಗಳನ್ನು" ಕಾಪಾಡಿಕೊಳ್ಳಬಹುದು.

# 3 ಯಥಾರ್ಥವಾದ ಪ್ರೀತಿ



**ಸತ್ಯವೇದ ಕಥೆ: ರೂತಳು ಪ್ರೀತಿಸಿದಳು / ರೂತಳು 1:1-4:17**

## ವಾಕ್ಯ

**“ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬುದೇ ಮೊತ್ತಮೊದಲಿನಿಂದಲೂ ನೀವು ಕೇಳಿದ ಸಂದೇಶ.” ೧ ಯೋವಾನ್ನನು 3:11**

## ನಾಟಕ

### ಪ್ರೀತಿ

**ಗಮನ ಸೆಳೆಯುವವನು**

ಸ್ಪೀಕರ್: “ಆಕ್ಸಲೇಟರ್ ಕೊಡಿರಿ!”
ಮಕ್ಕಳು: ಮೂರು ಸಲ ಚಪ್ಪಾಳೆ
ಮೂರು ಸಲ ಚಪ್ಪಾಳೆ
“ವ್ರೂಮ್, ವ್ರೂಮ್!” (ಮೋಟರ್ ಬೈಕ್ ಗೆ ಆಕ್ಸಲೇಟರ್ ಕೊಡುತ್ತಿರುವ ಹಾಗೆ ಕೈ ಮಾಡಬೇಕು)
“ಹೋಗೋಣ!” (ಮೊದಲು ಬಲಗೈಯನ್ನು ಗಾಳಿಯಲ್ಲಿ ಬೀಸಬೇಕು, ನಂತರ ಎಡಗೈಯನ್ನು ಬೀಸಬೇಕು)

- ಮೋಟರ್ ಬೈಕ್ ಅತಿಯಾಗಿ ಬಿಸಿಯಾದ್ದರಿಂದ ಅದನ್ನು ವರ್ಕ್ ಶಾಪ್ ಗೆ ತಳ್ಳಿಕೊಂಡು ಬಂದ ಗ್ರಾಹಕನ ಬಗ್ಗೆ ಮಾತನಾಡುತ್ತಾ ಮೆಕಾನಿಕ್ ಒಳಗೆ ಬರುತ್ತಾನೆ. ಮೋಟರ್ ಬೈಕ್ ನಿಂದ ಹೊಗೆ ಬರುತ್ತಿರುತ್ತದೆ. ಮೆಕಾನಿಕ್ ಮನಸ್ಸಿನಲ್ಲಿ, “ಅದು ಬಹಳ ಬಿಸಿಯಾಗಿರಬಹುದು, ಇಂಜಿನ್ ಗೆ ಸರಿಯಾದ ಸಮಯಕ್ಕೆ ಆಂಟಿ ಫ್ರೀಜ್ ಹಾಕಿಸಿದ್ದರೆ ಈ ಪರಿಸ್ಥಿತಿ ಬರುತ್ತಿಲ್ಲ. ಈಗ ಹೇಗೆ ಸರಿಮಾಡಬೇಕೋ ಗೊತ್ತಿಲ್ಲ” ಎಂಬದಾಗಿ ಅಂದುಕೊಳ್ಳುತ್ತಾ ಕೆಲಸ ಪ್ರಾರಂಭಿಸುತ್ತಾನೆ.
- ಆಗ ಅವನ ಪುಣ್ಣ ನಾಯಿ ಮರಿ ಒಳಗೆ ಬರುತ್ತದೆ ಮತ್ತು ಅವನೊಂದಿಗೆ ಮಾತನಾಡಲು ಪ್ರಾರಂಭಿಸುತ್ತದೆ. ಮೆಕಾನಿಕ್ ಸುತ್ತ ಮುತ್ತಲು ನೋಡುತ್ತಾ, ಆಶ್ಚರ್ಯದಿಂದ, ತನ್ನನ್ನು ಮಾತನಾಡಿಸುತ್ತಿರುವವರು ಯಾರು ಎಂದು ಹುಡುಕುತ್ತಾನೆ. ಸ್ವಲ್ಪ ಸಮಯ ಹಾಗೆಯೇ ಹುಡುಕಿದ ನಂತರ, ನಾಯಿ ಮಾತನಾಡಿಸುತ್ತಿದೆ ಎಂಬದು ಅವನಿಗೆ ಗೊತ್ತಾಗುತ್ತದೆ.
- ಅವನ ನಾಯಿಗೆ ಮಾತ್ರವೇ ಗೊತ್ತಿದ್ದ ಕೆಲವು ಕಥೆಗಳನ್ನು ಹೇಳುವ ಮೂಲಕ ಅವನೊಂದಿಗೆ ಮಾತನಾಡುತ್ತಿರುವದು ಅವನ ನಾಯಿಯೇ ಎಂಬದನ್ನು ಅದು ನಿರೂಪಿಸುತ್ತದೆ. ಅದು ಹೇಳಿದ ಒಂದು ಕಥೆ ಯಾವುದೆಂದರೆ. “ನಿನ್ನ ಹೆಂಡತಿ ನಿನಗೆಂದು ವಿಶೇಷವಾದ ಅಡುಗೆ ಮಾಡಿದಾಗ, ಇದು ನನ್ನ ಜೀವಿತದ ಅತ್ಯಂತ ಸ್ವಾದಿಷ್ಟವಾದ ಅಡುಗೆಯಾಗಿದೆ ಎಂದು ಹೇಳಿದ ಒಂದೆರೆಡು ಚಮಚ ಊಟ ತಿಂದ ನಂತರ ಅದನ್ನು ಪೂರ್ತಿಯಾಗಿ ನನಗೇ ಕೊಟ್ಟದ್ದು ನಿನಗೆ ನೆನಪಿದೆಯೇ?”
- ಅಂತಿಮವಾಗಿ, ಮೆಕಾನಿಕ್ ಪುಟ್ಟ ನಾಯಿಯ ಮಾತುಗಳನ್ನು ನಂಬುತ್ತಾನೆ ಮತ್ತು ಯಾವ ರೀತಿ ನಾಯಿಗಳೆಲ್ಲವೂ ಮಾತನಾಡುತ್ತವೆ ಎಂಬದನ್ನು ಅವರು ಚರ್ಚಿಸುತ್ತಾರೆ ಆದರೆ ಆ ವಿಷಯವನ್ನು ಮರೆಮಾಡುತ್ತಾರೆ. ಅವರ ಮಾತುಕತೆ ನಡೆಯುತ್ತಿರುವಾಗಲೇ ಮೆಕಾನಿಕ್ ತನ್ನ ಕೆಲಸವನ್ನೂ ಮಾಡುತ್ತಿರುತ್ತಾನೆ.
- ಇಂದು ನಾಯಿ ಮರಿ ಮಾತನಾಡುತ್ತಿರುವದಕ್ಕೆ ಕಾರಣ ಅವನು ತೋರಿರುವ ಪ್ರೀತಿ ಮತ್ತು ಆದರಣೆಗೆ ಕೃತಜ್ಞತೆ ಸಲ್ಲಿಸಲು ಬಯಸುವದು, ನಂತರ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವದಾಗಿದೆ. ಇದಾದ ಬಳಿಕ ನಾಯಿ ಮರಿ ಹೊರಟು ಹೋಗುತ್ತದೆ.







- ಇಂಜಿನ ಅತಿಯಾಗಿ ಬಿಸಿಯಾಗಿರುವದರಿಂದ ಸರಿಪಡಿಸಲು ಆಗದ ಹಾಗೆ ಕೆಟ್ಟುಹೋಗಿದೆ, ಈಗ ಇದರ ಯಜಮಾನನಿಗೆ ಹೊಸ ಇಂಜಿನ್ ತೆಗೆದುಕೊಳ್ಳುವದೊಂದೇ ದಾರಿ ಎಂದು ಮೆಕಾನಿಕ್ ಹೇಳುವ ಮೂಲಕ ನಾಟಕ ಮುಗಿಯುತ್ತದೆ.

ಮೆಕಾನಿಕ್ ಹೊರಗೆ ಹೋಗುವಾಗ, "ಒಂದುವೇಳೆ ಅವನೇನಾದರೂ ಇಂಜಿನ್ ಗೆ ಆಂಟಿ ಫ್ರೀಜ್ ಹಾಕಿಸಿ ಚೆನ್ನಾಗಿ ನೋಡಿಕೊಂಡಿದ್ದರೆ, ಅದು ಹಾಳಾಗುತ್ತಿರಲಿಲ್ಲ" ಎಂದು ಹೇಳುತ್ತಾ ಹೋಗುತ್ತಾನೆ.

## ಸಂದೇಶ

ಹಲೋ ಮಕ್ಕಳೇ . . . ನಿಮ್ಮ ಇಂಜಿನ್ ಪ್ರಾರಂಭಿಸಲು ನೀವು ಸಿದ್ಧರಾಗಿದ್ದೀರೋ??? ನೀವು ನಿಮ್ಮ ಮೋಟಾರ್ ಬೈಕ್ ಅನ್ನು ನೀವು ಮೇರೆಗೆ ತೆಗೆದುಕೊಂಡು ಹೋಗುವಿರೋ? ಒಂದುವೇಳೆ ಇಲ್ಲವಾದರೆ, ನೀವು ದಾರಿಯಿಂದ ಪಕ್ಕಕ್ಕೆ ಸರಿಯುವುದೇ ಉತ್ತಮ, ಯಾಕಂದರೆ ಮೋಟರ್ ಬೈಕ್ ಗಳು ನಿಜವಾಗಿಯೂ ಓಟದಲ್ಲಿ ಉತ್ತಮ ಸಾಧನೆಯನ್ನು ಮಾಡುವವುಗಳಾಗಿವೆ.

ಗಾಡಿ ಓಡುವಾಗ, ಮೋಟಕ್ ಬೈಕ್ ಇಂಜಿನ ತುಂಬಾ ಬಿಸಿಯಾಗುತ್ತದೆ . . . ಆದ್ದರಿಂದಲೇ ಇಂಜಿನ್ ಅತಿಯಾಗಿ ಬಿಸಿಯಾಗದಂತೆ ನೋಡಿಕೊಳ್ಳಲು, ಅದನ್ನು ಕಾಪಾಡಲು ಆಂಟಿ ಫ್ರೀಜ್ ಬಹಳ ಪ್ರಾಮುಖ್ಯವಾದದ್ದಾಗಿದೆ! ಇಂಜಿನ್ ಓವರ್ ಹಿಟ್ ಅಗದಂತೆ ನೀವು ಅದರೊಳಗೆ ದ್ರವವನ್ನು ಹಾಕಬೇಕು. ಇದು ಇಂಜಿನ್ ನೊಳಗೆಲ್ಲಾ ಪೂರ್ತಿಯಾಗಿ ಹರಡಿಕೊಳ್ಳುತ್ತದೆ ಮತ್ತು ಅದನ್ನು ತಂಪಾಗಿಡುತ್ತದೆ, ಅತಿವೇಗದಲ್ಲಿ ವಾಹನ ಚಲಿಸುವಾಗಲೂ ಯಾವುದೇ ತೊಂದರೆಯಾಗುವದಿಲ್ಲ. ಇದಿಲ್ಲದೆ ಹೋದರೆ, ಇಂಜಿನ್ ಅತಿಯಾಗಿ ಬಿಸಿಯಾಗುತ್ತದೆ ಮತ್ತು ಹೊಗೆ ಬರಲಾರಂಭಿಸುತ್ತದೆ, ಕೆಲವೊಮ್ಮೆ ಅದರಿಂದ ಬೆಂಕಿಯೂ ಕಾಣಿಸಿಕೊಳ್ಳುತ್ತದೆ! ಅತಿಯಾಗಿ ಬಿಸಿಯಾಗುವ ಮೋಟರ್ ಬೈಕ್ ಇದ್ದರೆ ರೇಸ್ ಗೆಲ್ಲಲು ಆಗುವದಿಲ್ಲ. ಇದು ನಮ್ಮ ಆತ್ಮೀಕ ಜೀವಿತಕ್ಕೆ ಹೇಗೆ ಅನ್ವಯಿಸುತ್ತದೆ? ಕ್ರೈಸ್ತೀಯ ಜೀವಿತದಲ್ಲಿ ಪ್ರೀತಿ ಎಂಬದು ಮೋಟರ್ ಬೈಕ್ ನ ಆಂಟಿ ಫ್ರೀಜ್ ಗೆ ಸಮಾನವಾದದ್ದಾಗಿದೆ. ಜನರ ನಡುವೆ ಯಾವಾಗಲೂ ಗೊಂದಲಗಳಿರುತ್ತವೆ. ದೇವರು ನಮ್ಮಲ್ಲಿ ವಿವಿಧವಾದ ವ್ಯತ್ಯಾಸಗಳು ಮತ್ತು ಸ್ವಭಾವಗಳನ್ನು ಇಟ್ಟು ನಮ್ಮನ್ನು ವಿಶಿಷ್ಠರನ್ನಾಗಿ ಮಾಡಿದ್ದಾನೆ. ನಮ್ಮ ಜೀವಿತದಲ್ಲಿ ಪ್ರೀತಿ ಇಲ್ಲದಿರುವಾಗ, ನಾವು ಜಗಳಗಳು ಮತ್ತು ತಪ್ಪು ತಿಳುವಳಿಕೆಗಳಿಗೆ ಒಳಗಾಗುತ್ತೇವೆ. ಸಹಜವಾಗಿ ಇಬ್ಬರು ವ್ಯಕ್ತಿಗಳು ಜಗಳವಾಡುವದನ್ನು ನೀವು ಎಂದಾದರು ನೋಡಿದ್ದೀರೋ? ಹೌದು, ಎಲ್ಲರೂ ನೋಡಿರುತ್ತೇವೆ! ಉತ್ತಮವಾಗಿರುವ ಸಭೆಗಳಲ್ಲಿಯೂ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಮತ್ತು ನಾವು ಒಬ್ಬರಿಗೊಬ್ಬರು ಪ್ರೀತಿ ತೋರಿಸಬೇಕೆಂದು ದೇವರು ಬಯಸತ್ತಾನೆ. ಪ್ರೀತಿ ಇಲ್ಲದರುವಾಗ ಮಾತ್ರವೇ, ನಮ್ಮ ಜೀವಿತದಿಂದ ಅಥವಾ ನಮ್ಮ ಸಭೆಯಿಂದ ಹೊಗೆ ಕಾಣಿಸಿಕೊಳ್ಳಲಾರಂಭಿಸುತ್ತದೆ ಮತ್ತು ಬೆಂಕಿ ಉರಿಯ ತೊಡಗುತ್ತದೆ. ಮತ್ತು ಎಲ್ಲದಕ್ಕಿಂತ ಪ್ರಾಮುಖ್ಯವಾಗಿ, ಒಂದುವೇಳೆ ನಾನು ಮತ್ತು ನೀವುಗಳು ಪ್ರೀತಿಯನ್ನು ತೋರಿಸಲಿಲ್ಲವೆಂದರೆ, ನಾವು ಅತಿಯಾಗಿ ಬಿಸಿಯಾಗುತ್ತೇವೆ ಮತ್ತು ಓಟದಲ್ಲಿ ಸೋತುಹೋಗುತ್ತೇವೆ.

ಆಂಟಿ ಫ್ರೀಜ್ ಯಾಕೆ ಬಹಳ ಪ್ರಾಮುಖ್ಯವಾಗಿದೆ? ನಾವು ನಮ್ಮ ಕ್ರೈಸ್ತೀಯ ಜೀವಿತಕ್ಕೆ ಅಳವಡಿಸಿಕೊಳ್ಳಬೇಕಾಗಿರುವ ಅತ್ಯಂತ ಪ್ರಾಮುಖ್ಯವಾದ ಗುಣ ಪ್ರೀತಿ ಎಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ. ಇತರರಿಗೆ ಪ್ರೀತಿ ತೋರಿಸುವದು ಎಂದರೆ ಏನು? ಪ್ರೀತಿಯ ಬಗ್ಗೆ ಅರ್ಥಮಾಡಿಕೊಳ್ಳಲು 1 ಯೋಹಾನ 3:16 ನಮಗೆ ಸಹಾಯ ಮಾಡುತ್ತದೆ: "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದಿದೆ." ನಾವು ನಮ್ಮ ಜೀವಿತವನ್ನು ಇತರರಿಗೆ ಕೊಡಬೇಕೆಂದು ಸತ್ಯವೇದವು ನಮಗೆ ಹೇಳುತ್ತದೆ, ಆದರೆ ನಾವು ಕೊಡುವದು ಹೇಗೆ? ಹೇಗೆಂದರೆ, ತಿಂಡಿಯನ್ನು ತೆಗೆದು ಮೊದಲು ನಿಮ್ಮ ಸ್ನೇಹಿತನಿಗೆ ಕೊಡುವದು, ತಂದೆತಾಯಿಗಳು ಹೇಳದಿದ್ದರೂ ಅವರಿಗೆ ಸಹಾಯ ಮಾಡುವದು, ಶಾಲೆ ಮುಗಿದ ನಂತರ ಸ್ನೇಹಿತನಿಗಾಗಿ ಕಾಯುವದು, ಶಾಲೆಯನ್ನು ನಿಮ್ಮನ್ನು ದ್ವೇಷಿಸುವವರನ್ನು ದ್ವೇಷಿಸದೆ ಅವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುವದು ಮತ್ತು ಇನ್ನೂ ಇಂಥ ಅನೇಕ ಕಾರ್ಯಗಳಿವೆ. ಎಷ್ಟು ವಿಧದಲ್ಲಿ ನಾವು ಇತರರಿಗೆ ನಿಜವಾದ ಪ್ರೀತಿಯನ್ನು ತೋರಿಸಲು ಸಾಧ್ಯವಾಗುತ್ತದೆ? ವಿಧಗಳಿಗೆ ಕೊನೆಯೇ ಇಲ್ಲ! ಪ್ರೀತಿಯನ್ನು ತೋರಿಸುವ ವಿಧವನ್ನು ತಿಳಿದುಕೊಂಡ ನಂತರ, ಅದರ ಪ್ರಾಮುಖ್ಯತಯನ್ನೂ ನಾವು ಮನವರಿಕೆ ಮಾಡಿಕೊಳ್ಳಬೇಕು. ನಾವು ಮಾಡಬೇಕಾಗಿರುವ ಧಾರ್ಮಿಕ ಕಾರ್ಯಗಳೊಂದಿಗೆ ಕೆಲವನ್ನು ಮಾಡಿದರೆ ಸಾಲದು: ಸಭಯ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು, ಕಾಣಿಕೆಗಳನ್ನು ಕೊಡಬೇಕು ಮತ್ತು ತಂದೆತಾಯಿಗಳಿಗೆ ವಿಧೇಯರಾಗಬೇಕು. ನಿಮ್ಮ

ಪ್ರಾಣವನ್ನು ಕೊಡಲು ಮತ್ತು ಇತರರಿಗೆ ಹೆಚ್ಚಿನ ಆದ್ಯತಯನ್ನು ಕೊಡುವ ಪ್ರೀತಿ ನಿಮ್ಮಲ್ಲಿ ಇಲ್ಲವೆಂದರೆ ನೀವು ಮಾಡುವ ಧಾರ್ಮಿಕ ಕಾರ್ಯಗಳೆಲ್ಲವೂ ವ್ಯರ್ಥ ಎಂಬದಾಗಿ ಯೇಸು ಕ್ರಿಸ್ತನು ಹೊಸ ಒಡಂಬಡಿಕೆಯಲ್ಲಿ ಹೇಳಿದ್ದಾನೆ.

ಇಂದು ನಾವು ಅತ್ಯಂತ ಪರಿಣಾಮಕಾರಿಯಾದ ರೇಸಿಂಗ್ ಡ್ರೈವರ್ ಬಗ್ಗೆ ತಿಳಿದುಕೊಳ್ಳೋಣ . . . ರೂತಳು. ನಮ್ಮ ಜೀವಿತವನ್ನು ಇತರರಿಗೆ ಕೊಡುವದು ಹೇಗೆ ಎಂಬದರ ಕುರಿತು ಆಕೆ ಉತ್ತಮವಾದ ಉದಾಹರಣೆಯಾಗಿದ್ದಾಳೆ.

ನಾವು ಅಂಥ ಕ್ರೈಸ್ತೀಯ ಜೀವಿತಕ್ಕೆ ಆದ್ಯತೆಯನ್ನು ಕೊಡುವವರಾಗಿದ್ದೇವೆ, ಆಗ ಮಾತ್ರವೇ ಹೆಚ್ಚು ಕಾಲ ನಾವು ದೇವರ ಸೇವೆಯಲ್ಲಿರಲು ಸಾಧ್ಯವಾಗುತ್ತದೆ. ಇತರರಿಗೆ ಪ್ರೀತಿ ತೋರಿಸೋಣ ಮತ್ತು ಈ ಓಟವನ್ನು ಜಯಿಸೋಣ!

## ಐಸ್ ಬ್ರೇಕರ್ ಆಟ

ಸಂಖ್ಯೆಗಳು ಮತ್ತು ಕ್ರಿಯೆಗಳು

ಒಂದುವೇಳೆ ಸಾಧ್ಯವಾದರೆ ಹತ್ತರಿಂದ ಹನ್ನೆರೆಡು ತಂಡಗಳನ್ನು ರಚಿಸುವಂತೆ ಮಕ್ಕಳಿಗೆ ಹೇಳಿರಿ. ಚಿಕ್ಕ ಮಕ್ಕಳು ಮತ್ತು ಯೌವನಸ್ಥ ಮಕ್ಕಳು ಒಂದೇ ತಂಡದಲ್ಲಿ ಭಾಗವಹಿಸಬಹುದು ಎಂಬದನ್ನು ಮರೆಯಬೇಡಿರಿ. ತಂಡಗಳು ಸಾಲಾಗಿ ನಿಲ್ಲಬೇಕು, ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ತರಗತಿಯ ಸಹ ವಿದ್ಯಾರ್ಥಿಯ ಎದುರಿನಲ್ಲಿ ನಿಲ್ಲಬೇಕು. ಒಂದುವೇಳೆ ಮಕ್ಕಳನ್ನು ಸರಿಸುವದು ನಿಮಗೆ ಇಷ್ಟವಿಲ್ಲವೆಂದರೆ, ನೀವು ಕುಳಿತಿರುವ ಸ್ಥಳದಲ್ಲಿದ್ದುಕೊಂಡೇ ಚಟುವಟಿಕೆಯನ್ನು ನಡೆಸಬಹುದು.

ಪ್ರತಿಯೊಂದು ಸಂಖ್ಯೆಯು ಕಾರ್ಯವನ್ನು ನಡೆಸಬೇಕು ಎಂಬದನ್ನು ವಿವರಿಸಿರಿ.





1. ನಾವು ನಮ್ಮ ಸಹಪಾಠಿಗಳಿಗೆ ಹೈ ಫೈ ಕೊಡಬೇಕು.
2. ಕುಳಿತುಕೊಳ್ಳಬೇಕು.
3. ಕೈಗಳನ್ನು ಮೇಲೆತ್ತಿ ಜಿಗಿಯಬೇಕು.
4. ಹಿಂದಕ್ಕೆ ತಿರುಗಬೇಕು.
5. ಸುಲಭ ಚಲನೆಗಳು (ಇಲ್ಲಿ ಬಹುಶಃ ಕೆಲವು ಹಾಡುಗಳನ್ನು ಹಾಡಿಸಬಹುದು).

ನಾಯಕನು ಸಂಖ್ಯೆಯನ್ನು ಹೇಳುವನು ಮತ್ತು ವಿದ್ಯಾರ್ಥಿಗಳು ಅದಕ್ಕೆ ತಕ್ಕದಾದ ಕಾರ್ಯವನ್ನು ಮಾಡಬೇಕು. ಕ್ರಿಯೆಗಳನ್ನು ಮಾಡುವಾಗ ಯಾರು ತಪ್ಪು ಮಾಡುತ್ತಾರೋ ಅವರು ಕುಳಿತುಕೊಳ್ಳಬೇಕು ಆದರೆ ಆದರೆ ಐಸ್ ಬ್ರೇಕ್ ಆಟಗಳ ಉದ್ದೇಶ ಎಲ್ಲರೂ ಭಾಗವಹಿಸುವಂತೆ ಮಾಡುವದಾಗಿದೆ. ಎಲ್ಲರೂ ಸಂತೋಷದಿಂದಿರುವದು ಇಲ್ಲಿ ಪ್ರಾಮುಖ್ಯವಾದ ಸಂಗತಿಯಾಗಿದೆ

## ಸತ್ಯವೇದ ಪಾಠ

ರೂತಳು ಪ್ರೀತಿಸಿದಳು


1. ರೂತಳು (ಮೋವಾಬ್ ಎಂಬ ಪ್ರದೇಶದ) ಸುಂದರವಾದ ಮೊವಾಬ್ಯ ಸ್ತ್ರೀಯಾಗಿದ್ದು, ಮೊವಾಬಿನಲ್ಲಿ ಜೀವಿಸುತ್ತಿದ್ದ ಇಸ್ರಾಯೇಲ್ ಕುಟುಂಬದ ವ್ಯಕ್ತಿಯನ್ನು ಮದುವೆ ಮಾಡಿಕೊಂಡಿದ್ದಳು. ರೂತಳು ಮತ್ತು ಆಕೆಯ ಗಂಡ, ಆಕೆಯ ಗಂಡನ ಪರಿವಾರದವರೊಂದಿಗೆ ಜೀವಿಸುತ್ತಿದ್ದರು. ಕೆಲವು ದಿವಸಗಳಾದ ನಂತರ, ಆಕೆಯ ಗಂಡನ ತಂದೆ ಮೃತಪಟ್ಟನು ಮತ್ತು ಇನ್ನೂ ಕೆಲವು ದಿವಸಗಳಾದ ನಂತರ ಆಕೆಯ ಗಂಡ ಮತ್ತು ಗಂಡನ ಅಣ್ಣನೂ ಮೃತಪಟ್ಟನು. ಈಗ ರೂತಳು, ಆಕೆಯ ಅತ್ತಿಗೆ ಮತ್ತು ಅತ್ತೆ, ನವೋಮಿ ಒಂಟಿಯಾಗಿದ್ದರು ಯಾಕಂದರೆ ಅವರೆಲ್ಲರೂ ವಿಧವೆಯರಾಗಿದ್ದರು (ಅವರ ಗಂಡಂದಿರು ಮೃತಪಟ್ಟಿದ್ದರು).
   *ಗಂಡ ಎಂಬ ಪದ ಬರುವಾಗ: ನಿಮ್ಮ ಹಣೆಯ ಮೇಲಿಂದ ಕೈಯನ್ನು ಇಳಿಸುವಾಗ ಬೆರಳುಗಳನ್ನು ತೆರೆಯಿರಿ.*












2. ಆಗಿನ ದಿನಗಳಲ್ಲಿ ಒಬ್ಬ ಸ್ತ್ರೀ ಗಂಡನನ್ನು ಕಳೆದುಕೊಂಡರೆ, ಆಕೆಯ ಜೀವನ ಬಹಳ ಕಷ್ಟಕರವಾಗಿರುತಿತ್ತು. ತನ್ನ ಜೀವನೋಪಾಯಕ್ಕೆ ದುಡಿಯಲು ಸಹ ಆಕೆಗೆ ಬಹಳ ಕಷ್ಟವಾಗುತ್ತಿತ್ತು. ನಮ್ಮ ಗಂಡಂದಿರು ಮೃತಪಟ್ಟಿರುವದರಿಂದ ನಮಗೆ ಯಾರು ಸಹಾಯ ಮಾಡುವರು ಎಂಬದಾಗಿ ಆ ಮೂವರು ಸ್ತ್ರೀಯರು ಯೋಚಿಸಿರಬಹುದು? ನವೋಮಿ ತನ್ನಿಬ್ಬರು ಸೊಸೆಯಂದಿರಿಗೆ, "ಹೋಗಿರಿ, ನಿಮ್ಮ ಕುಟುಂಬದವರೊಂದಿಗೆ ಜೀವಿಸಿರಿ, ಬೇಕಿದ್ದರೆ ಮದುವೆ ಮಾಡಿಕೊಳ್ಳಿರಿ ಆದರೆ ನಾನು ನನ್ನ ಸ್ವಂತ ದೇಶವಾದ ಇಸ್ರಾಯೇಲಿಗೆ ಹೋಗುತ್ತೇನೆ" ಎಂದು ಹೇಳಿದಳು. ನವೋಮಿಯನ್ನು ಬಿಟ್ಟು ಹೋಗಲು ಅವರಿಗೆ ಇಷ್ಟವಿರಲಿಲ್ಲ, ಆದರೆ ಕಡೆಯಲ್ಲಿ ರೂತಳ ಗಂಡನ ಅತ್ತಿಗೆ ತಮ್ಮ ಕುಟುಂಬದವರ ಬಳಿಗೆ ಹೋಗುವ ತೀರ್ಮಾನ ತೆಗೆದುಕೊಂಡಳು.

*ಹೋಗಲು/ಹೋಗುವ ಪದ ಬರುವಾಗ: ನಿಮ್ಮ ಕೈಗಳು ಕೆಳಗಿರವಾಗ ಬೆರಳುಗಳನ್ನು ತೆರದಿಡಿರಿ, ಮೇಲೆತ್ತುವಾಗ ಬಿಗಿ ಹಿಡಿಯಿರಿ.*

3. ರೂತಳಿಗೆ ಅತ್ತೆಯನ್ನು ಒಂಟಿಯಗಿ ಬಿಟ್ಟು ಹೋಗಲು ಮನಸ್ಸಿರಲಿಲ್ಲ ಆದ್ದರಿಂದ, "ನಾನು ನಿನ್ನ ಜೊತೆಯಲ್ಲಿಯೇ ಬರುತ್ತೇನೆ! ನಾನು ನಿನಗೆ ಮಗಳಾಗಿರುತ್ತೇನೆ, ನಿನ್ನ ಜನರೇ ನನ್ನ ಜನರಾಗಿರುವರು ಮತ್ತು ನಿನ್ನ ದೇವರೇ ನನ್ನ ದೇವರಾಗಿರುವನು" ಎಂದು ಹೇಳಿದಳು. ನವೋಮಿಗೆ ಆಕೆಯ ಮಾತುಗಳು ಗಂಭೀರವಾಗಿವೆ ಮತ್ತು ಅವುಗಳನ್ನು ಬದಲಾಯಿಸಲು ಆಗುವದಿಲ್ಲ ಎಂದು ಗೊತ್ತಾಯಿತು, ಆದ್ದರಿಂದ ರೂತಳು ನವೋಮಿಯೊಂದಿಗೆ ಬೆತ್ಲೆಹೇಮಿಗೆ (ನವೋಮಿ ಅಲ್ಲಿಯೇ ಜೀವಿಸುತ್ತಿದ್ದಳು) ಹೋದಳು. ಆ ಸಮಯದಲ್ಲಿ ಅವರಿಗೆ ಗಂಡಂದಿರು ಇರಲಿಲ್ಲ, ಆದರೆ ಜೊತೆಯಲ್ಲಿದ್ದೇವಲ್ಲಾ, ನಮ್ಮೊಂದಿಗೂ ಒಬ್ಬರಿದ್ದಾರಲ್ಲಾ ಎಂಬ ಸಂತೋಷ ಅವರಿಗಿತ್ತು.




*ನಮ್ಮೊಂದಿಗೆ ಎಂಬ ಪದ ಬರುವಾಗ: ನಿಮ್ಮ ಮುಷ್ಟಿಯನ್ನು ಬಿಗಿಹಿಡಿದು, ಕೈಗಳನ್ನು ಒಟ್ಟಾಗಿ ಸೇರಿಸಿರಿ.*

4. ಅವರು ಬೆತ್ಲೆಹೇಮಿಗೆ ಬಂದಾಗ, ರೈತರು ಜವೆಗೋಧಿಯ ಕೊಯ್ಲಲು ಕಟಾವು ಮಾಡುತ್ತಿದ್ದರು. ಕೊಯ್ಯುವವರು ಹಾಯಿಸದೆ ಹೋಗುತ್ತಿದ್ದ ಜವೆಗೋಧಿಯನ್ನು ಕೂಡಿಸಿಕೊಳ್ಳಲು ರೂತಳು ಹೋಗುತ್ತಿದ್ದಳು, ಯಾಕಂದರೆ ತನಗೆ ಮತ್ತು ನವೋಮಿಗೆ ಜೀವನಕ್ಕೆ ಸಹಾಯ ಮಾಡಲು ಯಾರೂ ಇರಲಿಲ್ಲ. ಸತ್ಯವೇದ ಹೇಳುವದೇನೆಂದರೆ ನೆಲದ ಮೇಲೆ ಬೀಳುವ ಧಾನ್ಯ ಮತ್ತು ಕಾಳುಗಳು ಹಾಗೂ ಭೂಮಿಯ ಕಡೆಯಲ್ಲಿ ಬೆಳೆಯುವ ಗಿಡಗಳ ಕಾಳುಗಳು ಬಡವರಿಗೆ ಬಿಡಬೇಕು. ಆದ್ದರಿಂದ ರೂತಳು ತಮ್ಮಿಬ್ಬರ ಆಹಾರಕ್ಕಾಗಿ ಜವೆಗೋಧಿಯನ್ನ ಕೂಡಿಸಿಕೊಳ್ಳಲು ಹೋಗುತ್ತಿದ್ದಳು.



*ಗಿಡಗಳು ಪದ ಬರುವಾಗ: ನಿಮ್ಮ ಎಡಗೈ ಬೆರಳುಗಳಿಂದ ವೃತ್ತವನ್ನು ಮಾಡಿರಿ ಮತ್ತು ಬಲಗೈಯನ್ನು ಅದರೊಳಗೆ ಇಟ್ಟು ಮೇಲಕ್ಕೆ ತೆಗೆಯಿರಿ.*

5. ರೂತಳು ಕೊಯ್ಯುವವರ ಹಿಂದೆ ಹೋಗುವ ಹೆಚ್ಚು ಸಮಯ ಕೆಲಸ ಮಾಡುತ್ತಿದ್ದಳು, ಬಿಸಿಲಿನ ಬಗ್ಗೆ ಆಕೆ ಯೋಚಿಸಲಿಲ್ಲ. ನವೋಮಿ ಅವಳ ವಿಷಯದಲ್ಲಿ ಹೆಚ್ಚು ಚಿಂತಿಸುತ್ತಿದ್ದಳು: ಆಕೆ ಅವಳಿಗೆ ಸಹಾಯ ಮಾಡಿದ್ದಳು, ಆದ್ದರಿಂದ ರೂತಳು ಸಹ ಅವಳ ಬಗ್ಗೆ ಚಿಂತಿಸುತ್ತಿದ್ದಳು. ಈ ಕಾರಣದಿಂದಲೇ ನವೋಮಿಗೆ ಆಹಾರ ತರುವ ಸಲುವಾಗಿ ಆಕೆ ಬಹಳವಾಗಿ ದುಡಿಯುತ್ತಿದ್ದಳು.



ಚಿಂತಿಸುತ್ತಿದ್ದಳು ಪದ ಬರುವಾಗ: ಎಡಗೈಯನ್ನು ಮಧ್ಯದಲ್ಲಿಡಿರಿ, ನಿಮ್ಮ ಬಲಗೈಯನ್ನು ಮೇಲಿಂದ ಕೆಳಗೆ ತನ್ನಿರಿ.








6. ರೂತಳು ಹಕ್ಕಲಾಯುತ್ತಿದ್ದ ಭೂಮಿ ನವೋಮಿಯ ಸಂಬಂಧಿಕನದ್ದಾಗಿತ್ತು. ಅವನ ಹೆಸರು ಬೋವಜ್. ಆಕೆ <u>ಕೆಲಸ</u> ಮಾಡುವದನ್ನು ಬೋವಜನು ನೋಡಿದಾಗ, ತನ್ನ <u>ಕೆಲಸಗಾರನಿಗೆ</u> "ಈಕೆ ಯಾರು?" ಎಂದು ಕೇಳಿದನು. "ಈಕೆ ಮೋವಾಬಿನಿಂದ ನವೋಮಿಯೊಂದಿಗೆ ಬಂದಿರವ ಸ್ತ್ರೀ. ನಾನು ನೆಲದ ಮೇಲೆ ಬೀಳುವ ಸಿವುಡುಗಳ ನಡುವೆ ಹಕ್ಕಲಾಯಬಹುದೇ ಎಂದು ನನ್ನನ್ನು ಕೇಳಿಕಂಡಳು. ಅದರಂತೆ ಬೆಳಗ್ಗಿನಿಂದ ಕೆಲಸ ಮಾಡುತ್ತಿದ್ದಾಳೆ" ಎಂದು ಅವನು ಹೇಳಿದನು. ನವೋಮಿ ಮತ್ತು ರೂತಳು ತಮ್ಮ <u>ಗಂಡಂದಿರನ್ನು</u> ಕಳೆದುಕೊಂಡ ನಂತರ ರೂತಳು ನವೋಮಿಯನ್ನು ಹೇಗೆ ನೋಡಿಕೊಳ್ಳುತ್ತಿದ್ದಾಳೆ ಎಂಬ ವಿಷಯವನ್ನು ಬೋವಜನು ತಿಳಿದುಕೊಂಡಿದ್ದನು. ಬೋಬನು ಆಕೆಗೆ ನೀನು ಯಾವ ಸಿವುಡುಗಳನ್ನು ಬೇಕಾದರೂ ಹಾದುಕೊಳ್ಳಬಹುದು, ನಿನಗೆ ಯಾರೂ ತೊಂದರೆ ಕೊಡುವದಿಲ್ಲ ಮತ್ತು ನೀನು ನನ್ನ ಹೊಲದಲ್ಲಿಯೇ <u>ಕೆಲಸ</u> ಮಾಡಬಹುದು ಎಂಬದಾಗಿ ಹೇಳಿದನು.



*<u>ಕೆಲಸ</u> ಪದ ಬರುವಾಗ: ಮುಷ್ಟಿಯನ್ನು ಬಿಗಿ ಹಿಡಿದು, ನಿಮ್ಮ ಬಲಗೈಯಿಂದ ಎಡಗೈಯನ್ನು ಮುಟ್ಟಿರಿ.*

7. ರೂತಳು ಸಂಜೆಯ ತನಕ ಹಕ್ಕಲಾಯ್ದು ಕೊಂಡಳು. ಅವಳು ಹಕ್ಕಲಾಯ್ದದ್ದು ತನ್ನ ಸಂಬಂಧಿಕನಾದ ಬೋವಜನ ಹೊಲದಲ್ಲಿ ಎಂಬದು ನವೋಮಿಗೆ ಗೊತ್ತಾದಾಗ, ಆಕೆ ಒಂದು <u>ಯುಕ್ತವಾದ</u> ಸಲಹೆಯನ್ನು ಅವಳಿಗೆ ತಿಳಿಸಿದಳು. ಆಕೆ ಮತ್ತು ರೂತಳು ತಮ್ಮ ಕುಟುಂಬದ ಹೊಲವನ್ನು ಬಿಡಿಸಿಕೊಳ್ಳಬೇಕೆಂಬದಾಗಿತ್ತು. ಅದರ ಪರಿಣಾಮವಾಗಿ ಬೋವಜನು ನವೋಮಿಗೆ ಸೇರಿದ ಭೂಮಿಯನ್ನು ಹಿಂದಿರುಗಿಸಿದನು ಮತ್ತು ನವೋಮಿಗೆ ಹಾಗೂ ರೂತಳು ಸ್ವಂತ ಮನೆಯುಳ್ಳವರಾದರು. ಬೋವಜನು ರೂತಳನ್ನು ಮದುವೆ ಮಾಡಿಕೊಂಡನು ಮತ್ತು ಅವರಿಗೆ ಮಗನು ಹುಟ್ಟಿದಾಗ ಅವರು ನವೋಮಿಯ ಮನೆಯಲ್ಲಿ ಔತಣ ಮಾಡಿಸಿದರು. <u>ಯುಕ್ತವಾದ</u> ಯೋಜನೆಯ ಮೂಲಕ ನವೋಮಿ ಮತ್ತು ರೂತಳು ಪುನಃ ಮನೆ ಮತ್ತು ಕುಟುಂಬವನ್ನು ಪಡೆದುಕೊಂಡರು.



*<u>ಯುಕ್ತ</u> ಎಂಬ ಪದ ಬರುವಾಗ: ನಿಮ್ಮ ಬಲಗೈ ಬೆರಳಿನಿಂದ ಹಣೆಯನ್ನು ಕೆರೆದುಕೊಳ್ಳಿರಿ.*

ರೂತಳ <u>ಗಂಡನು</u> ಮೃತಪಟ್ಟಿದರು, ನಾನು ಆತನಿಗೆ ವಿಧೇಯಳಾಗಬೇಕು ಮತ್ತು ಆತನ ಪ್ರೀತಿಯನ್ನು ಇತರರಿಗೆ ತೋರಿಸಬೇಕು ಎಂಬದಾಗಿ ದೇವರು ಬಯಸುತ್ತಾನೆ ಎಂಬದನ್ನು ಆಕೆ ಅರಿತುಕೊಂಡಳು. ತನ್ನ ಅತ್ತೆಯನ್ನು ಒಂಟಿಯಾಗಿ ಬಿಟ್ಟು <u>ಹೋಗದೆ</u>, <u>ಆಕೆಯೊಂದಿಗೆ</u> ಇಸ್ರಾಯೇಲಿಗೆ ಹೋಗಬೇಕೆಂದು, ರೂತಳು ತೆಗೆದುಕೊಂಡ ತೀರ್ಮಾನವು ಅತ್ಯಂತ ಮಹತ್ವವುಳ್ಳದ್ದಾಗಿತ್ತು. ಸಿವುಡುಗಳ ಮಧ್ಯದಲಿ ಹಕ್ಕಲಾಯುವ <u>ಕೆಲಸ</u> ಎಂದರೆ ಏನು ಎಂಬದು ನಿಮಗೆ ಗೊತ್ತಿಲ್ಲದಿರಬಹುದು, ಆದರೆ ಕಷ್ಟದ ಪರಿಸ್ಥಿತಿಗಳಲ್ಲಿಯೂ ಇತರರ ಬಗ್ಗೆ ಚಿಂತಿಸುವದೆಂದರೆ ಏನು ಎಂಬದು ಖಂಡಿತವಾಗಿಯೂ ನಿಮಗೆ ಗೊತ್ತಿದೆ ಎಂದು ನಾನು ನೆನೆಸುತ್ತೇನೆ. ನೀವು ಇತರರನ್ನು ಪ್ರೀತಿಸುವಾಗ ದೇವರು ನಿಮ್ಮನ್ನು ಆಶೀರ್ವದಿಸುತ್ತಾನೆ ಯಾಕಂದರೆ, ಅದು ಒಳ್ಳೆಯ ಕಾರ್ಯ ಮಾತ್ರವಲ್ಲ ಬದಲಾಗಿ <u>ಯುಕ್ತವಾದ</u> ಕಾರ್ಯವೂ ಆಗಿದೆ. ಕಷ್ಟಕರವಾದ ಪರಿಸ್ಥಿತಿಗಳಲ್ಲಿ, ನಾವು ಯಾರಿಗೆ ದೇವರ ಪ್ರೀತಿಯನ್ನು ತೋರಿಸಬೇಕೋ ಅಂಥವರನ್ನು ದೇವರೇ ನಮ್ಮ ಹತ್ತಿರಕ್ಕೆ ಬರಮಾಡುತ್ತಾನೆ ಎಂಬದನ್ನೂ ನಾವು ಕಲಿತುಕೊಳ್ಳುತ್ತೇವೆ

## ಪುನರಾವರ್ತನೆಯ ಠಾಣೆಗಳು

ಠಾಣೆಗಳ ಪುನರಾವರ್ತನೆಗಾಗಿ 3 ಗುಂಪುಗಳನ್ನು ಮಾಡಿರಿ

### ಗ್ಯಾರೇಜ್ ಕರಕುಶಲತೆ

ಮೋಟೋಕ್ರಾಸ್ ಗಾಗಲ್ಸ್

ಪ್ರತಿಯೊಬ್ಬ ವಿದ್ಯಾರ್ಥಿಗೆ ಹಂಚಿರಿ:

ಗಾಗಲ್ ಪ್ಯಾಟ್ರನ್ ಇರುವ ಒಂದು ಹಾಳೆ

18cm x 3.5cm ಅಳತೆಯ 1 ಕೆಂಪು ಸೆಲೋಫೇನ್ ಹಾಳೆ

50cm ರಿಬ್ಬನ್



- ಗಾಗಲ್ಸ್ ನಿಂದ ಬಿಳಿ ಹಿನ್ನಲೆಯನ್ನು ಕತ್ತರಿಸಿರಿ ಮತ್ತು ಮೂಲೆಗಳಲ್ಲಿರುವ ವೃತ್ತಗಳನ್ನೂ ಕತ್ತರಿಸಿರಿ.
- ನಿಮ್ಮ ಮೆಚ್ಚಿನ ಬಣ್ಣದಿಂದ ಗಾಗಲ್ಸ್ ಗಳಿಗೆ ಬಣ್ಣ ಹಚ್ಚಿರಿ.
- ಹಿಂಬದಿಯಲ್ಲಿ, ನಿಮ್ಮ ಸೆಲೋಫೇನ್ ಸ್ಟ್ರಿಪ್ ಅಂಟಿಸಿರಿ, ಅದರಿಂದ ಗಾಗಲ್ಸ್ ಮಧ್ಯಭಾಗ ಕವರ್ ಆಗುತ್ತದೆ.

ಎರಡೂ ಬದಿಗಳಿಗೆ ರಿಬ್ಬರ್ ಕಟ್ಟಿರಿ, ಆಗ ಮಕ್ಕಳು ಅದನ್ನು ಸುಲಭವಾಗಿ ಧರಿಸಿಕೊಳ್ಳಲು ಸಾಧ್ಯವಾಗುತ್ತದೆ.

## ಸ್ನಾಕ್ ಸ್ಟಾಂಡ್



ಹಾರ್ಟ್ ಶೇಪ್ ಸ್ಯಾಂಡ್ ವಿಚ್

ಸಾಮಗ್ರಿಗಳು:

- ವೈಟ್ ಬ್ರೆಡ್
- ಹಾರ್ಟ್ ಕೂಕಿ ಕಟ್ಟರ್ ಅಥವಾ ಸಾಧಾರಣ ಹಾಳೆಯ ಹೃದಯ
- ಸ್ಟ್ರಾಬೆರಿ ಜಾಮ್ ಬಾಟಲಿ
- ಕತ್ತಿ (ಒಂದುವೇಳೆ ಕೂಕಿ ಕಟ್ಟರ್ ಇಲ್ಲದಿದ್ದರೆ)
- ಪ್ಲಾಸ್ಟಿಕ್ ಸ್ಪೂನ್

ಸೂಚನೆಗಳು:

1. ತರಗತಿಗೆ ಬೇಕಾಗುವಷ್ಟು ಬ್ರೆಡ್ ಹಾರ್ಟ್ ಗಳನ್ನು ಮಾಡಿರಿ.
2. ಬ್ರೆಡ್ ಹಾರ್ಟ್ ನ ಅರ್ಧದಷ್ಟು ಭಾಗಕ್ಕೆ ಜಾಮ್ ಹಾಕಿರಿ.
3. ಜಾಮ್ ಹಾಕಿರುವ ಬ್ರೆಡ್ ಹಾರ್ಟ್ ಮೇಲೆ ಮತ್ತೊಂದು ಬ್ರೆಡ್ ಹಾರ್ಟ್ ತುಂಡು ಇಡಿರಿ.

ಈಗ ಸಿದ್ಧವಾಗಿದೆ!!! ಸ್ವಾದಿಷ್ಟವಾದ ಸ್ಯಾಂಡ್ ವಿಚ್ ಆಸ್ವಾದಿಸಿರಿ!!!


## ಡ್ರೈವಿಂಗ್ ಕ್ಲಾಸ್

"ಡ್ರೈವಿಂಗ್ ಕ್ಲಾಸ್" ಗೆ ಸ್ವಾಗತ, ಇಲ್ಲಿ ನಾವು ವಿದ್ಯಾರ್ಥಿಗಳ ಪುಸ್ತಕದನುಸಾರ ಕಾರ್ಯಗಳನ್ನು ಮಾಡೋಣ. ದಿನದ ವಾಕ್ಯದೊಂದಿಗೆ, ದಿನದ ಪಾಠವನ್ನು ಒಟ್ಟಾಗಿ ಹೇಳುವ ಮೂಲಕ ತರಗತಿಯನ್ನು ಪ್ರಾರಂಭಿಸೋಣವೇ? ಪ್ರಾರಂಭಿಸೋಣ!!!









## ಪ್ರಶ್ನೆಗಳು ಮತ್ತು ಉತ್ತರಗಳು

**1. ದೇವರು ಲೋಕದಲ್ಲಿರುವ ದುಷ್ಟರನ್ನೆಲ್ಲಾ ಯಾಕೆ ಸಂಹಾರ ಮಾಡುವದಿಲ್ಲ?**

ದೇವರು ಎಲ್ಲರನ್ನೂ ಪ್ರೀತಿಸುತ್ತಾನೆ ಮತ್ತು ಅವರು ತಮ್ಮ ಎಲ್ಲಾ ದುಷ್ಟಕಾರ್ಯಗಳಿಗಾಗಿ ಪಶ್ಚಾತ್ತಾಪಪಟ್ಟು ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಬಯಸುತ್ತಾನೆ. ದೇವರು ದುಷ್ಟರನ್ನೆಲ್ಲಾ ನಾಶಮಾಡಬೇಕೆಂದು ಬಯಸುವದು ಅತ್ಯಂತ ಅಪಾಯಕಾರಿ ಸಂಗತಿಯಾಗಿದೆ ಯಾಕಂದರೆ ನಮ್ಮೆಲ್ಲರ ಹೃದಯಗಳಲ್ಲಿ ದುಷ್ಟವಾದ ಆಲೋಚನೆಗಳು ನೆಲೆಯಾಗಿವೆ, ಆದ್ದರಿಂದ ನಾವು ಸಹ ಉಳಿಯದೆ ನಾಶವಾಗುತ್ತೇವೆ!

**2. ನಾವು ಎಲ್ಲರೊಂದಿಗೆ ಸ್ನೇಹದಿಂದಿರಬೇಕೇ?**

ನಾವು ಇತರರನ್ನು ಪ್ರೀತಿಸಬೇಕು, ಅನ್ಯೋನ್ಯವಾಗಿರಬೇಕು ಮತ್ತು ಎಲ್ಲರೊಂದಿಗೆ ಸ್ನೇಹಪೂರ್ವಕವಾಗಿ ನಡೆದುಕೊಳ್ಳಬೇಕು. ಆದರೂ, ಒಂದುವೇಳೆ ಯಾರಾದರೂ ಒರಟಾಗಿ ನಡೆದುಕೊಳ್ಳುವದನ್ನು ಮುಂದುವರೆಸಿದರೆ, ನಾವು ಅವರ ಸ್ನೇಹದಿಂದ ಹೊರಬರಬೇಕು. ನಾವು ನಮ್ಮ ವೈರಿಗಳನ್ನೂ ಪ್ರೀತಿಸಬೇಕು, ಆದರೆ ಯಾವಾಗಲೂ ಅವರ ಸ್ನೇಹಿತರಾಗಿರುವ ಅವಶ್ಯಕತೆ ಇಲ್ಲ.

**3. ನಾನು ನಿಜವಾಗಿಯೂ ಇತರರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೇ?**

ಹೌದು, ನಾವು ಇತರರನ್ನು ನಮಗಿಂತ ಶ್ರೇಷ್ಠರೆಂದು ಭಾವಿಸಬೇಕು. ಹಾಗೆಯೇ, ನಾವು ಯೇಸು ಕ್ರಿಸ್ತನ ಹಾಗೆ ಜೀವಿಸಬೇಕೆಂದು ಬಯಸಿದರೆ, ನಮಗಿಂತ ಇತರರಿಗೇ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

**4. ನವೋಮಿಯ ಸ್ವಂತ ಊರು ಯಾವುದು**

ಇಸ್ರಾಯೇಲಿನಲ್ಲಿ, ಯೆಹೂದದ ಬೆತ್ಲೆಹೇಮ್.

**5. ನವೋಮಿಯ ಮೊದಲ ಸೊಸೆಯ ಹೆಸರು ಏನು?**

ಓರ್ಫ








| | | | | | | | | |
|---|---|---|---|---|---|---|---|---|
| ರ | ಯ್ಲು | ಟ್ | ಧ | ಧಿ | ಹೊ | ವಿ | ಫ್ | ಶಿ |
| ಕೊ | ಋ | ಕೂ | ಗೋ | ಹ | ಯ್ಲು | ಧೇ | ಗಂ | ಡ |
| ನೇ | ಸೌ | ವೆ | ಡಿ | ಧೇ | ತೆ | ಯ | ಪ್ರೀ | ಬ |
| ನ | ಜ | ಲಿ | ಕ್ಕ ಕ್ಕ | ಸು | ರೂ | ತೆ | ಳು | ಮ್ |
| ಬೋ | ಬ | ಜ | ನು | ಹಿಂ | ವ | ಹ್ | ವೆ | ಹಿ |
| ಮಿ | ರೂ | ಹ | ಮ್ | ಬಾ | ಯಿ | ದು | ತೆ | ಕ್ಕ |
| ಧೇ | ಹ | ತ | ಲ | ಲಿ | ಮ | ವಿ | ಹ | ರೂ |
| ಲಿ | ಕ್ಕ | ತೆ | ಳು | ಸು | ಪ್ರೀ | ತಿ | ಕ್ಕ | ಳು |
| ಹೊ | ಲ | ಬೆ | ತ್ಲೆ | ಹೇ | ಮ್ | ಮೆ | ಲು | ವಿ |

1. ನವೋಮಿಯ ಗಂಡ ಮತ್ತು ಮಕ್ಕಳಿಗೆ ಏನಾಯಿತು? ಅವರು ಮೃತಪಟ್ಟರು.
2. ನವೋಮಿಗೆ ರೂತಳು ಮತ್ತು ಓರ್ಫಳಿಗೆ ಏನು ಹೇಳಿದಳು? ಅವರು ಏನು ಮಾಡಿದರು? ಮೋವಾಬಿನಲ್ಲಿಯೇ ಇರಿ ಎಂದು ಹೇಳಿದಳು. ಓರ್ಫಳು ಮೋವಾಬಿಗೆ ಹೋದಳು. ರೂತಳು ನವೋಮಿಯೊಂದಿಗೆ ಹೋದಳು.
3. ರೂತಳು ತನ್ನ ಪ್ರೀತಿಯನ್ನು ಹೇಗೆ ತೋರಿಸಿದಳು? ನವೋಮಿಯ ಪೋಷಣೆಗಾಗಿ ಆಕೆ ಸಿವುಡುಗಳ ನಡುವೆ ಹಕ್ಕಲಾಯಲು ಹೋದಳು.
4. ನವೋಮಿ ತನ್ನ ಪ್ರೀತಿಯನ್ನು ಹೇಗೆ ತೋರಿಸಿದಳು? ಆಕೆ ರೂತಳನ್ನು ತನ್ನ ಮನೆಗೆ ಸ್ವಾಗತಿಸಿಕೊಂಡಳು ಮತ್ತು ಆಕೆಯೊಂದಿಗಿರಲು ಬಯಸಿದಳು.
5. ಬೋವಜನು ಯಾವ ರೀತಿ ತನ್ನ ಪ್ರೀತಿಯನ್ನು ತೋರಿಸಿದನು? ಅವನು ರೂತಳ ಬಿಡುಗಡೆಗಾಗಿ ಹೊಲವನ್ನು ಬಿಡಿಸಿಕೊಂಡನು ನಂತರ ಅವಳನ್ನು ಮದುವೆ ಮಾಡಿಕೊಂಡನು.








ಚಿತ್ರಗಳನ್ನು ಕ್ರಮವಾಗಿ ಜೋಡಿಸಲು ಬಾಕ್ಸ್ ಗಳಲ್ಲಿ ಸರಿಯಾದ ಸಂಖ್ಯೆಯನ್ನು ಬರೆಯಿರಿ

## ರೆಡಿ, ಸೆಟ್, ಆಟಗಳು

**ರನ್!! (ವ್ಯಕ್ತಿಗತವಾಗಿ)**



**ಇದು ಸಂಪ್ರದಾಯಬದ್ಧ "ಟ್ಯಾಗ್" ಆಟದ ವಿಭಿನ್ನ ರೂಪವಾಗಿದೆ. ಈ ಆಟಕ್ಕಾಗಿ ಯಾವುದಾದರೊಂದು ಕ್ಷೇತ್ರವನ್ನು ಗುರುತಿಸುವದು ಅವಶ್ಯವಾಗಿದೆ ಮತ್ತು ಪ್ರತಿಯೊಂದು ಮೂಲೆಯಲ್ಲಿ ಸುರಕ್ಷಿತ ಕ್ಷೇತ್ರವಾಗಿ ಉಪಯೋಗಿಸಲು ಒಂದು ಭಾಗವನ್ನು ಗುರುತಿಸಿಕೊಳ್ಳಿರಿ (ಮೂಲ ಸ್ಥಾನ ಅಥವಾ ಆಶ್ರಯ).**

**ಈ ಆಟದಲ್ಲಿ ಕೆಳಗಿನ ಸಂಗತಿಗಳು ಇರುತ್ತವೆ:**

**ಭಾಗವಹಿಸುವ ಮಕ್ಕಳೆಲ್ಲರೂ ಆಡುವ ಸ್ಥಳದೊಳಗೆ ಇರಬೇಕು. ಇತರರನ್ನು ಹಿಡಿಯಲು ಒಂದು ಮಗುವನ್ನು ನೇಮಿಸಬೇಕು. ಶಿಕ್ಷಕಿ "ರನ್" ಎಂದು ಕೂಗುವಾಗ ನೇಮಕವಾಗಿರುವ ಮಗು, ಮುಟ್ಟಲು ಎಲ್ಲರ ಹಿಂದೆ ಓಡಬೇಕು, ಯಾವ ಮಗುವನ್ನು ಓಡಿಸುವ ಮಗು ಮುಟ್ಟುತ್ತದೋ ಅವರು ಆಟದಿಂದ ಹೊರಗೆ ಹೋಗಬೇಕು. ಓಡುವವರೆಲ್ಲರೂ ಸುರಕ್ಷಿತ ಸ್ಥಳದೊಳಗೆ ಹೋಗಲು ಪ್ರಯತ್ನಿಸಬೇಕು ಯಾಕಂದರೆ ಅದರೊಳಗೆ ಅವರು ಸುರಕ್ಷಿತರಾಗಿರುತ್ತಾರೆ ಮತ್ತು ಅದರೊಳಗಿರುವಾಗ ಅವರನ್ನು ಮುಟ್ಟಿದರೆ ಅವರು ಆಟವನ್ನು ಬಿಡುವ ಅವಶ್ಯಕತೆ ಇರುವದಿಲ್ಲ. ಎಲ್ಲರೂ ಸುರಕ್ಷಿತ ಸ್ಥಳ ಸೇರಿದ ನಂತರ ಶಿಕ್ಷಕಿ ಮತ್ತೊಮ್ಮೆ "ರನ್" ಎಂದು ಕೂಗಬೇಕು. ಎಲ್ಲರೂ ಸುರಕ್ಷಿತ ಸ್ಥಳವನ್ನು ಬಿಟ್ಟು ಮತ್ತೊಂದು ಆಶ್ರಯ ಸ್ಥಳಕ್ಕೆ ಹೋಗಬೇಕು. ಒಂದುವೇಳೆ ಅವರು ಅದೇ ಸ್ಥಳದಲ್ಲಿ ಉಳಿದರೆ, ಅವರು ಆಟದಿಂದ ಹೊರಗೆ ಹೋಗಬೇಕು. ಒಂದುವೇಳೆ ಅವರೇನಾದರೂ ನಿಗದಿಪಡಿಸಲಾಗಿರುವ ಮೇರೆಯನ್ನು ಅಥವಾ ಗೆರೆಯನ್ನು ದಾಟಿದರೂ ಆಟದಿಂದ ಹೊರಗೆ ಹೋಗಬೇಕು. ಯಾವ ಮಗು ಆಟದಿಂದ ಹೊರಗೆ ಹೋಗದೆ ಕೊನೆಯ ತನಕ ಉಳಿಯುತ್ತದೆಯೋ ಆ ಮಗು ಗೆಲ್ಲುತ್ತದೆ. ಗೆಲ್ಲುವ ತಂಡಕ್ಕೆ ಅಂಕಗಳು ಸಿಗುತ್ತವೆ.**







**ಬ್ರೂಮ್ ಸಾಕರ್ (ತಂಡ)**



**ಈ ಆಟ ಆಡಿಸಲು ನಿಮಗೆ ಭಾಗವಹಿಸುವ 2 ತಂಡಗಳು, 2 ಪೊರಕೆಗಳು ಮತ್ತು ಒಂದು ಬಾಲ್ (ಚೆಂಡು) ಬೇಕು.**

**2 ಗೋಲ್ ಗಳನ್ನು ನಿಗದಿಪಡಿಸಿರಿ ಮತ್ತು ಒಂದೊಂದನ್ನು ಒಂದೊಂದು ತಂಡಕ್ಕೆ ನಿಗದಿಪಡಿಸಿರಿ.**

**2 ತಂಡದ ಆಟಗಾರರನ್ನು ಎದುರುಬದುರಾಗಿ ನಿಲ್ಲಿಸಿರಿ ಮತ್ತು ಪ್ರತಿಯೊಬ್ಬ ಆಟಗಾರನಿಗೆ ಸಂಖ್ಯೆಯನ್ನು ಕೊಡುವರು.**

**ಪ್ರತಿಯೊಂದು ತಂಡದ ಆಟಗಾರರ ಸಂಖ್ಯೆ ಸಮಾನವಾಗಿರಬೇಕು.**

**ಚೆಂಡು ಮತ್ತು ಪೊರಕೆಯನ್ನು ಕೋರ್ಟ್ ಮಧ್ಯದಲ್ಲಿ ಇಡಬೇಕು.**

**ನಾಯಕನು ಯಾವ ಸಂಖ್ಯೆಯನ್ನು ಕರೆಯುತ್ತಾನೋ, ಎರಡೂ ತಂಡದಲ್ಲಿ ಆ ಸಂಖ್ಯೆಯ ಮಕ್ಕಳು ಓಡಿ ಬಂದು ಪ್ರಕೆಯನ್ನು ತೆಗೆದುಕೊಳ್ಳಬೇಕು ಮತ್ತು ಚೆಂಡನ್ನು ವಿರುದ್ಧ ದಿಕ್ಕಿನಲ್ಲಿರುವ ಗೋಲ್ ಗೆ ಹಾಕಲು ಪ್ರಯತ್ನಿಸಬೇಕು.**

**ಪೊರಕೆಯಿಂದ ಮಾತ್ರವೇ ಚೆಂಡನ್ನು ಮುಟ್ಟಬೇಕು.**

**ಗೋಲ್ ಗಳಿಸಿದ ನಂತರ ಪೊರಕೆ ಮತ್ತು ಚೆಂಡನ್ನು ಮಧ್ಯದಲ್ಲಿಯೇ ತಂದು ಇಡಬೇಕು.**

**ಆಟಗಾರರೆಲ್ಲರಿಗೂ ಆಡುವ ಅವಕಾಶ ಸಿಗವ ತನಕ ನಾಯಕನು ಸಂಖ್ಯೆಗಳನ್ನು ಕರೆಯಬೇಕು.**

**ಯಾವ ತಂಡ ಹೆಚ್ಚು ಗೋಲುಗಳನ್ನು ಗಳಿಸುತ್ತದೆಯೋ ಅವರು ಗೆಲ್ಲುತ್ತಾರೆ.**

**ಗಮನಿಸಿರಿ: ಒಂದುವೇಳೆ ಪೊರಕೆಯನ್ನು ಉಪಯೋಗಿಸಲು ನಿಮಗೆ ಇಷ್ಟವಿಲ್ಲದಿದ್ದರೆ, ಸಹಜವಾಗಿ ಪುಟ್ ಬಾಲ್ ಆಡುವ ರೀತಿಯಲ್ಲಿ ಆಡಿರಿ.**

## ಮುಕ್ತಾಯ

**ನಮ್ಮ ರಜಾ ದಿನದ ಸತ್ಯವೇದ ಶಾಲೆಯ ಈ ದಿನವೂ ಅದ್ಭುತವಾಗಿತ್ತು! ಇಂದು ನಾವು ಬಹಳ ಖುಷಿಪಟ್ಟೆವು ಮತ್ತು ರೂತಳು ತನ್ನ ಸುತ್ತಮುತ್ತಲಿದ್ದ ಜನರಿಗೆ ಯಥಾರ್ಥವಾದ ಪ್ರೀತಿಯನ್ನು ತೋರಿಸುತ್ತಾ, ತನ್ನ ಬಗ್ಗೆ ಚಿಂತಿಸದೆ ಯಾವ ರೀತಿ ಇತರರಿಗಾಗಿ ಜೀವಿಸಿದಳು ಎಂಬದನ್ನು ಕಲಿತುಕೊಂಡಿದ್ದೇವೆ. ಕೋಪ, ಸ್ವಾರ್ಥ, ಜಗಳ ಮತ್ತು ತಪ್ಪು ತಿಳುವಳಿಕೆಗಳಿಂದ ಅತಿಯಾಗಿ ಬಿಸಿಯಾಗದಂತೆ ಕಾಪಾಡುವ ಆಂಟಿ ಫ್ರೀಜ್ ಇದು ಸಮಾನವಾಗಿದೆ ಎಂಬದನ್ನು ನಾವು ಕಲಿತುಕೊಂಡಿದ್ದೇವೆ. ನಾವು ನಮ್ಮ ಜೀವಿತದೊಳಗೆ "ಆಂಟಿ ಫ್ರೀಜ್" ಹಾಕಿಕೊಳ್ಳಬೇಕು ಆಗ ಮಾತ್ರವೇ ಓಟವನ್ನು ಗೆಲ್ಲಲು ಸಾಧ್ಯವಾಗುತ್ತದೆ!**

# 4 ಶಕ್ತಿಯನ್ನು ತಿಳಿದುಕೊಳ್ಳುವದು



**ಸತ್ಯವೇದ ಕಥೆ: ದಾನಿಯೇಲನು ಶಕ್ತಿಯನ್ನು ಅನುಭವಿಸಿದನು / ದಾನಿಯೇಲ 6:1-28**

## ವಾಕ್ಯ

“ಪ್ರಿಯಮಕ್ಕಳೇ, ನೀವಂತೂ ದೇವರಿಗೆ ಸೇರಿದವರು. ಲೋಕದಲ್ಲಿರುವ ದುರಾತ್ಮಕ್ಕಿಂತಲೂ ನಿಮ್ಮಲ್ಲಿರುವ ಆತ್ಮವು ಶ್ರೇಷ್ಠವಾದುದು. ಆದ್ದರಿಂದಲೇ ಆ ಕಪಟ ಪ್ರವಾದಿಗಳನ್ನು ಜಯಿಸಿದ್ದೀರಿ.” ೧ ಯೊವಾನ್ನನು 4:4

## ನಾಟಕ

ಮೆಕಾನಿಕ್ ಮತ್ತು ಸೂಪರ್ ಬಿಬ್ಲಿಕಲ್

- ತನ್ನ ಹೆಸರಿನಲ್ಲಿ ಅಂಚೆ ಕಛೇರಿಗೆ ಬಂದಿರುವ ಡಬ್ಬಿಯನ್ನು ಪಡೆದುಕೊಳ್ಳಲು ಮೆಕಾನಿಕ್ ಹೋಗುತ್ತಿದ್ದಾನೆ. ಆ ಡಬ್ಬಿ ಬಹಳ ದೊಡ್ಡದಾಗಿತ್ತು ಅದರೊಳಗೆ ಮೋಟರ್ ಮತ್ತು ಗ್ಯಾಸ್ ಪಂಪ್ ಸೇರಿ, ಇನ್ನೂ ಅನೇಕ ಬಿಡಿ ಭಾಗಗಳಿದ್ದವು. ಗ್ಯಾಸ್ ಪಂಪ್ ಒಡೆದುಹೋಗಿದೆ ಎಂದು ತನ್ನ ಮೋಟರ್ ಬೈಕ್ ಗ್ಯಾರೇಜ್ ಗೆ ಬಿಟ್ಟಿದ್ದ ಗ್ರಾಹಕನು ಹೊಸ ಗ್ಯಾಸ್ ಪಂಪ್ ಕಳುಹಿಸಿದ್ದನು.
- ಅವನು ಏನು ಮಾಡಬೇಕೆಂದು ತೋಚದೆ ನಗಲಾರಂಭಿಸಿದನು. ನಂತರ ಒಬ್ಬ ಸೂಪರ್ ಹೀರೋ ತನ್ನೊಂದಿಗೆ ಮಾತನಾಡುವದನ್ನು ಆತನು ಕೇಳಿಸಿಕೊಂಡನು. ಆತನು ಯಾರು ಎಂದು ಊಹಿಸಲು ಅವನು ಪ್ರಯತ್ನಿಸಿದನು ಮತ್ತು ಮೋಟರ್ ಬೈಕ್ ಭಾಗಗಳಿರುವ ಡಬ್ಬಿಯನ್ನು ನೋಡಿದನು.
- ಮನಸ್ಸಿನಲ್ಲಿರುವದನ್ನು ತಿಳಿದುಕೊಳ್ಳುವ ಸಾಮರ್ಥ್ಯವಿದ್ದ ಸೂಪರ್ ಹೀರೋ, ಹೇಳುವದೇನೆಂದರೆ, “ನಾನು ಸೂಪರ್ ಬಿಬ್ಲಿಕಲ್, ಈಗ ರಜೆಯಲ್ಲಿದ್ದೇನೆ.” ಅವರಿಬ್ಬರೂ ಸ್ವಲ್ಪ ಸಮಯ ಮಾತನಾಡುತ್ತಾರೆ ಮತ್ತು ಮೆಕಾನಿಕ್ ಅವರ ಆಟೋಗ್ರಾಫ್ ಕೇಳುತ್ತಾನೆ. ಸೂಪರ್ ಹೀರೋಗೆ ಎಕ್ಸ್ ರೇ ದರ್ಶನ ಇರುವದರಿಂದ, ಡಬ್ಬಿಯೊಳಗೆ ಏನಿದೆ ಎಂಬದು ಗೊತ್ತಾಗುತ್ತದೆ.
- ಮೆಕಾನಿಕ್ ಸೂಪರ್ ಹೀರೋಗೆ ಗುಡ್ ಬೈ ಹೇಳುತ್ತಾನೆ ಮತ್ತು ಡಬ್ಬಿಯನ್ನು ಎತ್ತಲು ಪ್ರಯತ್ನಿಸುತ್ತಾನೆ, ಆದರೆ ಅದು ಬಹಳ ಭಾರವಾಗಿರುತ್ತದೆ. ಅವನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸುತ್ತಾನೆ. ಒಂದುವೇಳೆ ಸೂಪರ್ ಹೀರೋ ಬಳಿ ಕೇಳಿದರೆ ಆತನು ಸಹಾಯ ಮಾಡುತ್ತಾನೆ ಎಂಬದು ಅವನಿಗೆ ಗೊತ್ತು. ಆದರ ಸೂಪರ್  ಹೀರೋ ಬಳಿ ಸಹಾಯ ಕೇಳಲು ಮೆಕಾನಿಕ್ ಗೆ ಇಷ್ಟವಿಲ್ಲ ಯಾಕಂದರೆ ಆತನು ರಜೆಯಲ್ಲಿದ್ದಾನೆ. ಮತ್ತೆ ಡಬ್ಬಿಯನ್ನು ಎತ್ತಲು ಪ್ರಯತ್ನಿಸುವಾಗ ಅವನ ಬೆರಳು ಡಬ್ಬಿಯ ಕೆಳಗೆ ಸಿಕ್ಕಿಕೊಳ್ಳುತ್ತದೆ, ಹೇಗೋ ಹೊರಗೆ ತೆಗೆದು ಅವನು ನೋವಿನಿಂದ ಕೂಗಿಕೊಳ್ಳುತ್ತಾನೆ. ಅಂತಿಮವಾಗಿ ಅವನು ತನ್ನಿಂದ ಅದನ್ನು ಎತ್ತಲು ಆಗುವದಿಲ್ಲ ಎಂದು ತೀರ್ಮಾನಿಸುತ್ತಾನೆ ಮತ್ತು ಸೂಪರ್ ಹೀರೋಗೆ ಗುಡ್ ಬೈ ಹೇಳುತ್ತಾನೆ.

### ಗಮನ ಸೆಳೆಯುವದು

ಸ್ಪೀಕರ್: “ಬ್ರೇಕ್ ಮೇಲೆ ಕಾಲು ಹಾಕಿರಿ!”
ಮಕ್ಕಳು: ಬಲಗಾಲನ್ನು ಎರಡು ಸಲ ಬ್ರೇಕ್ ಮೇಲೆ ಹಾಕಿರಿ “ಎರ್ರ್-ಎರ್ರ್-ಎರ್ರ್ ಟ್!” (ಬ್ರೇಕ್ ಶಬ್ದ, ಕೈಗಳನ್ನೂ ಹಾಗೆಯೇ ಚಲಿಸಬೇಕು ಮೊದಲು ಬಲಗೈ ಮುಂದಕ್ಕೆ ಹೋಗಬೇಕು ನಂತರ ಹಿಂದಕ್ಕೆ ಬರಬೇಕು)
“ಕೇಳಿಸಿಕೊಳ್ಳಲು ಸಿದ್ಧರಾಗಿದ್ದೀರೋ!” (ಮೊದಲು ಒಂದು ಕಿವಿಯನ್ನು ತೋರಿಸಿರಿ ನಂತರ ಇನ್ನೊಂದು ಕಿವಿಯನ್ನು ತೋರಿಸಿರಿ)







• ಹೊರಡುವ ಮೊದಲು ಸೂಪರ್ ಹೀರೋ ಗ್ಯಾಸ್ ಪಂಪ್ ನಲ್ಲಿರುವ ತಮಾಷೆ ಏನು ಎಂದು ಕೇಳುತ್ತಾನೆ. ಬೈಕ್ ನಲ್ಲಿರುವ ಗ್ಯಾಸ್ ಕಡಿಮೆಯಾಗಿದೆ ಅದನ್ನು ತುಂಬಿಸಿದರೆ ಸಾಕು, ಹೊಸ ಪಂಪ್ ಹಾಕುವ ಅವಶ್ಯಕತೆ ಇಲ್ಲ ಎಂದು ಮೆಕಾನಿಕ್ ಅವನಿಗೆ ಹೇಳುತ್ತಾನೆ. ಇಡೀ ತಿಂಗಳು ಮೋಟರ್ ಬೈಕ್ ಇಲ್ಲದೆ ಪರದಾಡಿದ ಗ್ರಾಹಕನ ಬಗ್ಗೆ ಯೋಚಿಸುತ್ತಾ ಅವರಿಬ್ಬರೂ ನಗಾಡುತ್ತಾರೆ.

ಡಬ್ಬಿಯನ್ನು ಎತ್ತಲು ಆಗದಿರುವದರಿಂದ ಮೆಕಾನಿಕ್ ಹೊರಟು ಹೋಗುತ್ತಾನೆ. ಅದಾದ ನಂತರ ಸೂಪರ್ ಹೀರೋ ಬಂದು ಸುಲಭವಾಗಿ ಡಬ್ಬಿಯನ್ನು ಎತ್ತುತ್ತಾ ಹೀಗೆ ಹೇಳುತ್ತಾನೆ, "ಇಲ್ಲಿ ಅತ್ಯಂತ ತಮಾಷೆಯ ವಿಷಯವೇನೆಂದರೆ ಅವನು ಸಹಾಯವನ್ನು ಬೇಡಿಕೊಳ್ಳಬಹುದಾಗಿತ್ತು

## ಸಂದೇಶ

"ನಿಮ್ಮ ಇಂಜಿನ್ ಪ್ರಾರಂಭಿಸಿರಿ" ವಿಬಿಎಸ್ ಕಾರ್ಯಕ್ರಮಕ್ಕೆ ಮತ್ತೊಮ್ಮೆ ಸ್ವಾಗತ!

ನಾವು ಮುಗಿಸುವ ಹಂತಕ್ಕೆ ಬಂದಿದ್ದೇವೆ, ಆದ್ದರಿಂದ ಯಾರಿಗೆ ಶಕ್ತಿ ಇದೆ ಮತ್ತು ಯಾರಿಗೆ ಶಕ್ತಿ ಇಲ್ಲ ಎಂಬದನ್ನು ತಿಳಿದುಕೊಳ್ಳಬೇಕಾಗಿದೆ. ಇಂದು ನಾವು ಶಕ್ತಿಯ ಬಗ್ಗೆ ಮಾತನಾಡೋಣ! ಈ ಮೋಟರ್ ಬೈಕ್ ಗಳು ವೇಗವಾಗಿ ಚಲಿಸಲು ಗ್ಯಾಸೋಲೈನ್ (ಪೆಟ್ರೋಲ್) ಇವುಗಳಿಗೆ ಶಕ್ತಿಯನ್ನು ಕೊಡುತ್ತದೆ. ಪೆಟ್ರೋಲ್ ಇಲ್ಲದೆ ಹೋದರೆ, ಮೋಟರ್ ಬೈಕ್ ನೋಡಲು ಸುಂದರವಾಗಿದ್ದರೂ, ಚಲಿಸಲು ಆಗದೆ ಸ್ತಬ್ಧವಾಗಿ ನಿಂತಿರುತ್ತದೆ. ನಮ್ಮೆಲ್ಲರಿಗೂ ಗೊತ್ತಿರುವ ಪ್ರಕಾರ ಪೆಟ್ರೋಲ್ ಬೈಕ್ ನ ಟ್ಯಾಂಕ್ ನಲ್ಲಿ ಶೇಖರಣೆಯಾಗಿರುತ್ತದೆ ಮತ್ತು ಬೈಕ್ ಚಲಿಸುವಾಗ ಪೆಟ್ರೋಲ್ ಖಾಲಿಯಾಗುತ್ತಾ ಬರುತ್ತದೆ. ಪೆಟ್ರೊಲ್ ಖಾಲಿಯಾಗುವಾಗ ಒಂದು ಹಂತದಲ್ಲಿ ಬೈಕ್ ನಿಂತುಹೋಗುತ್ತದೆ ಆಗ ಪುನಃ ಪೆಟ್ರೋಲ್ ಹಾಕಿಸಿಕೊಳ್ಳಬೇಕು. ಕ್ರೈಸ್ತೀಯ ಜೀವಿತದಲ್ಲಿ ದೇವರ ಶಕ್ತಿಯು ನಮ್ಮ ಟ್ಯಾಂಕ್ ಗಳಲ್ಲಿರುವ ಪೆಟ್ರೋಲ್ ಗೆ ಸಮಾನವಾಗಿದೆ. ನಾವು ಮುಂದೆ ಹೋಗುವಂತೆ ಮಾಡುವವನು ಮತ್ತು ನಮಗೆ ಶಕ್ತಿಯನ್ನು ಕೊಡುವವನು ದೇವರೇ ಆಗಿದ್ದಾನೆ. ನಾವು ನಮ್ಮ ಸ್ವಂತ ಶಕ್ತಿಯಿಂದ ಮುಂದೆ ಸಾಗುವದಿಲ್ಲ ಎಂಬದನ್ನು ತಿಳಿದುಕೊಳ್ಳುವದು ಅದ್ಭುತವಾದ ಸಂಗತಿಯಾಗಿದೆ. ಜೀವಿತದಲ್ಲಿ ಆಸಕ್ತಿಯನ್ನುಂಟು ಮಾಡುವ ಸಂಗತಿಗಳೆಲ್ಲವೂ ನಾವು ದೇವರಿಗೆ ಕನೆಕ್ಟ್ ಆಗಿರುವಂತೆ ಮಾಡುತ್ತವೆ. ಜೀವಿತದ ನಿರ್ದಿಷ್ಟ ಹಂತದಲ್ಲಿ, ಪೆಟ್ರೋಲ್ ಮುಗಿದು ಹೋದ ಕಾರಣದಿಂದ ಓಟದ ಮಧ್ಯದಲ್ಲಿಯೇ ನಿಂತುಹೋಗುವದು ಅತ್ಯಂತ ದುಃಖದ ಸಂಗತಿಯಾಗಿದೆ!



ಸತ್ಯವೇದದ ಅತ್ಯಂತ ಆಕರ್ಷಕ ತತ್ವಗಳಲ್ಲಿ ಒಂದು ಯಾವುದೆಂದರೆ ನಾವು ನಮ್ಮ ಕ್ರೈಸ್ತೀಯ ಜೀವಿತವನ್ನು ನಮ್ಮ ಸ್ವಂತ ಬಲದಲ್ಲಿ ಜೀವಿಸಬೇಕಾಗಿಲ್ಲ – ನಿಜವಾಗಿ ಹೇಳುವದಾದರೆ ನಾವು ನಮ್ಮ ಸ್ವಂತ ಬಲದಲ್ಲಿ ಜೀವಿಸಲು ಆಗುವದೂ ಇಲ್ಲ! ಗಲಾತ್ಯ 2:20 ಹೇಳುವದೇನೆಂದರೆ, ". . . ಜೀವಿಸುವವನು ಇನ್ನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ," ಮತ್ತು ಪೌಲನ್ನು ಈ ಸಮಸ್ಯೆಯ ಬಗ್ಗೆ ರೋಮಾ ಪತ್ರಿಕೆ 7 ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ, "ನನ್ನನ್ನು ಮರಣಕ್ಕೆ ಒಳಗಾಗುವ ಈ ದೇಹದಿಂದ ಬಿಡಿಸುವವರು ಯಾರು? ನಮ್ಮ ಕರ್ತನಾದ ಯೇಸು ಕ್ರಿಸ್ತನು ಬಿಡಿಸುವವನಾದ್ದರಿಂದ ದೇವರಿಗೆ ಸ್ತೋತ್ರ ಹೇಳುತ್ತೇನೆ." ಪಾಪವು ನಮ್ಮ ಸುತ್ತಮುತ್ತಲು ಯಾವಾಗಲೂ ಇದ್ದು ನಮ್ಮನ್ನು ಶೋಧಿಸುತ್ತಲೇ ಇದ್ದರೂ, ದೇವರ ದೃಷ್ಟಿಯಲ್ಲಿ ಪರಿಪೂರ್ಣರಾಗಿ ಜೀವಿಸುವ ಅಸಾಧ್ಯವಾದ ಕಾರ್ಯವನ್ನು ನಮಗೆ ಕೊಡಲಾಗಿದೆ. ಇದರಲ್ಲಿರುವ ಶ್ರೇಷ್ಠತೆ ಏನೆಂದರೆ ನಮ್ಮ ಬಲಹೀನತೆಯ ನಡುವೆಯೂ ದೇವರು ನಮ್ಮನ್ನು ಬಲ್ಲವನಾಗಿದ್ದಾನೆ; ಮತ್ತು ನಮ್ಮ ಪರವಾಗಿ ನಮಗೆ ಸಹಾಯ ಮಾಡುತ್ತಾನೆ! ಆತನು ನಮಗೆ ಒಪ್ಪಿಸುವ ಕಾರ್ಯಗಳನ್ನು ನಾವು ಮಾಡಿ ಮುಗಿಸಲು ಬೇಕಾದ ಬಲವನ್ನು ಕೊಡುತ್ತಾನೆ. ನಮಗಾಗಿ ಆತನು ವೈರಿಯೊಂದಿಗೆ ಹೋರಾಡುತ್ತಾನೆ; ಆತನು ನಮಗೆ ಮುಂದಾಗಿ ಹೋಗುತ್ತಾನೆ ಮತ್ತು ಬೇಕಾದ ಮಾರ್ಗದರ್ಶನವನ್ನು ಕೊಡುತ್ತಾನೆ. ನಾವು ಆತನ ಶಕ್ತಿಯನ್ನು ಆಶ್ರಯಿಸಿಕೊಳ್ಳಬಹುದು! ನಮ್ಮ ಸರ್ವಶಕ್ತನಾದ ದೇವರು ಉಳಿದ ದೇವರುಗಳಿಗಿಂತ ದೊಡ್ಡವನು ಮತ್ತು ನಮ್ಮ







ವೈರಿಯಾಗಿರುವ ಸೈತಾನನು ಹಾಗೂ ಅವನ ದೂತರಿಗಿಂತಲೂ ದೊಡ್ಡವನು ಎಂಬದನ್ನು ತಿಳಿಯುವದು ಮಹತ್ವದ ವಿಚಾರವಾಗಿದೆ. ತಾತ್ಕಾಲಿಕವಾಗಿ, ದೇವರು ಸೈತಾನನಿಗೆ ಈ ಲೋಕದಲ್ಲಿ ಅಲೆದಾಡಲು ಅವಕಾಶ ಕೊಟ್ಟಿದ್ದಾನೆ ಆದರೆ ದೇವರು ಈಗಲೂ ಸರ್ವಶಕ್ತನಾಗಿದ್ದಾನೆ, ಈಗಲೂ ಎಲ್ಲರಿಗಿಂತ ಬಲಿಷ್ಠನಾಗಿದ್ದಾನೆ, ಆದರೆ ಸೈತಾನನಿಗೆ ಈ ಲೋಕದ ಮೇಲೆ ಸ್ವಲ್ಪ ಶಕ್ತಿಯನ್ನು ಮಾತ್ರವೇ ಕೊಟ್ಟಿದ್ದಾನೆ. ಇಂದಿನ ನಮ್ಮ ಕಂಠಪಾಠ ವಾಕ್ಯ ಪ್ರಕಟಿಸವದೇನೆಂದರೆ, “. . . ಲೋಕದಲ್ಲಿರುವವನಿಗಿಂತ ನಮ್ಮಲ್ಲಿರುವಾತನು ದೊಡ್ಡವನು.” ಇಂದು ನಾವು ಸತ್ಯವೇದದಲ್ಲಿ ಬರುವ ದಾನಿಯೇಲನನ್ನು ಸಂಧಿಸೋಣ, ಈತನು ದೇವರ ಶಕ್ತಿಯನ್ನು ತನ್ನ ಜೀವಿತದಲ್ಲಿ ನಿಜವಾಗಿಯೂ ಅನುಭವಿಸಿದನು!

ನಮ್ಮಲ್ಲಿ ದೇವರ ಶಕ್ತಿ ಅಥವಾ ಪೆಟ್ರೋಲ್ ಎಂದಿಗೂ ಮುಗಿಯಬಾರದು, ಬದಲಾಗಿ ಯಾವಾಗಲೂ ಆತನಲ್ಲಿ ನೆಲೆಯಾಗಿರಬೇಕು ಎಂಬದನ್ನು ಮರೆಯಬೇಡಿರಿ! ಪ್ರಾರ್ಥನೆ ಮಾಡುವದು, ಸತ್ಯವೇದ ಓದುವದು, ಸಭೆಯ ಕಾರ್ಯಗಳಲ್ಲಿ ಭಾಗಿಯಾಗುವದು ಮತ್ತು ತಮ್ಮ ಸಾಕ್ಷಗಳನ್ನು ಜನರು ಹಂಚಿಕೊಳ್ಳುವಾಗ ಶ್ರದ್ಧೆಯಿಂದ ಆಲಿಸುವದು ನಾವು ಆತನಲ್ಲಿ ನೆಲೆಯಾಗಿರಲು ನಮಗೆ ಸಹಾಯ ಮಾಡುತ್ತವೆ. ಆತನಿಂದ ನೇರವಾಗಿ ಶಕ್ತಿಯನ್ನು ಪಡೆಯುವದು ಉತ್ತಮವಾದ ಸಂಗತಿಯಾಗಿದೆ. ನೀವು ನಿಮಗೆ ಬೇಕಾಗುವಷ್ಟು ಪೆಟ್ರೋಲ್ ತುಂಬಿಸಿಕೊಂಡಿದ್ದೀರೋ?

## ಐಸ್ ಬ್ರೇಕರ್ ಆಟ

### ಸೀಕ್ರೆಟ್ ಕೋಡ್

ಆಟಗಾರರು 1, 2, 3, 4 ಮತ್ತು 5 ಇವುಗಳಲ್ಲಿ ಯಾವುದಾದರೊಂದು ಸಂಖ್ಯೆಯನ್ನು ಆರಿಸಿಕೊಳ್ಳಬೇಕು. ಯಾವ ಸಂಖ್ಯೆಯನ್ನು ಆರಿಸಿಕೊಳ್ಳಬೇಕು ಎಂದು ತಿಳಿಯಲು ಅವರು ಯಾವುದೇ ಗೈಡ್ ಉಪಯೋಗಿಸುವ ಅವಶ್ಯಕತೆಯಿಲ್ಲ; ಪ್ರತಿಯೊಬ್ಬರೂ ಕೆಲವು ಕ್ಷಣಗಳ್ಳು ಯೋಚಿಸಬೇಕು ಮತ್ತು ಯಾವುದು ಬೇಕೋ ಅದನ್ನು ಆರಿಸಿಕೊಳ್ಳಬೇಕು.


ಉಳಿದ ಆಟಗಾರರಿಗೆ ತಾವು ಆರಿಸಿಕೊಂಡಿರುವ ಸಂಖ್ಯೆ ಯಾವುದು ಎಂದು ಗೊತ್ತಾಗಬಾರದು.

ಆಟಗಾರರು ತಮ್ಮ ಸ್ಥಳದಿಂದ ಹೊರ ಬಂದು, ಬೆರೆಯಬೇಕು ಮತ್ತು ಏನೂ ಹೇಳದೆ ಕೈಗಳನ್ನು ಕುಲುಕುತ್ತಾ ಒಬ್ಬರನ್ನೊಬ್ಬರು ವಂದಿಸಬೇಕು. ತಾವಾರಿಸಿಕೊಂಡಿರುವ ಸಂಖ್ಯೆಯನ್ನೇ ಆರಿಸಿಕೊಂಡಿರುವ ಮಕ್ಕಳು ಒಂದು ತಂಡವನ್ನು ರಚಿಸಬೇಕು. ಈ ಆಟ ಮೌನವಾಗಿರುತ್ತದೆ ಎಂಬದನ್ನು ಮರೆಯಬೇಡಿರಿ. ಒಂದುವೇಳೆ ಒಬ್ಬ ಆಟಗಾರನು ಸಂಖ್ಯೆ 1 ಆರಿಸಿಕೊಂಡಿದ್ದರೆ, ಅವನು ಕೇವಲ ಕೈಯನ್ನು ಮಾತ್ರವೇ ಕುಲುಕಬೇಕು. ಒಂದುವೇಳೆ ಒಬ್ಬ ಆಟಗಾರನು ಸಂಖ್ಯೆ 3 ಆರಿಸಿಕೊಂಡಿದ್ದರೆ ಮೂರು ಸಲ ಕೈಯನ್ನು ಹಿಂಡಬೇಕು ಮತ್ತು ನೀವಾರಿಸಿಕೊಂಡಿರುವ ಸಂಖ್ಯೆಯನ್ನು ಅವರು ದೃಢಪಡಿಸಬೇಕೆಂದರೆ ಅವರೂ ಮೂರು ಸಲ ನಿಮ್ಮ ಕೈಯನ್ನು ಹಿಂಡಬೇಕು. ಒಂದುವೇಳೆ ಅವರು ಒಂದೇ ಸಂಖ್ಯೆ ಆಯ್ಕೆ ಮಾಡಿಕೊಂಡಿದ್ದರೆ, ಅವರು ಒಟ್ಟಾಗಿ ಬೇರೆ ಯಾರು ಆ ಸಂಖ್ಯೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಹುಡುಕಬೇಕು. ಆಟಗಾರರು ಮೌನವಾಗಿರಬೇಕು. ಯಾವ ಗುಂಪಿನವರು ತಂಡವನ್ನು ಪೂರ್ತಿಗೊಳಿಸುತ್ತಾರೋ ಅವರು ಗೆಲ್ಲುತ್ತಾರೆ

## ಸತ್ಯವೇದ ಪಾಠ

### ದಾನಿಯೇಲನು ಶಕ್ತಿಯನ್ನು ಅನುಭವಿಸಿದನು

1. ದಾನಿಯೇಲನು ಯೌವನಸ್ಥನಾಗಿದ್ದನು, ಅರಸನ ಸೇವೆ ಮಾಡಲು ಅವನನ್ನು ಅರಮನೆಗೆ ಕರೆದುಕೊಂಡು ಹೋದರು, ಅವನು ತನ್ನ ಕೆಲಸದಲ್ಲಿ ನಂಬಿಗಸ್ತನಾಗಿದ್ದರು, ಅಧಿಕಾರಿಯಾಗಿ ನೇಮಕಗೊಂಡನು. ಅವನು ಪ್ರಾಮಾಣಿಕನಾಗಿದ್ದನು ಮತ್ತು ದೇವರಿಗೆ ವಿಧೇಯನಾಗಲು ಬಯಸುತ್ತಿದ್ದನು. ಅವನು ಪ್ರತಿದಿನ ತನ್ನ ಕೋಣೆಯ ಬಾಗಿಲುಗಳನ್ನು ತೆರೆದು ದೇವರಿಗೆ ಪ್ರಾರ್ಥಿಸುತ್ತಿದ್ದನು; ಅವನು ಕೇವಲ ಊಟದ ಸಮಯದಲ್ಲಿ ಮಾತ್ರವಲ್ಲ ಬದಲಾಗಿ ದಿನಕ್ಕೆ ಮೂರು ಸಲ ತಪ್ಪದೆ ಪ್ರಾರ್ಥನೆ ಮಾಡುತ್ತಿದ್ದನು.

   ದೇವರು ಪದ ಬರುವಾಗ: ನಿಮ್ಮ ತೋರು ಬೆರಳನ್ನು ಮುಂದಕ್ಕೆ ಮಾಡಿರಿ, ನಂತರ ನೀವು ಅದನ್ನು ನಿಮ್ಮ ಎದೆಯ ಭಾಗದ ಎದುರು ತರುವಾಗ ಎಲ್ಲಾ ಬೆರಳುಗಳನ್ನು ತೆರೆಯಿರಿ.









2. ಅರಸನಾದ ದಾರ್ಯಾವೇಷನು ದಾನಿಯೇಲನ ಕಾರ್ಯಗಳನ್ನು ಬಹಳವಾಗಿ ಮೆಚ್ಚಿಕೊಂಡನು ಮತ್ತು ದಾನಿಯೇಲನನ್ನು ಎಲ್ಲವುಗಳ ಮೇಲೆ ಅಧಿಕಾರಿಯನ್ನಾಗಿ ನೇಮಿಸುವ ತೀರ್ಮಾನ ತೆಗೆದುಕೊಂಡನು. ದಾನಿಯೇಲನನ್ನು ಅಧಿಕಾರಿಯನ್ನಾಗಿ ನೇಮಿಸುವ ಆಯ್ಕೆಯನ್ನು ಅರಸನು ಮಾಡಿದ್ದರಿಂದ ಕೆಲವು ಅಧಿಕಾರಿಗಳು ಬಹಳವಾಗಿ ಕೋಪ ಮಾಡಿಕೊಂಡರು (ಜನರು ಕೋಪವುಳ್ಳವರಾಗಿರುವ ಚಿತ್ರವನ್ನು ಬಿಡಿಸಿರಿ). ಅರಸನು ದಾನಿಯೇಲನಿಗೆ ಆದ್ಯತೆಯನ್ನು ಕೊಡದ ಹಾಗೆ ಅವನ ಮೇಲೆ ತಪ್ಪು ಹೊರಿಸಲು ಕಾರಣವಾಗುವಂಥ ವಿಷಯಗಳನ್ನು ಹುಡುಕಲು ಕೋಪ ಮಾಡಿಕೊಂಡ ಅಧಿಕಾರಿಗಳು ಪ್ರಾರಂಭಿಸಿದರು, ಆದರೆ ಅವನಲ್ಲಿ ಯಾವ ತಪ್ಪೂ ಸಿಗಲಿಲ್ಲ! ದಾನಿಯೇಲನು ದಿನಕ್ಕೆ ಮೂರು ಸಲ ದೇವರಿಗೆ ಪ್ರಾರ್ಥನೆ ಮಾಡುವದು ಅವರಿಗೆ ತಿಳಿದಾಗ, ಅವರೊಂದು ಯೋಚನೆ ಮಾಡಿದರು (ಜನರ ತಲೆಯ ಮೇಲೆ ಲೈಟ್ ಬಲ್ಬ್ ಚಿತ್ರ ಬಿಡಿಸಿರಿ).

ಕೋಪ ಪದ ಬರುವಾಗ: ನಿಮ್ಮ ಬಲಗೈ ಬೆರಳುಗಳನ್ನು ಎರಡಾಗಿ ಮಾಡಿರಿ ಮತ್ತು ಅವುಗಳನ್ನು ನಿಮ್ಮ ಮುಖದಿಂದ ದೂರ ಮಾಡಿರಿ.

3. ಅರಸನು ಹೊಸ ನಿಯಮವನ್ನು ಜಾರಿಗೆ ತರುವ ಹಾಗೆ ಅಧಿಕಾರಿಗಳು ಯೋಚನೆ ಮಾಡಿದರು. 30 ದಿವಸಗಳ ತನಕ ಅರಸನಿಗೆ ಬಿಟ್ಟರೆ ಯಾರೂ ಯಾವ ದೇವರುಗಳಿಗೂ ಪ್ರಾರ್ಥನೆ ಮಾಡಬಾರದು ಎಂಬದು ಹೊಸ ನಿಯಮವಾಗಿತ್ತು. ಯಾವ ವ್ಯಕ್ತಿ ಈ ನಿಯಮಕ್ಕೆ ಅವಿಧೇಯನಾಗುತ್ತಾನೋ ಅವನನ್ನು ಸಿಂಹದ ಗವಿಯೊಳಗೆ ಹಾಕಬೇಕೆಂದು ತೀರ್ಮಾನಿಸಿದರು, ಯಾಕಂದರೆ ಸಿಂಹದ ಗವಿಯೊಳಗೆ ಹಾಕಲ್ಪಡುವ ಯಾರೂ ಬದುಕಲಾರರು ಎಂಬದು ಎಲ್ಲರಿಗೂ ಗೊತ್ತಿತ್ತು. ಸಿಂಹಗಳು ಖಂಡಿತವಾಗಿಯೂ ದಾನಿಯೇಲನನ್ನು ತಿಂದುಬಿಡುತ್ತವೆ ಎಂಬದು ಕೋಪಗೊಂಡಿದ್ದ ಅಧಿಕಾರಿಗಳು ಅಂದುಕೊಂಡರು. ದಾನಿಯೇಲನು ದೇವರಿಗೆ ಪ್ರಾರ್ಥನೆ ಮಾಡುವದನ್ನು ನಿಲ್ಲಿಸುತ್ತಾನೆಯೇ ಎಂಬದಾಗಿ ಅವರು ತಮ್ಮೊಳಗೇ ಮಾತನಾಡಿಕೊಂಡರು.



ಸಿಂಹ ಪದ ಬರುವಾಗ: ನಿಮ್ಮ ಬಲಗೈಯನ್ನು ತಲೆಯ ಮೇಲೆ ಇಟ್ಟುಕೊಳ್ಳಿರಿ; ನಿಮ್ಮ ಕೈಯನ್ನು ಹಿಂದಕ್ಕೆ ಬಾಗಿಸಿರಿ.

4. ಕೂಡಲೇ ದಾನಿಯೇಲನಿಗೆ ಹೊಸ ನಿಯಮದ ಬಗ್ಗೆ ಗೊತ್ತಾಯಿತು. ದಾನಿಯೇಲನು ತನ್ನ ಕೋಣೆಯಲ್ಲಿ ಅಡಗಿಕೊಳ್ಳಬಹುದಾಗಿತ್ತು ಅಥವಾ ಯಾರಿಗೂ ಗೊತ್ತಾಗದಂತೆ ತನ್ನ ಕೋಣೆಯ ಕದಗಳನ್ನು ಮುಚ್ಚಿಕೊಳ್ಳಬಹುದಾಗಿತ್ತು ಅಥವಾ 30 ದಿನಗಳ ಕಾಲ ದೇವರಿಗೆ ಪ್ರಾರ್ಥನೆ ಮಾಡುವದನ್ನು ನಿಲ್ಲಿಸಬಹುದಾಗಿತ್ತು. ಆದರೆ ದಾನಿಯೇಲನಿಗೆ ಪ್ರಾರ್ಥನೆ ಬಹಳ ಪ್ರಾಮುಖ್ಯವಾಗಿತ್ತು, ಆದ್ದರಿಂದಲೇ ಅವನು ದೇವರ ಎದುರಿನಲ್ಲಿ (ದಿನಕ್ಕೆ ಮೂರು ಸಲ ಕದಗಳನ್ನು ತೆರೆದು) ಪ್ರಾರ್ಥನೆ ಮಾಡುವದನ್ನು ಮುಂದುವರೆಸಿದನು. ಕೋಪ ಮಾಡಿಕೊಂಡಿದ್ದ ಅಧಿಕಾರಿಗಳು ಇದನ್ನು ನೋಡಿದ ಕೂಡಲೇ, ದಾನಿಯೇಲನು ಅವಿಧೇಯನಾಗಿರುವ ಸಂಗತಿಯನ್ನು ಅರಸನಿಗೆ ತಿಳಿಸಲು ಹೊರಟರು.



ನಿಯಮ ಪದ ಬರುವಾಗ: ನಿಮ್ಮ ಬಲಗೈ ಬೆರಳುಗಳನ್ನು ಅಡ್ಡವಾಗಿಟ್ಟು ಎಡಗೈ ಕೆಳಗೆ ಬರಮಾಡಿರಿ.







5. ಅರಸನಿಗೆ ಬಹಳ ಕೋಪ ಬಂದಿತು. ದಾನಿಯೇಲನು ನಿಯಮ ಉಲ್ಲಂಘನೆ ಮಾಡಿದ್ದಾನೆ ಎಂಬ ಕಾರಣಕ್ಕಾಗಿಯಲ್ಲ ಬದಲಾಗಿ ಅಧಿಕಾರಿಗಳು ದಾನಿಯೇಲನ ಮೇಲೆ ತಪ್ಪು ಹೊರಿಸಲು ಕುತಂತ್ರ ಮಾಡಿದ್ದಾರೆ ಎಂದು ಕೇಳಿದ್ದರಿಂದ ಕೋಪ ಬಂದಿತು. ಸೈತಾನನು ಅವರನ್ನು ಉಪಯೋಗಿಸಿಕೊಂಡಿದ್ದನು ಮತ್ತು ಗೆಲುವು ನನ್ನದೇ ಎಂಬದಾಗಿ ಅಂದುಕೊಂಡಿದ್ದನು. ಬಾಬೆಲಿನಲ್ಲಿ, ಅರಸನು ಒಮ್ಮೆ ನಿಯಮವನ್ನು ಜಾರಿಗೊಳಿಸಿದರೆ ಅದನ್ನು ನೆರವೇರಿಸಲೇ ಬೇಕಾಗಿತ್ತು ಮತ್ತು ಅದನ್ನು ಬದಲಾಯಿಸಲು ಆಗುತ್ತಿರಲಿಲ್ಲ. ಯಾರೂ ಪ್ರಾರ್ಥನೆ ಮಾಡಬಾರದೆಂದು ಮೂರ್ಖತನದ ನಿಯಮವನ್ನು ಜಾರಿಗೊಳಿಸಲೇ ಬೇಕು ಎಂಬದು ಅರಸನಿಗೆ ತಿಳಿದಿತ್ತು. ಬಹಳ ದುಃಖದಿಂದ, ಅವನು ದಾನಿಯೇಲನೊಂದಿಗೆ ಸಿಂಹದ ಗವಿಯ ಕಡೆಗೆ ಹೋದನು.



ಪ್ರಾರ್ಥನೆ ಪದ ಬರುವಾಗ: ನಿಮ್ಮ ಎರಡೂ ಕೈಗಳನ್ನು ಜೋಡಿಸಿರಿ; ನಿಮ್ಮ ಜೋಡಿಸಿದ ಕೈಗಳನ್ನು ಮುಂದಕ್ಕೆ ಮಾಡಿ ಶಿರವನ್ನು ಬಾಗಿಸಿರಿ.

6. ಅರಸನಾದ ದಾರ್ಯಾವೇಷನು ದಾನಿಯೇಲನನ್ನು ಅಪ್ಪಿಕೊಂಡನು ಮತ್ತು, "ನಿನ್ನ ದೇವರು ಹಸಿದ ಈ ಸಿಂಹಗಳಿಂದ ನಿನ್ನ ಕಾಪಾಡುವನು ಎಂಬದಾಗಿ ನಾನು ಅಂದುಕೊಂಡಿದ್ದೇನೆ" ಎಂದು ಹೇಳಿದನು ಮತ್ತು ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಿದರು. ಗವಿಗೆ ಮುಚ್ಚಳವಾಗಿ ದೊಡ್ಡ ಕಲ್ಲನ್ನು ಇಟ್ಟರು, ಆ ಕಲ್ಲನ್ನು ಯಾರೂ ತೆಗೆಯಬಾರದು ಎಂಬದಾಗಿ ಅರಸನು ಅದಕ್ಕೆ ಮುದ್ರೆಯನ್ನು ಹಾಕಿದನು. ಅಂದು ರಾತ್ರಿ ಅರಸನಿಗೆ ಬಹಳವಾಗಿ ದಾನಿಯೇಲನ ಚಿಂತೆಯಾಯಿತು; ಅವನಿಗೆ ನಿದ್ದೆ ಬರಲಿಲ್ಲ. ಅವನು ರಾತ್ರಿಯೆಲ್ಲಾ ತನ್ನ ಕೋಣೆಯೊಳಗೆ ಓಡಾಡುತ್ತಾ, ದಾನಿಯೇಲನನ್ನು ರಕ್ಷಿಸಲು ದೇವರು ಶಕ್ತನೋ ಇಲ್ಲವೋ ಎಂದು ಯೋಚಿಸುತ್ತಿದ್ದನು. ಮುಂಜಾನೆಯೇ, ಅರಸನು ಗವಿಯ ಬಳಿಗೆ ಓಡಿ ಹೋದನು, ಮುದ್ರೆ ಹಾಕಲಾಗಿದ್ದ ಕಲ್ಲನ್ನು ತೆಗೆದು ದಾನಿಯೇಲನೇ ಎಂದು ಕೂಗುತ್ತಾ, "ನಿನ್ನ ದೇವರು ನಿನ್ನನ್ನು ಕಾಪಾಡಿದ್ದಾನೆಯೇ?" ಎಂದು ಕೇಳಿದನು. ಆಗ "ಹೌದು ದೇವರು ನನ್ನನ್ನು ಸಿಂಹಗಳಿಂದ ಕಾಪಾಡಿದ್ದಾನೆ. ಸಿಂಹಗಳ ಬಾಯನ್ನು ಕಟ್ಟಲು ಆತನು ತನ್ನ ದೂತರಿಗೆ ಅಪ್ಪಣೆ ಕೊಟ್ಟಿದ್ದಾನೆ" ಎಂಬ ಪ್ರತ್ಯುತ್ತರ ದಾನಿಯೇಲನಿಂದ ಅವನಿಗೆ ದೊರೆಯಿತು. ದಾನಿಯೇಲನನ್ನು ಸಿಂಹದ ಗವಿಯಿಂದ ಹೊರಗ ತೆಗೆಯುವಂತೆ ಅರಸನು ತನ್ನ ಸಿಪಾಯಿಗಳಿಗೆ ಆಜ್ಞಾಪಿಸಿದನು. ಅಂದು ಅರಸನಾದ ದಾರ್ಯಾವೇಷನು ಮತ್ತೊಂದು ಆಜ್ಞೆಯನ್ನು ಹೊರಡಿಸಿದನು ಅದೇನಂದರ, ದಾನಿಯೇಲನ ದೇವರೇ ನಿಜವಾದ ದೇವರು. ನಂತರ ಕೋಪ ಮಾಡಿಕೊಂಡಿದ್ದ ಅಧಿಕಾರಿಗಳನ್ನು ಅವನು ಶಿಕ್ಷಿಸಿದನು.



ಅರಸನು ಪದ ಬರುವಾಗ: ಬಲಗೈ ಹೆಬ್ಬೆರಳನ್ನು ತೋರು ಬೆರಳು ಮತ್ತು ನಡು ಬೆರಳ ನಡುವೆ ಇಡಿರಿ; ಭುಜದ ಕಡೆಯಿಂದ ಸೊಂಟದ ಕಡೆಗೆ ತನ್ನಿರಿ.

## ಪುನರಾವರ್ತನೆಯ ಠಾಣೆಗಳು

ಠಾಣೆಗಳ ಪುನರಾವರ್ತನೆಗಾಗಿ 3 ಗುಂಪುಗಳನ್ನು ಮಾಡಿರಿ

## ಗ್ಯಾರೇಜ್ ಕರಕುಶಲತೆಗಳು




**ಪ್ರತಿಯೊಬ್ಬ ವಿದ್ಯಾರ್ಥಿಗೆ ಕೊಡಿರಿ:**

**ಪ್ರಿಂಟ್ ಆಗಿರುವ 1 ಗ್ಯಾಸ್ ಟ್ಯಾಂಕ್**

**1 ನಾಜಲ್**

**2 ಪೇಪರ್ ಕೈಗಳು**

**1 ರಿಬ್ಬರ್, 35cm**

**1 ಕಪ್ಪು ಪೈಪ್ ಕ್ಲೀನರ್, ಅದನ್ನು ಸಮನಾದ 3 ತುಂಡುಗಳಾಗಿ ಕತ್ತರಿಸಿರಿ**

- **ತುಂಡುಗಳಿಗೆ ಮೆಚ್ಚಿನ ಬಣ್ಣ ಹಚ್ಚುವಂತೆ ವಿದ್ಯಾರ್ಥಿಗಳಿಗೆ ಹೇಳಿರಿ.**
- **ಎರಡು ಪೈಪ್ ಕ್ಲೀನರ್ ಗಳನ್ನು ಹಿಂಬದಿಗೆ ಅಂಟಿಸಿರಿ ಅವುಗಳು ಭುಜಗಳಾಗಿರಲಿ ಮತ್ತು ಕೊನೆಗೆ ಎರಡು ಕೈಗಳನ್ನು ಅಂಟಿಸಿರಿ.**
- **ಹಿಂಬದಿಯ ಕೆಳ ಭಾಗಕ್ಕೆ ಮತ್ತೊಂದು ಪೈಪ್ ಕ್ಲೀನರ್ ಅಂಟಿಸಿರಿ ಮತ್ತು ಇನ್ನೊಂದು ಮೂಲೆಗೆ ನಾಜಲ್ ಅಂಟಿಸಿರಿ.**

**ರಿಬ್ಬನ್ ಅನ್ನು 4 ಭಾಗಗಳಾಗಿ ಕತ್ತರಿಸಿರಿ ಮತ್ತು ಹಿಂಬದಿಗೆ ಅಂಟಿಸಿ ಅದರಿಂದ ಕೂದಲನ್ನು ಮಾಡಿರಿ. ಹಾಗೆಯೇ ಕತ್ತರಿಯಿಂದ ಕತ್ತರಿಸಿ ಅದನ್ನು ಮತ್ತಷ್ಟು ನೈಜವನ್ನಾಗಿಸಬಹುದು.Snack**

## ಸ್ನಾಕ್ ಸ್ಟಾಂಡ್

**ರುಚಿಕರವಾದ ವಾಟರ್ ಬಾಟಲ್**



**ಸಾಮಗ್ರಿಗಳು:**

- **200ml ನೀರಿನ ಬಾಟಲಿ 1**
- **ನೀರಿಗಾಗಿ ಟ್ಯಾಂಗ್, ರಸ್ನಾದ ಪಾಕೆಟ್ ಗಳು**
- **ಕಪ್ಪು ಮತ್ತು ಬಿಳುಪು ಬಣ್ಣದ ಪ್ರಿಂಟ್ ಇರುವ 1 ಹಾಳೆ (6cm by 15cm)**
- **ಗ್ಲೂ ಸ್ಟಿಕ್ ಅಥವಾ ಗೋಂದು**
- **ಯಾವುದಾದರು ತಿಂಡಿ**

**ಸೂಚನೆಗಳು:**

1. **ನೀರಿನ ಬಾಟಲಿಯನ್ನು ತೆರೆಯಿರಿ**
2. **ರುಚಿ ಪದಾರ್ಥದ ಪ್ಯಾಕೆಟ್ ತೆರೆಯಿರಿ**
3. **ಪೌಡರ್ ಅನ್ನು ನೀರಿನ ಬಾಟಲಿಗೆ ಸ್ವಲ್ಪ ಹಾಕಿರಿ, ಮುಚ್ಚಳ ಹಾಕಿರಿ ಮತ್ತು ಬಾಟಲಿ ಅಲ್ಲಾಡಿಸಿರಿ**
4. **ಬಾಟಲ್ ಮಧ್ಯದಲ್ಲಿ ಪೇಪರ್ ಸ್ಟ್ರಿಪ್ ಅಂಟಿಸಿರಿ**
5. **ಆಯ್ಕೆ: ಪಾನೀಯದೊಂದಿಗೆ ತಿನ್ನಲು ಮಗುವಿಗೆ ತಿಂಡಿಯನ್ನು ಕೊಡಿರಿ**

**ಸಂತೋಷಕರವಾದ ತಿಂಡಿಯನ್ನು ಆಸ್ವಾದಿಸಿರಿ!!**

## ಡ್ರೈವಿಂಗ್ ಕ್ಲಾಸ್

**"ಡ್ರೈವಿಂಗ್ ಕ್ಲಾಸ್" ಗೆ ಸ್ವಾಗತ, ಇಲ್ಲಿ ನಾವು ವಿದ್ಯಾರ್ಥಿಗಳ ಪುಸ್ತಕದನುಸಾರ ಕಾರ್ಯಗಳನ್ನು ಮಾಡೋಣ. ದಿನದ ವಾಕ್ಯದೊಂದಿಗೆ, ದಿನದ ಪಾಠವನ್ನು ಒಟ್ಟಾಗಿ ಹೇಳುವ ಮೂಲಕ ತರಗತಿಯನ್ನು ಪ್ರಾರಂಭಿಸೋಣವೇ? ಪ್ರಾರಂಭಿಸೋಣ!!!**



ನೀವು ದಾನಿಯೇಲನೆಂದು ಊಹಿಸಿಕೊಳ್ಳಿರಿ. ಬರೆಯಿರಿ:

ಉತ್ತರಗಳು ಬದಲಾಗಬಹುದು ಮತ್ತು ಇನ್ನೂ ಸರಿಯಾಗಿರಬಹುದು. ಕೆಲವು ಉದಾಹರಣೆಗಳು ಇಲ್ಲಿವೆ.

ನೀವು ನೋಡಬಹುದಾದ 5 ಸಂಗತಿಗಳು:
ಗವಿಯ ಗೋಡೆಗಳು,
ಸಿಂಹಗಳು,
ಅರಸನು,
ಸಿಂಹದ ಹಲ್ಲುಗಳು,
ತಪ್ಪಿಸಿಕೊಳ್ಳಲು ಸಿಗದ ಮಾರ್ಗ

ನೀವು ಮುಟ್ಟಬಹುದಾದ 4 ಸಂಗತಿಗಳು:
ಸಿಂಹದ ಕೂದಲು,
ಕಲ್ಲಿನ ಗೋಡೆಗಳು,
ನನ್ನ ಮುಖದ ಮೇಲಿಂದ
ಒರೆಸುವ ಬೆವರು,
ನನ್ನ ಪಾದದ ಬೆರಳುಗಳು.

ನೀವು ಕೇಳಿಸಿಕೊಳ್ಳಬಹುದಾದ 3 ಸಂಗತಿಗಳು:
ಸಿಂಹದ ಗೊರಕೆ,
ಹೊರಗೆ ಬೀಸುವ ಗಾಳಿ,
ನಾನು ಗಾಬರಿಯಾಗಿರುವ ಬರುವ
ಉಸಿರು

ನೀವು ವಾಸನೆಯಿಂದ ತಿಳಿದುಕೊಳ್ಳಬಹುದಾದ 2 ಸಂಗತಿಗಳ
ನನ್ನ ಬೆವರು,
ಮತ್ತು ಸಿಂಹಗಳ ವಾಸನೆ!

ನೀವು ಆಲೋಚಿಸುತ್ತಿರುವ 1 ಸಂಗತಿಗಳು:
ನನ್ನ ದೇವರು ಅತ್ಯಂತ ಬಲಿಷ್ಠನು!

| | | | | | | | | |
|---|---|---|---|---|---|---|---|---|
| ದಾ | ದೇ | ವ | ಧ್ರೈ | ದೂ | ಮೂ | ರು | ತ | ಪ್ರಾ |
| ಫ್ | ನಿ | ಜ್ಞ | ರ್ಯ | ಅ | ವ | ಏ | ಗ | ರ್ಥ |
| ಮು | ಭ | ಯೇ | ತ | ದೇ | ವ | ದೂ | ತ | ನೆ |
| ಝು | ರ | ಜ್ | ಲ | ಭ | ರ | ವ | ಧ | ನು |
| ಪ್ರಾ | ವ | ಕ್ತಿ | ಙ | ನು | ತ | ರಾ | ಸೆ | ಅ |
| ಅ | ನೆ | ಯ | ತ | ನ್ | ಆ | ಪಾ | ಯ | ಪ |
| ಪ್ರಾ | ರ್ಥ | ದೂ | ಫ್ | ಬ | ಗ | ವಿ | ಭ | ಯ |
| ತ್ | ವ | ಕ್ತಿ | ಕಿ | ಟ | ಕಿ | ಅ | ಗ್ರ | ನು |
| ದೇ | ಮ | ಮ್ | ಯ | ಯ್ | ರ | ಅ | ಸಿಂ | ಹ |







## ಪ್ರಶ್ನೆಗಳು ಮತ್ತು ಉತ್ತರಗಳು

**1.** ದೇವರು ಹತ್ತಿರದಲ್ಲಿ ಇಲ್ಲ ಎಂದು ಅನ್ನಿಸಿದರೆ ಏನು ಮಾಡಬೇಕು?







ಆತನನ್ನು ನೋಡದಿರುವಾಗ ಅಥವಾ ಆತನ ಅನುಭವ ಆಗದೆ ಇರುವಾಗ ದೇವರು ಇದ್ದಾನೆ ಎಂದು ಭರವಸೆಯಿಂದಿರಲು ನಮಗೆ ನಂಬಿಕೆ ಬೇಕು. ನಮಗೆ ಹೇಗೆ ಅನ್ನಿಸಿದರೂ, ದೇವರು ಇದ್ದಾನೆ, ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮಗಾಗಿ ಚಿಂತಿಸುತ್ತಾನೆ.

2. ಅಹಿತಕರ ಘಟನೆಗಳು ಸಂಭವಿಸಲು ದೇವರು ಯಾಕೆ ಅನುಮತಿಸುತ್ತಾನೆ?

   ನಮ್ಮ ಆತ್ಮೀಕ ಬೆಳವಣಿಗೆಗಾಗಿ ಮತ್ತು ಇತರರು ನಂಬಲು ನಮ್ಮಿಂದ ಸಹಾಯವಾಗಲು (ನಮಗೆ ಎದುರಾಗುವ ಸಮಸ್ಯೆಗಳ ಮೂಲಕವಾಗಿಯೇ ನಾವು ಇತರರಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ). ಪಾಪವು ಲೋಕದೊಳಗೆ ಪ್ರವೇಶಿಸಿದಾಗ, ಅದರಿಂದ ಎಲ್ಲರಿಗೂ ತೊಂದರೆಯಾಯಿತು. ದೇವರು ಕ್ರೈಸ್ತರ ಸುತ್ತಲೂ ದೊಡ್ಡ ಗೋಡೆಯನ್ನು ನಿರ್ಮಿಸಲಿಲ್ಲ. ನಾವೆಲ್ಲರೂ ಈ ಲೋಕದಲ್ಲಿ ಜೀವಿಸುವವರಾಗಿದ್ದೇವೆ, ನಾವೆಲ್ಲರೂ ಒಂದೇ ಗ್ರಹದಲ್ಲಿದ್ದೇವೆ ಆದ್ದರಿಂದ ಇತರರಿಗೆ ಸಹಾಯ ಮಾಡಲು ಯಾವಾಗಲೂ ಸಿದ್ಧರಾಗಿರಬೇಕು.

3. ಯಾವ ವಿಷಯಗಳು ನಿಮ್ಮನ್ನು ಹೆದರಿಸುತ್ತವೆ?

   ವಿವಿಧ ಸಂಗತಿಗಳ ಬಗ್ಗೆ ಚರ್ಚಿಸಿರಿ, ಜೇಡದ ಹುಳ ಮತ್ತು ಬೇರೆ ಶಾಲೆಗೆ ಹೋಗುವದು ಇತ್ಯಾದಿ. ಅವರು ಮನಬಿಚ್ಚಿ ತಮ್ಮ ಹೆದರಿಕೆಗಳ ಬಗ್ಗೆ ಹಂಚಿಕೊಳ್ಳಲು ಅನುಕೂಲ ಮಾಡಿಕೊಡಿರಿ. ಪ್ರತಿಯೊಂದು ಹೆದರಿಕೆಯಿಂದ ಉತ್ತರವನ್ನು ಪಡೆಯಲು ಪ್ರಯತ್ನಿಸಬೇಡಿರಿ, ಅವರ ಮಾತುಗಳನ್ನು ಕೇಳಿಸಿಕೊಳ್ಳಿರಿ ಅವರು ಹಂಚಿಕೊಳ್ಳಲಿ.

4. ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಿದ ನಂತರ ಅರಸನಾದ ದಾರ್ಯಾವೇಷನು ಏನು ಮಾಡಿದನು?

   ಉಪವಾಸ ಮಾಡಿದನು.

5. ದಾನಿಯೇಲನನ್ನು ಸಿಂಹದ ಗವಿಯೊಳಗಿಂದ ಹೊರಗೆ ತೆಗೆದ ನಂತರ ಯಾರನ್ನು ಅದರೊಳಗೆ ಹಾಕಿದರು?


ದಾನಿಯೇಲನ ಮೇಲೆ ತಪ್ಪು ಹೊರಿಸಿದವರನ್ನೇ ಅದರೊಳಗೆ ಹಾಕಿದರು.

## ರೆಡಿ, ಸೆಟ್, ಆಟಗಳು!

**ಬ್ಲಾಕ್ ಫ್ಲಾಗ್ (ವ್ಯಕ್ತಿಗತವಾಗಿ)**

**(ಲಂಡನ್ ಬ್ರಿಡ್ಜಸ್ ವಿವಿಧ ಭಾಗ)**

1. ಮಕ್ಕಳು ಸಾಧ್ಯವಾದಷ್ಟು ದೊಡ್ಡ ವೃತ್ತವನ್ನು ರಚಿಸಬೇಕು.
2. ಮುಂಭಾಗದಲ್ಲಿ ಮತ್ತು ಕೈಗಳನ್ನು ಹಿಡಿದುಕೊಳ್ಳುತ್ತಾ 2 ಮಕ್ಕಳು ತಮ್ಮ ಕೈಗಳನ್ನು ಮೇಲೆತ್ತಿ ಸೇತುವೆ ಅಥವಾ ಟನಲ್ ನಿರ್ಮಿಸಬೇಕು.
3. ಸಂಗೀತದ ಸ್ವರಕ್ಕೆ ಮಕ್ಕಳು ಗಡಿಯಾರದ ಹಾಗೆ ಟನಲ್ ಒಳಗೆ ಚಲಿಸಬೇಕು.
4. ಆಟವನ್ನು ನಡೆಸುವಾತನು “ಬ್ಲಾಕ್ ಫ್ಲಾಗ್” ಎಂದು ಕೂಗುವಾಗ ಸಂಗೀತವನ್ನು/ಹಾಡನ್ನು ನಿಲ್ಲಿಸಬೇಕು! ಟನಲ್ ನಿರ್ಮಿಸಿರುವ 2 ಮಕ್ಕಳು ತಮ್ಮ ಕೈಗಳನ್ನು ಕೆಳಗಿಳಿಸಿ, ಮಕ್ಕಳಲ್ಲಿ ಒಬ್ಬರನ್ನು ಹಿಡಿದುಕೊಳ್ಳಬೇಕು.
5. ಇಬ್ಬರು ಮಕ್ಕಳು ಹಿಡಿಯಲ್ಪಡುವಾಗ ಅವರು ಮೊದಲಿಬ್ಬರಂತೆಯೇ ಇನ್ನೊಂದು ಟನಲ್ ನಿರ್ಮಿಸಬೇಕು.
6. ವಿನ್ನರ್ ಸಿಗುವ ತನಕ ಟನಲ್ ನಿರ್ಮಿಸುತ್ತಿರಬೇಕು.



ಗಮನಿಸಿರಿ: ಹಾಡಿನ ಸಂಗೀತದಲ್ಲಿ ಏರಿಳಿತ ಮಾಡುವ ಮೂಲಕ ಆಟದ ಆಸಕ್ತಿಯನ್ನು ನೀವು ಹೆಚ್ಚಿಸಬಹುದು, ನೀವು ಚಲಿಸುವ ಮಾರ್ಗವನ್ನು ಬದಲಾಯಿಸಬಹುದು, ಒಂದು ಕಾಲಲ್ಲಿ ನಿಂತು ಜಿಗಿಯಬಹುದು, ಚಿಕ್ಕದಾಗಿ ಜಿಗಿಯಬಹುದು, ಹಿಂದಕ್ಕೆ ಚಲಿಸಬಹುದು, ಇತ್ಯಾದಿ.

**ಸ್ಪೇಘ್ ಜೋನ್ ತಂಡ (ತಂಡಗಳು)**

ಎಲ್ಲಾ ತಂಡಗಳು ಭಾಗವಹಿಸಬೇಕು. ಪ್ರತಿಯೊಂದು ತಂಡಗಳಿಗೆ ಬಲೂನ್ ಕೊಡಿರಿ. ಪ್ರತಿಯೊಂದು ತಂಡದಲ್ಲಿಯೂ ಆಟಗಾರರ ಸಂಖ್ಯೆ ಸಮಾನವಾಗಿರಬೇಕು.

ಪ್ರತಿಯೊಂದು ತಂಡದ ಆಟಗಾರರನ್ನು ಸಾಲಾಗಿ ನಿಲ್ಲಿಸಬೇಕು ಮತ್ತು ಪ್ರತಿಯೊಂದು ತಂಡದ ನಡುವೆ ಸ್ಥಳಾವಕಾಶ ಇರಬೇಕು.

ನಡೆಸುವವರು ಪ್ರಾರಂಭಿಸಿರಿ ಎಂದು ಹೇಳುವಾಗ, ಅವರು ಬಲೂನನ್ನು ಹಿಂದಿನಿಂದ ಮುಂದಕ್ಕೆ ಕೊಡಲು ಪ್ರಾರಂಭಿಸಬೇಕು. ಮೊದಲನೆಯವರು ತಮ್ಮ ತಲೆಯ ಮೇಲಿಂದ ಹಿಂದಕ್ಕೆ ಕೊಡುವರು, ನಂತರದವರು ಕಾಲುಗಳ ಕೆಳಗಿನಿಂದ ಕೊಡುವರು ಇದೇ ರೀತಿ ಒಬ್ಬರಾದ ನಂತರ ಒಬ್ಬರು ಕೊಡುತ್ತಾ ಸಾಲಿನ ಕಡೆಯಲ್ಲಿರುವವರಿಗೆ ತಲುಪಿಸಬೇಕು. ಕಡೆಯಲ್ಲಿರುವ ವ್ಯಕ್ತಿಯ ಕೈಗೆ ಬಲೂನ್ ಸೇರುವಾಗ, ಅವರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಹಿಂದಕ್ಕೆ ನಡೆಯುತ್ತಾ, ಸಾಲಿನ ಮುಂಭಾಗಕ್ಕೆ ಬರಲು ಪ್ರಯತ್ನಿಸಬೇಕು. ತಂಡದವರು ಮಾರ್ಗದರ್ಶನ ಕೊಡುವ ಮೂಲಕ ಸಹಾಯ ಮಾಡುವರು.

ಆ ವ್ಯಕ್ತಿಯು ಮುಂಭಾಗಕ್ಕೆ ಬರುವಾಗ, ಪುನಃ ವೃತ್ತವನ್ನು ಪ್ರಾರಂಭಿಸಿರಿ.

ಇಡೀ ಸಾಲಿನಲ್ಲಿ ಯಾವ ತಂಡ ಮೊದಲು ವೃತ್ತವನ್ನು ಪೂರೈಸುತ್ತದೆಯೋ ಅವರು ಗೆಲ್ಲುತ್ತಾರೆ.

## ಮುಕ್ತಾಯ

ನಮ್ಮ ರಜಾದಿನದ ಸತ್ಯವೇದ ಶಾಲೆಯಲ್ಲಿ ಮತ್ತೊಂದು ಸುಂದರವಾದ ದಿನವನ್ನು ಮುಗಿಸಿದ್ದೇವೆ! ದೇವರು ದಾನಿಯೇಲನನ್ನು ಸಿಂಹದ ಗವಿಯಿಂದ ಬಿಡಿಸಿದ್ದನ್ನು ಅತ್ಯಂತ ಸಂತೋಷವಾಗಿ ನಾವು ಕಲಿತುಕೊಂಡಿದ್ದೇವೆ! ಇದೇ ಪ್ರಕಾರ ನಮ್ಮ ಇಂಜಿನ್ ಗಳಲ್ಲಿ ಪೆಟ್ರೋಲ್ ಇಲ್ಲವೆಂದರೆ, ದೇವರ ಶಕ್ತಿ ಇಲ್ಲವೆಂದರೆ, ನಾವು ಎಲ್ಲಿಗೂ ಹೋಗಲು ಆಗುವದಿಲ್ಲ! ಆದರೆ ಕರ್ತನಾದ ಯೇಸು ಕ್ರಿಸ್ತನ ಶಕ್ತಿ ನಮ್ಮೊಳಗೆ ಇರುವಾಗ, ನಾವು ದೇವರಿಗಾಗಿ ಅನೇಕ ಕಾರ್ಯಗಳನ್ನು ಮಾಡಬಹುದು, ಓಟವನ್ನು ಸಾಧ್ಯವಾದಷ್ಟು ವೇಗವಾಗಿ ಓಡುತ್ತಾ ಗೆಲ್ಲಬಹುದು.







5

# ಅಲ್ಲಗಳೆಯಲಾಗದ ರಕ್ಷಣೆ

**ಸತ್ಯವೇದ ಕಥೆ: ಯೇಸು ಕ್ರಿಸ್ತನು ರಕ್ಷಿಸುತ್ತಾನೆ / ಮತ್ತಾಯ** 27:32 – 28:10



## ವಾಕ್ಯ

"ದೇವರ ಪುತ್ರನ ನಾಮದಲ್ಲಿ ವಿಶ್ವಾಸ ಇಟ್ಟಿರುವ ನೀವು ನಿತ್ಯಜೀವವನ್ನು ಪಡೆದವರು ಎಂಬುದನ್ನು ತಿಳಿಸಲೆಂದೇ ನಾನು ನಿಮಗೆ ಇದನ್ನೆಲ್ಲಾ ಬರೆದಿದ್ದೇನೆ." ೧ ಯೊವಾನ್ನನು 5:13

## ನಾಟಕ

ದ ಡ್ರೈವರ್

- ಮ್ಯಾಕ್ ರೇಸರ್ ಆಗಿದ್ದಾನೆ, ಈಗ ಅವನು ಅತ್ಯಂತ ಪ್ರಾಮುಖ್ಯವಾದ ರೇಸ್ ನ ಮಧ್ಯದಲ್ಲಿದ್ದಾನೆ. ರೇಸ್ ಮಾಹಿತಿಗಳ ಬಗ್ಗೆ ತಿಳಿಯಲು ಅವನು ತನ್ನ ಮುಖ್ಯ ಮೆಕಾನಿಕ್ ಸಂಗಡ ರೇಡಿಯೋ ಮೂಲಕ ಮಾತನಾಡುತ್ತಿದ್ದಾನೆ. ಮ್ಯಾಕ್ ಹೇಳುವದೇನೆಂದರೆ: "ಹೌದು, ನನಗೆ ಕಾಣಿಸುತ್ತಿದೆ . . . ನಾನು ಸ್ವಲ್ಪ ಹೊತ್ತಿಗಾದರೂ ನಿಧಾನವಾಗಿ ಚಲಿಸಲು ಪ್ರಯತ್ನಿಸುತ್ತೇನೆ," ಅವನು ತನ್ನ ಕನ್ನಡಿಯಲ್ಲಿ ನೋಡುತ್ತಾ, ಸ್ಪೀಡ್ ಬದಲಾಯಿಸುತ್ತಾನೆ ಮತ್ತು ಆಕ್ಸಲೇಟರ್ ಕಡಿಮೆ ಮಾಡುತ್ತಾನೆ.
- ಅದೇ ಸಮಯದಲ್ಲಿ, ಈಗಾಗಲೇ ನಮಗೆ ಗೊತ್ತಿರುವ ಮತ್ತೊಬ್ಬ ಮೆಕಾನಿಕ್ ಮ್ಯಾಕ್ ನ ಮೆಕಾನಿಕ್ ಹತ್ತಿರ ಬರತ್ತಾ, ಮಕ್ಕಳು ನೋಡಲು ಅನುಕೂಲವಾಗುವ ಹಾಗೆ ತನ್ನ ತಲೆಯನ್ನು ಹಲವಾರು ಸಲ ಮೇಲೆತ್ತುತ್ತಾನೆ, ಆದರೆ ಮ್ಯಾಕ್ ನ ಮೆಕಾನಿಕ್ ಅವನನ್ನು ನೋಡದಂತೆ ಎಚ್ಚರವಹಿಸುತ್ತಾನೆ. ಪರಿಸ್ಥಿತಿಯನ್ನು ಗಮನಿಸುವ ಮ್ಯಾಕ್ ನ ಮೆಕಾನಿಕ್, ಈಗ ಏನು ಮಾಡಬೇಕೆಂದು ಮುಖ್ಯ ಮೆಕಾನಿಕ್ ಅನ್ನು ವಿಚಾರಿಸುತ್ತಾನೆ.
- ಬಚ್ಚಿಟ್ಟುಕೊಳ್ಳುತ್ತಿರುವ ಮೆಕಾನಿಕ್ ಮತ್ತೊಂದು ರೇಡಿಯೋ ತೆಗೆದುಕೊಳ್ಳುತ್ತಾನೆ ಮತ್ತು ಮಾತುಕತೆಯ ನಡುವೆ ಅಡಚಣೆಯನ್ನುಂಟು ಮಾಡುತ್ತಾ, ಅವನು ನೋಡುತ್ತಿರುವಾಗಲೇ ಮ್ಯಾಕ್ ಜೊತೆ ಜೋರಾಗಿ ಮಾತನಾಡುತ್ತಾನೆ. ಮ್ಯಾಕ್ಸ್ ಗೆ ಭಯವಾಗುತ್ತದೆ ಮತ್ತು ಬೇರೊಬ್ಬನು ರೇಡಿಯೋದಲ್ಲಿರುವದನ್ನು ಹೇಳಲು ತನ್ನ ಮೆಕಾನಿಕ್ ಅನ್ನು ಸಂಪರ್ಕಿಸಲು ಬಯಸುತ್ತಾನೆ.
- ಮ್ಯಾಕ್ಸ್ ಗೆ ಸೂಚನೆಗಳನ್ನು ಕೊಡಲು ಮೆಕಾನಿಕ್ ಪ್ರಾರಂಭಿಸತ್ತಾನೆ, ಅವನು ತನ್ನ ಬಾಸ್ ಮಾತುಗಳನ್ನು ಕೇಳಿಸಿಕೊಳ್ಳಲು ಪ್ರಾರಂಭಸತ್ತಾನೆ ಆದರೆ ಸರಿಯಾಗಿ ಏನೂ ಅರ್ಥವಾಗುವದಿಲ್ಲ ಯಾಕಂದರೆ ಅವನು ಒಂದೇ ಸಮಯದಲ್ಲಿ ಇಬ್ಬರು ವ್ಯಕ್ತಿಗಳ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಾನೆ.
- ಮತ್ತೊಮ್ಮೆ ಮೆಕಾನಿಕ್ ರೇಸ್ ನ ಮಾಹಿತಿಗಳು ಮತ್ತು ಮೋಟರ್ ಬೈಕ್ ನಿರ್ವಹಿಸುವದ ಹೇಗ ಎಂದು ತನಗೆ ಗೊತ್ತಿರುವ ಹಾಗೆ ಮಾತನಾಡುತ್ತಿರುತ್ತಾನೆ ಆದರೆ ರೇಸರ್ ಆಗಿ ತನ್ನ ಅನುಭವವನ್ನು ಮತ್ತು ತನ್ನ ಮುಖ್ಯ ಮೆಕಾನಿಕ್ ಅನುಭವಗಳನ್ನು ಹೇಳಿಕೊಳ್ಳಲು

**ಗಮನ ಸೆಳೆಯುವದು**

**"ನಿಮ್ಮನ್ನು ಯಾರು ರಕ್ಷಿಸುತ್ತಾರೆ?"**
**ಮಕ್ಕಳು: ಚಪ್ಪಾಳೆ, ಚಪ್ಪಾಳೆ-ಚಪ್ಪಾಳೆ, ಚಪ್ಪಾಳೆ**
**"ಯೇಸು ಕ್ರಿಸ್ತನು!" (ಎಡಗಡೆ ಮತ್ತು ಬಲಗಡೆಯನ್ನು ಸೂಚಿಸಿರಿ)**







ಮ್ಯಾಕ್ಸ್ ಮುಂದಾಗುತ್ತಾನೆ. ಆಗ ಮತ್ತೊಬ್ಬ ಮೆಕಾನಿಕ್ ನನಗೂ ಇದೆಲ್ಲವೂ ಗೊತ್ತು ನಾನು ಟಿವಿಯಲ್ಲಿ ಅನೇಕ ರೇಸ್ ಗಳನ್ನು ನೋಡಿದ್ದೇವೆ ಮತ್ತು ಮ್ಯಾಕ್ಸ್ ನ ಬಾಸ್ ರೀತಿಯಲ್ಲಿ ತಾನೂ ಒಬ್ಬ ಮೆಕಾನಿಕ್ ಎಂದು ಹೇಳುತ್ತಾನೆ.

- ನಾಟಕದ ಈ ಭಾಗದಲ್ಲಿ, ಮತ್ತೊಬ್ಬ ಮೆಕಾನಿಕ್ ಅತ್ಯಂತ ವೃತ್ತಿಪರನಾಗಿರಲು ಬಯಸುತ್ತಾನೆ ಆದರೆ ಮ್ಯಾಕ್ಸ್ ತನ್ನ ಸೂಚನೆಯನ್ನೇ ಅನುಸರಿಸಬೇಕು ಎಂಬ ಉದ್ದೇಶದಿಂದ ಮುಖ್ಯ ಮೆಕಾನಿಕ್ ಸ್ವರದಲ್ಲಿ ಮಾತನಾಡಲು ಪ್ರಾರಂಭಿಸುತ್ತಾನೆ.

ಮ್ಯಾಕ್ಸ್ ಕೂಗುತ್ತಾ ನನ್ನಿಂದ ಸಹಿಸಿಕೊಳ್ಳಲು ಆಗುತ್ತಿಲ್ಲ, ನಾನು ನನ್ನ ಮುಖ್ಯ ಮೆಕಾನಿಕ್ ಮಾತುಗಳನ್ನು ಮಾತ್ರವೇ ಅನುಸರಿಸುತ್ತೇನೆಯೇ ಹೊರತು ಯಾರ ಮಾತುಗಳನ್ನೂ ಅನುಸರಿಸುವದಿಲ್ಲ ಎಂಬದಾಗಿ ಹೇಳುತ್ತಾನೆ. ಇದರೊಂದಿಗೆ, ಮ್ಯಾಕ್ಸ್ ಅವನ ಸಮೀಪಕ್ಕೆ ಬರುತ್ತಾನೆ ಮತ್ತು ತನ್ನ ಕೈಯಲ್ಲಿರುವ ರೇಡಿಯೋ ಕೆಳಗಿಡುತ್ತಾನೆ. ಕೂಡಲೇ, ಮತ್ತೊಬ್ಬ ಮೆಕಾನಿಕ್ ಮ್ಯಾಕ್ಸ್ ನ ಆಟೋಗ್ರಾಫ್ ಕೇಳುತ್ತಾನೆ. ಮ್ಯಾಕ್ಸ್ ಆಗ ಅವನ ಮೇಲೆ ಕೂಗಾಡುತ್ತಾನೆ ಮತ್ತು ಬೇಗನೇ ರೇಸ್ ಗೆ ಹಿಂದಿರುಗುತ್ತಾನೆ

## ಸಂದೇಶ

ಮೋಟರ್ ಬೈಕ್ ರೇಸ್ ನಲ್ಲಿ, ತಂಡದವರಿಗೆ ಬಾಸ್ ಇರಬೇಕಾದದ್ದು ಬಹಳ ಪ್ರಾಮುಖ್ಯ. ಬೈಕ್ ಗಳಿಗೆ ಓನರ್ ಗಳಿರುತ್ತಾರೆ, ಪ್ರಾಯೋಜಕರು ಇರುತ್ತಾರೆ ಮತ್ತು ತಂಡಕ್ಕೆ ಒಬ್ಬ ಬಾಸ್ ಇರುತ್ತಾರೆ. ಆ ವ್ಯಕ್ತಿಯನ್ನು ಆತನ ಸಾಮರ್ಥ್ಯ ಮತ್ತು ಪ್ರಸಿದ್ಧಿಯ ಮೇರೆಗೆ ಎಚ್ಚರಿಕೆಯಿಂದ ಆಯ್ಕೆ ಮಾಡಲಾಗುತ್ತದೆ. ಮೋಟರ್ ಸೈಕ್ಲರ್ ಎಷ್ಟೇ ಪ್ರಸಿದ್ದನಾದರೂ ಬಾಸ್ ಇಲ್ಲದೆ ರೇಸ್ ಗೆಲ್ಲಲು ಆಗುವದಿಲ್ಲ ಯಾಕಂದರೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಲು ಮತ್ತು ಇಡೀ ಚಿತ್ರಣವನ್ನು ನೋಡಲು ಬಾಸ್ ಅವನಿಗೆ ಸಹಾಯ ಮಾಡುತ್ತಾನೆ. ಇದು ನಮ್ಮ ಕ್ರೈಸ್ತೀಯ ಜೀವಿತಕ್ಕೆ ಹೇಗೆ ಅನ್ವಯವಾಗುತ್ತದೆ?




ಇಂದು ನಾವು ರಕ್ಷಣೆಯ ಬಗ್ಗೆ ಕಲಿತುಕೊಳ್ಳೋಣ. ಯೇಸು ಕ್ರಿಸ್ತನು ಕೊಡುವ ರಕ್ಷಣೆಯ ವರವನ್ನು ಅಂಗೀಕರಿಸಿಕೊಳ್ಳುವದೆಂದರೆ ಏನು? ಇದರ ಅರ್ಥ ನಾವು ನಮ್ಮ ಜೀವಿತವನ್ನು ಆತನ ಕಡೆಗೆ ತಿರುಗಿಸುತ್ತೇವೆ. ಇದರ ಅರ್ಥ ನೀನು ನನ್ನ ಜೀವಿತದ ಯಜಮಾನನಾಗಿರು ಎಂದು ನಾವು ಆತನನ್ನು ಕೇಳಿಕೊಳ್ಳುತ್ತೇವೆ. ಇದರ ಅರ್ಥ ನೀನು ನಮ್ಮ ತಂಡದ ನಾಯಕನಾಗಿರು ಎಂದು ಯೇಸು ಕ್ರಿಸ್ತನನ್ನು ಕೇಳಿಕೊಳ್ಳುವದಾಗಿದೆ. ನಮ್ಮ ಜೀವಿತದ ಜವಾಬ್ದಾರಿಕೆ ನಿನ್ನದಾಗಿರಲಿ, ಆಗ ನಾವು ಉತ್ತಮ ಭವಿಷ್ಯವನ್ನು ಹೊಂದಲು ಸಾಧ್ಯವಾಗುತ್ತದೆ ಎಂದು ಹೇಳುವದಾಗಿದೆ.

ದೇವರು ನಮ್ಮನ್ನು ಉಂಟುಮಾಡಿ ಈ ಲೋಕದಲ್ಲಿ ಇಟ್ಟಿದ್ದಾನೆ, ಆದರೆ ನಮ್ಮ ಸುತ್ತಮುತ್ತಲು ಪಾಪದ ಕಾರ್ಯಗಳು ತುಂಬಿಕೊಂಡಿವೆ. ನಮಗೆ ಪಾಪಮಾಡಲು ಮನಸ್ಸಿಲ್ಲವಾದರೂ, ಬಹುತೇಕ ಜನರು ಪ್ರತಿದಿನ ಪಾಪ ಮಾಡುತ್ತೇವೆ, ಅವುಗಳಲ್ಲಿ ಸಣ್ಣ ಪಾಪಗಳು, ದೊಡ್ಡ ಪಾಪಗಳೂ ಸೇರಿವೆ. ಪಾಪವು ಕೊಡುವ ಸಂಬಳ ಮರಣ ಎಂದು ಸತ್ಯವೇದವು ಸ್ಪಷ್ಟವಾಗಿ ಹೇಳುತ್ತದೆ (ರೋಮಾ 6:23)! ಹೀಗಿರುವಾಗ, ನಮ್ಮ ಪರಸ್ಥಿತಿ ಏನಾಗುತ್ತದೆ?


ನೀವು ಕೆಟ್ಟ ಕಾರ್ಯಗಳನ್ನು ಮಾಡುವಾಗ, ಅದೇ ಕ್ಷಣದಲ್ಲಿ ನೀವು ಸಾಯುವಿರಿ ಎಂಬದು ಇದರ ಅರ್ಥವಲ್ಲ! ಇದರ ಅರ್ಥ ನಮಗೆ ಸಾಯುವ ಪರಿಸ್ಥಿತಿ ಎದುರಾಗುವಾಗ, ನಾವು ಮಾಡಿರುವ ಕೆಟ್ಟ ಕಾರ್ಯಗಳ ವಿಷಯದಲ್ಲಿ ನಮಗೆ ತೀರ್ಪಾಗುವದು ಮತ್ತು ಸೈತಾನನೊಂದಿಗೆ ಶಿಕ್ಷೆ ಅನುಭವಿಸಲು ನಮ್ಮನ್ನು ಕಳುಹಿಸಲಾಗುವದು. ಇದು ಭಯಹುಟ್ಟಿಸಬಹುದು ಆದರೆ ನಾವಂದುಕೊಳ್ಳುವದಕ್ಕಿಂತಲೂ ಇದು ಗಂಭೀರವಾದ ಸಂಗತಿಯಾಗಿದೆ. ಆದರೂ ದೇವರು ತನ್ನ ಕರುಣೆಯಿಂದ, ಒಂದು ಯೋಜನೆ ಮಾಡಿ ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿದನು. ಆತನು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಯಜ್ಞವನ್ನಾಗಿ ಅರ್ಪಿಸಿದನು. ನಮಗೆ ಬದಲಾಗಿ ಆತನು ತನ್ನ ಪ್ರಾಣವನ್ನು ಕೊಟ್ಟನು. ಇಂದು ನಾವು ಈ ಅದ್ಭುತವಾದ ಕಥೆಯನ್ನು ತಿಳಿದುಕೊಳ್ಳೋಣ!

ಆದರೆ ನಾವೇನು ಮಾಡಬೇಕು? ನಾವು ನಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕು ಮತ್ತು ಯೇಸು ಕ್ರಿಸ್ತನೇ ಹೇಳಿದಂತೆ ಆತನು ದೇವಕುಮಾರನು ಎಂಬದನ್ನು ನಂಬಬೇಕು. ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ನಂಬುವಾಗ ಆತನು ಕೊಡುವ ವರವನ್ನು ಅಂದರೆ ರಕ್ಷಣೆಯನ್ನು ಪಡೆದುಕೊಳ್ಳುತ್ತೇವೆ! ಇದರ ಅರ್ಥ ನಾವು "ನರಕದಲ್ಲಿ ದೊರೆಯುವ ನಿತ್ಯವಾದ ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದೇವೆ ಮತ್ತು ನಿತ್ಯವಾಗಿ ಯೇಸು ಕ್ರಿಸ್ತನೊಂದಿಗೆ ಪರಲೋಕದಲ್ಲಿ ಸಂತೋಷಿಸುತ್ತೇವೆ ಎಂಬದಾಗಿದೆ. ಇದು ಅತ್ಯಂತ ವಿಶಿಷ್ಟವಾದ ಸುದ್ದಿಯಾಗಿದೆ! ನೀವು ಏನನ್ನಾದರೂ ಕೊಟ್ಟು ಅದನ್ನು ಪುನಃ ಪಡೆದುಕೊಂಡಿದ್ದೀರೋ? ಇದನ್ನು ನಾವು ದೇವರ ವಿಷಯದಲ್ಲಿ ಯಾವಾಗಲೂ ಮಾಡುವವರಾಗಿದ್ದೇವೆ. "ದೇವರೇ ನೀನು ಏನೇ ಹೇಳಿದರೂ ನಾವು ಅದನ್ನು ಮಾಡುತ್ತೇವೆ" ಎಂದು ನಾವು ಹೇಳುತ್ತೇವೆ, ನಂತರ ಶಾಲೆಗೆ ಹೋಗುತ್ತೇವೆ ಮತ್ತು ಆತನು ಹೇಳುವದನ್ನು ಬಿಟ್ಟು ನಮಗೆ ಬೇಕಾದವುಗಳನ್ನೇ ಮಾಡುತ್ತೇವೆ. ಯೇಸು ಕ್ರಿಸ್ತನಿಗೆ ನೀನೇ ನಮ್ಮ ಜೀವಿತದ ನಾಯಕನಾಗಿರು ಎಂದು ನಾವು ಹೇಳುವಾಗ, ನಮ್ಮನ್ನೇ ನಾವು ಆತನ ಕರಗಳಿಗೆ ಒಪ್ಪಿಸಬೇಕು! ಹೀಗೆ ಮಾಡಿದರೆ ನಮ್ಮ ಜೀವಿತಗಳು ಉತ್ತಮವಾಗಿರುತ್ತವೆ, ನಾಶನಕ್ಕೆ ಒಳಗಾಗದಿರುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ, ಜೊತೆಗೆ ಓಟವನ್ನೂ ಗೆಲ್ಲುತ್ತೇವೆ! ಯೇಸು ಕ್ರಿಸ್ತನೇ ತಂಡದ ನಾಯಕನಾಗಿರಲು ಅನುಮತಿಸೋಣ!

## ಐಸ್ ಬ್ರೇಕರ್ ಆಟ

ವಂದನೆಗಳು ಮತ್ತು ಪ್ರಶ್ನೆಗಳ ವೃತ್ತ

ಹುಡುಗರು, ಹುಡುಗಿಯರು, ವಿದ್ಯಾರ್ಥಿಗಳು




ಎರಡು ವೃತ್ತಗಳನ್ನು ಮಾಡಿರಿ, ಒಂದರೊಳಗೆ ಇನ್ನೊಂದು, ಅದರೊಳಗೆ ವಿದ್ಯಾರ್ಥಿಗಳು ಸಮನಾದ ಸಂಖ್ಯೆಯುಳ್ಳವರಾಗಿರಬೇಕು (ವಿದ್ಯಾರ್ಥಿಗಳ ವಯಸ್ಸು ಅಥವಾ ಎತ್ತರ ಏನೇ ಆಗಿದ್ದರೂ ನೀವು ಮಕ್ಕಳನ್ನು ಬೆರೆಸಬಹುದು). ಒಂದುವೇಳೆ ನೀವು ಬಯಸುವದಾದರೆ, ಈ ಆಟವನ್ನು ವೃತ್ತವಿಲ್ಲದೆಯೇ ಆಡಿಸಬಹುದು.

ಎರಡು ವೃತ್ತಗಳು ಹಾಡು ಬರುವಾಗ ವಿರುದ್ಧ ದಿಕ್ಕಿನಲ್ಲಿ ಕಾರ್ಯ ಮಾಡುತ್ತವೆ. ಹಾಡು ನಿಲ್ಲುವಾಗ, ಪ್ರತಿಯೊಬ್ಬರೂ ತಮ್ಮ ಸಂಗಡಿಗರೊಂದಿಗೆ ಮುಂದೆ ನಿಲ್ಲಬೇಕು, ಅವರು "ಹಲೋ" ಎಂದು ಹೇಳಬೇಕು, ತಮ್ಮ ಹೆಸರು ಹೇಳಬೇಖು ಮತ್ತು ಕೆಳಗೆ ಕೊಡಲಾಗಿರವ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಬೇಕು.

- ನಿಮಗೆ ಇಷ್ಟವಾದ ತಿಂಡಿ ಯಾವುದು?
- 2 ನೇ ಪಾಠದ ಸತ್ಯವೇದ ವಾಕ್ಯವನ್ನು ಹೇಳಿರಿ?
- ವಿಬಿಎಸ್ ಕಾರ್ಯಕ್ರಮದಲ್ಲಿ ನಿಮಗಿಷ್ಟವಾದ ಸತ್ಯವೇದದ ವ್ಯಕ್ತಿ ಯಾರು?
- ವಿಬಿಎಸ್ ಕಾರ್ಯಕ್ರಮದಲ್ಲಿ ನಿಮಿಗಿಷ್ಟವಾದ ಚಟುವಟಿಕೆ ಯಾವುದು?
- ಈ ವಿಬಿಎಸ್ ಕಾರ್ಯಕ್ರಮದಲ್ಲಿ ನಿಮಗೆ ಹೊಸಬರ ಪರಿಚಯವಾಗಿಯೇ? ಅವರ ಹೆಸರು ಹೇಳಿರಿ.

ಇದೇ ವಿಧಾನವನ್ನು ಮತ್ತೆ ಮಾಡಿರಿ, ಹಾಡು ಪ್ರಾರಂಭಿಸಿರಿ ಮತ್ತು ಮಧ್ಯದಲ್ಲಿ ನಿಲ್ಲಿಸಿರಿ ಹಾಗೆ ಇಬ್ಬರು ಹೊಸ ಜೋಡಿಗಳಿಗೆ ಪ್ರಶ್ನೆಗಳನ್ನು ಕೇಳಿರಿ

## ಸತ್ಯವೇದ ಪಾಠ

ಯೇಸು ಕ್ರಿಸ್ತನು ನಮ್ಮನ್ನು ರಕ್ಷಿಸುತ್ತಾನೆ



1. ಯೇಸು ಕ್ರಿಸ್ತನ ಸ್ನೇಹಿತರು ಹೆದರಿಕೊಂಡಿದ್ದರು ಮತ್ತು ದುಃಖದಲ್ಲಿದ್ದರು. ಹಿಂದಿನ ರಾತ್ರಿ, ಜನರ ಗುಂಪು ಯೇಸು ಕ್ರಿಸ್ತನನ್ನು ಬಂಧಿಸಿದ್ದರು ಮತ್ತು ಆತನನ್ನು ಕರೆದುಕೊಂಡು ಹೋಗಿದ್ದರು. ಯೇಸು ಕ್ರಿಸ್ತನಿಗೆ ಮರಣ ದಂಡನೆ ವಿಧಿಸಿದರು – ಆತನು ಯಾವ ತಪ್ಪು ಮಾಡದಿದ್ದರೂ ಆತನಿಗೆ ಶಿಕ್ಷೆ ಕೊಡಲಾಯಿತು.








ಯೇಸು ಕ್ರಿಸ್ತನು ಪದ ಬರುವಾಗ: ನಿಮ್ಮ ಎಡಗೈ ಮಧ್ಯಬೆಳಕಿನಿಂದ ಹಾಗೂ ಬಲಗೈ ಮಧ್ಯ ಬೆರಳಿನಿಂದ ಹಸ್ತವನ್ನು ಮುಟ್ಟಿರಿ.

2. ರೋಮನ್ ಸಿಪಾಯಿಗಳು ಯೇಸು ಕ್ರಿಸ್ತನ ಮೇಲೆ ಶಿಲುಬೆಯನ್ನು ಹೊರಿಸಿದರು, ಅಲ್ಲದೆ ಅವರು ಆತನಿಗೆ ಬಹಳವಾಗಿ ಹೊಡೆದದ್ದರಿಂದ ಆತನಿಗೆ ನಡೆಯಲು ಸಹ ಕಷ್ಟವಾಗುತಿತ್ತು. ಅವರು ಶಿಲುಬೆಗೇರಿಸುವ ಸ್ಥಳಕ್ಕೆ ಬಂದಾಗ, ಸಿಪಾಯಿಗಳು ಯೇಸು ಕ್ರಿಸ್ತನಿಗೆ ಮೊಳೆಗಳನ್ನು ಹೊಡೆದು ಶಿಲುಬೆಗೆ ಹಾಕಿದರು. ಯೇಸು ಕ್ರಿಸ್ತನು ನಮ್ಮನ್ನು ಬಹಳವಾಗಿ ಪ್ರೀತಿಸುತ್ತಿದ್ದನು ಆದ್ದರಿಂದ, ಅವರನ್ನು ತಡೆಯುವ ಶಕ್ತಿ ತನಗಿದ್ದರೂ, ನಮ್ಮ ಪಾಪಗಳನ್ನು ಪರಿಹರಿಸುವ ಸಲುವಾಗಿ ಮರಣದ ತನಕ ಎಲ್ಲಾ ನೋವುಗಳನ್ನು ಮತ್ತು ಶಿಕ್ಷೆಗಳನ್ನು ಅನುಭವಿಸಿದನು. ಮಧ್ಯಾಹ್ನದ ಸಮಯದಲ್ಲಿಯೂ ಇದಾದ ನಂತರ ಕೂಡಲೇ ಕತ್ತಲು ಆವರಿಸಿಕೊಂಡಿತು, ಇದಾದ ನಂತರ ಭೂಕಂಪವಾಯಿತು ಮತ್ತು ಕೆಲವು ನಿಮಿಷಗಳ ನಂತರ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಬಿಟ್ಟನು. ಇದೊಂದು ಘೋರವಾದ ಕೃತ್ಯವಾಗಿತ್ತು!



*ಶಿಲುಬೆ ಪದ ಬರುವಾಗ: ನಿಮ್ಮ ಬಲಗೈಯನ್ನು ಬಾಗಿಸಿ ಕೆಳಗೆ ಇಳಿಸಿರ; ನಂತರ ಎಡಗಡೆಯಿಂದ ಬಲಗಡೆಗೆ ತನ್ನಿರಿ.*

3. ಯೇಸು ಕ್ರಿಸ್ತನು ಸತ್ತ ನಂತರ ಆತನನ್ನು ಸಮಾಧಿಯೊಳಗಿಟ್ಟರು. ಮೂರು ದಿನಗಳಾದ ನಂತರ, ಕೆಲವು ಸ್ತ್ರೀಯರು ಮುಂಜಾನೆ ಇನ್ನೂ ಕತ್ತಲಿರುವಾಗಲೇ ಸಮಾಧಿಯ ಬಳಿಗೆ ಹೋದರು, ಆದರೆ ಅವರು ಸಮಾಧಿಯ ಬಳಿಗೆ ಬಂದಾಗ, ಸಮಾಧಿಗೆ ಇಡಲಾಗಿದ್ದ ದೊಡ್ಡ ಕಲ್ಲನ್ನು ಯಾರೂ ಸರಿಸಿರುವದು ಅವರಿಗೆ ಗೊತ್ತಾಯಿತು. ಸ್ತ್ರೀಯರಿಗೆ ಬಹಳ ಆಶ್ಚರ್ಯವಾಯಿತು!



*ಸ್ತ್ರೀಯರು ಪದ ಬರುವಾಗ: ಬಲಗೈಯ ಹೆಬ್ಬೆರಳನ್ನು ನಿಮ್ಮ ಗಲ್ಲ ಮತ್ತು ಎದೆಗೆ ಮುಟ್ಟಿಸಿರಿ.*

4. ಬಂದಿದ್ದ ಸ್ತ್ರೀಯರಲ್ಲಿ ಒಬ್ಬಳಾಗಿದ್ದ ಮರಿಯಳು, ಖಾಲಿಯಾಗಿರುವ ಸಮಾಧಿಯನ್ನು ನೋಡಿ ಏನು ಯೋಚಿಸಬೇಕೆಂದು ತಿಳಿಯದವಳಾಗಿದ್ದಳು, ಆದ್ದರಿಂದ ಯೇಸು ಕ್ರಿಸ್ತನ ಸ್ನೇಹಿತರಾಗಿದ್ದ ಪೇತ್ರ ಹಾಗೂ ಯೋಹಾನನ ಬಳಿಗೆ ಓಡಿಹೋದಳು. ಆಕೆ ಅವರಿಗೆ ಹೇಳಿದಾಗ, ಅವರು ಸಮಾಧಿಯ ಬಳಿಗೆ ಓಡಿ ಬಂದರು. ಅವರು ಅದರೊಳಗೆ ನೋಡಿದಾಗ, ಯೇಸು ಕ್ರಿಸ್ತನು ಇರಲಿಲ್ಲ. ಆತನ ದೇಹ ಸಮಾಧಿಯೊಳಗೆ ಇರಲಿಲ್ಲ! ಪೇತ್ರ ಮತ್ತು ಯೋಹಾನನಿಗೆ ಏನಾಗಿದೆ ಎಂಬದು ಗೊತ್ತಾಗಲಿಲ್ಲ.



*ಸಮಾಧಿ ಪದ ಬರುವಾಗ: ಮುಷ್ಟಿಯನ್ನು ಬಿಗಿಹಿಡಿಯದೆ ಭುಜಗಳಿಂದ ಕೆಳಗಿಳಿಸಿ ಮಧ್ಯದಲ್ಲಿ ಜೋಡಿಸಿರಿ.*

5. ಅವರನ್ನು ಹಿಂಬಾಲಿಸುತ್ತಾ ಸಮಾಧಿಯ ಬಳಿಗೆ ಬಂದ ಮರಿಯಳು ಅಳುತ್ತಲೇ ಇದ್ದಳು. ಆಕೆ ಪುನಃ ಸಮಾಧಿಯೊಳಗೆ ಹೋದಾಗ, ಅದು ಖಾಲಿಯಾಗಿತ್ತು, ಆದರೆ ಅದರೊಳಗೆ ಇಬ್ಬರು ದೇವದೂತರಿದ್ದರು, ಅವರು ಆಕೆಗೆ, "ನೀನು ಯಾಕೆ ಅಳುತ್ತಿರುವೆ?" ಎಂದು ಕೇಳಿದರು. ಮರಿಯಳು ದೇವದೂತರಿಗೆ ಈ ರೀತಿಯಾಗಿ ಉತ್ತರಿಸಿದಳು: "ಯಾಕಂದರೆ ಯೇಸು ಕ್ರಿಸ್ತನ ದೇಹ ಇಲ್ಲಿ ಇಲ್ಲ." ಆಕೆ ದೇವದೂತರ ಪ್ರಸನ್ನತೆಯಿಂದ ಹೊರಗೆ ಬಂದಾಗ, ಒಬ್ಬ ವ್ಯಕ್ತಿಯನ್ನು ಕಂಡಳು, ಆದರೆ ಅತನು ತೋಟದವನಾಗಿರಬಹುದೆಂದು ನೆನೆಸಿದಳು.




*ದೇವದೂತನು ಪದ ಬರುವಾಗ: ಬೆರಳುಗಳನ್ನು ಭುಜದ ಮೇಲೆ ಇಡಿರಿ; ಅವುಗಳನ್ನು ಹಾಗೆಯೇ ಕೆಳಗಿಳಿಸಿರಿ.*







6. ನಂತರ “ಮರಿಯಳೇ” ಎಂದು ಯಾರೋ ಆಕೆಯನ್ನು ಕರೆದ ಶಬ್ದ ಆಕೆಗೆ ಕೇಳಿಸಿತು. ಆಕೆಗೆ ಕೂಡಲೇ ಅದು ಯೇಸು ಕ್ರಿಸ್ತನ ಸ್ವರ ಎಂದು ಗೊತ್ತಾಯಿತು. ಆತನು ಆಕೆಯ ಎದುರಿನಲ್ಲಿ ನಿಂತಿದ್ದನು, ಆತನು ಜೀವಂತನಾಗಿದ್ದನು. ಯೇಸು ಕ್ರಿಸ್ತನು ಆಕೆಗೆ ನೀನು ಹೋಗಿ ಎಲ್ಲರಿಗೂ



ಹೇಳು ಎಂದು ಹೇಳಿದನು ಆಕೆ ಸಂತೋಷದಂದ “ಯೇಸು ಕ್ರಿಸ್ತನು ಬದುಕಿ ಬಂದಿದ್ದಾನೆ, ನಾನು ಆತನನ್ನು ನೋಡಿದ್ದೇನೆ” ಎಂದು ಹೇಳುತ್ತಾ ಹೋದಳು, ಆಗ ಎಲ್ಲರಿಗೂ ಆಶ್ಚರ್ಯವಾಯಿತು. ನಂತರ, ಯೇಸು ಕ್ರಿಸ್ತನು ತನ್ನ ಸ್ನೇಹಿತರಿಗೆ ಕಾಣಿಸಕೊಂಡನು ಮತ್ತು ಅವರೆಲ್ಲರೂ ಯೇಸು ಕ್ರಿಸ್ತನು ಬದುಕಿ ಬಂದಿದ್ದಾನೆ ಎಂಬ ಸುವಾರ್ತೆಯನ್ನು ಎಲ್ಲರಿಗೂ ಸಾರಲು ಪ್ರಾರಂಭಿಸಿದರು.

*ಬದುಕಿ ಬಂದಿದ್ದಾನೆ ಎಂಬ ಪದ ಬರುವಾಗ: ಹೆಬ್ಬೆರಳು ಮತ್ತು ತೋರು ಬೆರಳನ್ನು ಮುಂದೆ ತೋರಿಸುತ್ತಾ, ಕೈಗಳನ್ನು ಮೇಲೆತ್ತಿರಿ.*

ಟೀಚರ್: ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳಲು ಮಕ್ಕಳನ್ನು ಆಹ್ವಾನಿಸುವ ಉತ್ತಮ ಅವಕಾಶ ಇಲ್ಲಿ ದೊರೆಯುತ್ತದೆ. ಕರ್ತನಾದ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನೆಂದು ನಂಬುತ್ತೀರೋ ಎಂದು ಅವರನ್ನು ಕೇಳಿರಿ. ಅವರು ಪ್ರತಿಕ್ರಿಯಿಸಲು ಅವಕಾಶವನ್ನು ಕೊಡುವ ಸಲುವಾಗಿ ಇದನ್ನು ಅನೇಕ ಸಲ ಮಾಡಿರಿ, ನಂತರ ನಿಮ್ಮೊಂದಿಗೆ ಹೇಳುವಂತೆ ಅವರನ್ನು ಆಹ್ವಾನಿಸಿರಿ: “ಕರ್ತನಾದ ಯೇಸುವೇ, ನೀನೇ ನನ್ನ ಸ್ವಂತ ರಕ್ಷಕನೆಂದು ನಾನು ನಂಬುತ್ತೇನೆ. ನಾನು ನಿನಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆಂದು ನಂಬುತ್ತೇನೆ. ನಾನು ನಿನಗೆ ವಿಧೇಯನಾಗಲು, ನಿನ್ನನ್ನು ಹಾಗೂ ಇತರರನ್ನು ಪ್ರೀತಿಸಲು ಬಯಸುತ್ತೇನೆ. ನನಗೆ ನಿನ್ನ ಶಕ್ತಿ ಬೇಕು. ನಾನು ನನ್ನ ಜೀವಿತವನ್ನು ನಿನಗೆ ಕೊಡಲು ಬಯಸುತ್ತೇನೆ. ದಯವಿಟ್ಟು ಬಂದು ನನ್ನ ಹೃದಯದಲ್ಲಿ ಜೀವಿಸು. ಧನ್ಯವಾದಗಳು, ಕರ್ತನೇ. ಆಮೆನ್.”







## ಪುನರಾವರ್ತನೆಯ ಠಾಣೆಗಳು

ಠಾಣೆಗಳ ಪುನರಾವರ್ತನೆಗಾಗಿ 3 ಗುಂಪುಗಳನ್ನು ಮಾಡಿರಿ



## ಸ್ನಾಕ್ ಸ್ಟೇಷನ್

ಪಾಪ್ ಕಾರ್ನ್ ಕೋನ್

ಸಾಮಗ್ರಿಗಳು:

- 1 ದೊಡ್ಡ ಚೀಲದಲ್ಲಿ ಪಾಪ್ ಕಾರ್ನ್
- 1 ಆರೆಂಜ್ ಬಣ್ಣದ ಹಾಳೆ
- ಗ್ಲೂ ಸ್ಟಿಕ್ ಅಥವಾ ಅದೆಸಿವ್ ಟೇಪ್

ಸೂಚನೆಗಳು

1. ಹಾಳೆಯನ್ನು ಕರ್ಣೀಯವಾಗಿ ಮಡಚಿರಿ ಮತ್ತು ಮೇಲ್ಭಾಗವನ್ನು ಕತ್ತರಿಸಿರಿ, ಚೌಕವಾಗಿ ಮಾಡಿರಿ.
2. ಮೇಲ್ಭಾಗದ ಎಡ ಮೂಲೆಯನ್ನು ಕೆಳಭಾಗದ ಬಲ ಮೂಲೆಗೆ ಜೋಡಿಸಿರಿ, ಚೌಕವನ್ನು ಕೋನ್ ಆಗಿ ಅಂಟಿಸಲು ಸುಮಾರು 2cm ಸ್ಥಳವಿರಲಿ.
3. ಕೋನ್ ತಯಾರಿಸಲು ಹೆಚ್ಚುವರಿ ಹಾಳೆಯನ್ನು ಕತ್ತರಿಸಿರಿ.
4. ಕೋನ್ ನೊಳಗೆ ಪಾಪ್ ಕಾರ್ನ್ ತುಂಬಿಸಿರಿ.

ಈಗ ಸಿದ್ಧವಾಗಿದೆ!! ರೇಸ್ ನೋಡುತ್ತಾ ಖುಷಿಪಡಿರಿ..

## ಗ್ಯಾರೇಜ್ ಕರಕುಶಲತೆ

ಮೆಡಲ್

ಪ್ರತಿಯೊಬ್ಬ ವಿದ್ಯಾರ್ಥಿಗೆ ಕೊಡಿರಿ:

ಮೆಡಲ್ ಪ್ರಿಂಟ್ ಆಗಿರುವ 1 ಹಾಳೆ.

ಮೆಡಲ್ ಕೆಳಭಾಗ ಪ್ರಿಂಟ್ ಆಗಿರುವ 1 ಹಾಳೆ.

ಪ್ರತಿಯೊಬ್ಬ ಮಗುವಿಗೆ ಸ್ವಲ್ಪ ಗ್ಲಿಟ್ಟರ್.



ಮೆಡಲ್:

- ಎರಡೂ ವೃತ್ತಗಳ ಹೊರಭಾಗವನ್ನು ಟ್ರಿಮ್ ಮಾಡಿರಿ ಮತ್ತು ಒಂದನ್ನು ಟೈರಿ ಗುರುತಿನಲ್ಲಿ ಕತ್ತರಿಸಿರಿ ನಂತರ ಅದಕ್ಕೆ ಬಣ್ಣ ಹಚ್ಚಿರಿ.
- ಆಯುತದ ಭಾಗವನ್ನು 90 ಡಿಗ್ರೀಗೆ ಮಡಚಿರಿ.
- ಸ್ವಲ್ಪ ಗ್ಲೂ ಮೂಲಕ ಟ್ಯಾಬ್ ಗಳನ್ನು ವೃತ್ತದ ಹಿಂಭಾಗಕ್ಕೆ ಆಯುತವಾಗಿ ಅಂಟಿಸಿರಿ, ಮತ್ತೊಂದು ವೃತ್ತಕ್ಕೂ ಹಾಗೆಯೇ ಮಾಡಿರಿ, ಆಗ ನಿಮಗೆ 3D ಮೆಡಲ್ ಸಿಗುತ್ತದೆ.
- ಗ್ಲಿಟರ್ ಮೂಲಕ ಅಲಂಕರಿಸಿರಿ.


  ಕೆಳಭಾಗ:

- ಪ್ರಿಂಟ್ ಆಗಿರುವ ಕೆಳಭಾಗದ ಹಾಳೆಯನ್ನು ತೆಗೆದುಕೊಳ್ಳಿರಿ, ಮಧ್ಯದಿಂದ ಆಯುತ ಭಾಗವನ್ನು ಕತ್ತರಿಸಿರಿ, ಡಾಟೆಡ್ ಭಾಗವನ್ನು ಮಡಚಿರಿ ಮತ್ತು ಬಣ್ಣ ಹಚ್ಚಿರಿ.

- ಮೂಲೆಯಲ್ಲಿ ಎರಡು ಕೋನಗಳಿರುವದನ್ನು ಗಮನಿಸಿರಿ. ಅವುಗಳನ್ನು ಒಳಗಿಂದ ಜೋಡಿಸಿರಿ ಮತ್ತು ಒಟ್ಟು ಸೇರಿಸಿ ಗ್ಲೂ ಹಾಕಿರಿ.
- ಅಂತಿಮವಾಗಿ, ನೀವು ಕತ್ತರಿಸುವ ಸ್ಥಳದಲ್ಲಿ ನಿಮ್ಮ ಮೆಡಲ್ ಇಡಿರಿ.

## ಡ್ರೈವಿಂಗ್ ಕ್ಲಾಸ್

"ಡ್ರೈವಿಂಗ್ ಕ್ಲಾಸ್" ಗೆ ಸ್ವಾಗತ, ಇಲ್ಲಿ ನಾವು ವಿದ್ಯಾರ್ಥಿಗಳ ಪುಸ್ತಕದನುಸಾರ ಕಾರ್ಯಗಳನ್ನು ಮಾಡೋಣ. ದಿನದ ವಾಕ್ಯದೊಂದಿಗೆ, ದಿನದ ಪಾಠವನ್ನು ಒಟ್ಟಾಗಿ ಹೇಳುವ ಮೂಲಕ ತರಗತಿಯನ್ನು ಪ್ರಾರಂಭಿಸೋಣವೇ? ಪ್ರಾರಂಭಿಸೋಣ!!!




| | | | | | | | | |
|---|---|---|---|---|---|---|---|---|
| ಕೆ | ಕೇ | ರ | ಲ | ಮ | ಪ್ರಾ | ಶಿ | ಲು | ಬಿ |
| ಭ್ಯ | ಟ್ | ಳಿ | ಔ | ಗ | ಭ್ಯ | ರ್ಥ | ರು | ಲ |
| ಜೀ | ವಿ | ಸಿ | ದ | [illegible] | ಝ್ | ವ | ನೆ | ರ |
| ಯೇ | ಸು | ಕ | ಸ್ತ | ನು | ದೇ | ನಿ | ಪಾ | ಪ |
| ಸು | ಪ್ | ಕ್ರಿ | ತ್ತ | ಸ್ | ಭ | ತ್ಯ | ಕ | ಲೋ |
| ಲ | ಸು | ಸ | ಹ್ | ಅ | ಶಿ | ತ್ರ | ಫ್ | ಕೆ |
| ಯೇ | ಪ | ರ | ಲೋ | ಕ | ಹ | ಲು | ಬಿ | ಕ |
| ಲೋ | ಖು | ಕ್ತ | ಮ | ಗ್ | ನು | ನಂ | ಬೆ | ಪ್ |
| ರ್ | ಯ | ಹ | ಅ | ಲ | ಭ್ಯ | ತೆ | ರ | ತ್ |
| ಶ್ | ಷ | ಛ್ಥ | ಕೇ | ಳಿ | ಧ | ನು | ಸ್ | ಶ |




ಇಂದಿನ ಕಥೆಯನ್ನು ಎಚ್ಚರಿಕೆಯಿಂದ ಕೇಳಿಸಿಕೊಂಡಿದ್ದೀರೋ? ಇಂದಿನ ಪಾಠದಿಂದ ನಿಮಗೆ ನೆನಪಿರುವ ಪದಗಳನ್ನು ಬರೆಯಲು ನಿಮಗೆ 1 ನಿಮಿಷ ಸಮಯವಿದೆ.

ಟೀಚರ್: ಯಾರ್ ಹೆಚ್ಚು ಪದಗಳನ್ನು ಬರೆಯುತ್ತಾರೋ ಅವರೇ ವಿನ್ನರ್. ಪರ್ಯಾಯವಾಗಿ, ಒಂದೇ ಪದವನ್ನು ಹೆಚ್ಚಾಗಿ ಬರೆದಿದ್ದರೆ ಅವುಗಳನ್ನು ತೆಗೆದುಹಾಕಲಾಗುವದು, ಆಗ ಯಾರು ಬರೆದಿರುವ ಪದಗಳು ಹೆಚ್ಚಾಗಿರುತ್ತವೆಯೋ ಅವರು ಗೆಲ್ಲುತ್ತಾರೆ.

ಯೇಸು ಕ್ರಿಸ್ತನು, ಶಿಲುಬೆಯ ಮರಣ, ಶಿಲುಬೆ, ರಕ್ಷಣೆ, ಪಾಪ, ಕಣ್ಣೀರು, ಉಸಿರು, ಮೊಳೆಗಳು, ಆರೋಪ . . .





## ಪ್ರಶ್ನೆಗಳು ಮತ್ತು ಉತ್ತರಗಳು

1. ನಿತ್ಯತ್ವ ಎಂದರೆ ಏನು? ನಾವು ನಿತ್ಯವಾಗಿ ಜೀವಿಸಲು ಹೇಗೆ ಸಾಧ್ಯ?

ನಿತ್ಯತ್ವದಲ್ಲಿ, ಸಮಯ ಇರುವದಿಲ್ಲ; ಮರಣದ ನಂತರ ಶಾಶ್ವತವಾಗಿ ಜೀವಿಸುವದಾಗಿರುತ್ತದೆ. ಸತ್ಯವೇದವು ಹೇಳುವದೇನೆಂದರೆ ನಾವು ನಿರಂತರವಾಗಿರುತ್ತೇವೆ, ನಾವು ಪರಲೋಕದಲ್ಲಿ ಅಥವಾ ನರಕದಲ್ಲಿ ನಿತ್ಯವಾಗಿ ಇರುತ್ತೇವೆ. ಇದರ ಅರ್ಥ ಕೆಲವರು ಹೇಳುವ ಹಾಗೆ ನಾವು ಭೂಲೋಕಕ್ಕೆ ಮತ್ತೊಬ್ಬ ವ್ಯಕ್ತಿ ಅಥವಾ ಜೀವಿಯಾಗಿ ಹಿಂದಿರುಗುವದಿಲ್ಲ ಬದಲಾಗಿ ನಾವು ಮೃತಪಟ್ಟ ಕೂಡಲೇ ಈ ಲೋಕವನು ಶಾಶ್ವತವಾಗಿ ಬಿಡುವವರಾಗಿರುತ್ತೇವೆ.

2. **ಎಲ್ಲರೂ ಯಾಕೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದಿಲ್ಲ?**

   ನಂಬುವ ಅಥವಾ ನಂಬದಿರುವ ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ದೇವರು ಮಾನವರಿಗೆ ಕೊಟ್ಟಿದ್ದಾನೆ, ಯಾಕಂದರೆ ನಾವು ಸ್ವತಂತ್ರ ಚಿತ್ತವುಳ್ಳವರಾಗಿರಬೇಕೇ ಹೊರತು ಯಾವುದೇ ಆಯ್ಕೆಗಳಿರದ ರೋಬೋಟ್ ಗಳ ಹಾಗೆ ಇರಬಾರದು ಎಂಬದು ಆತನ ಬಯಕೆಯಾಗಿದೆ. ನಂಬುವದೆಂದರೆ ಏನು ಎಂಬದನ್ನು ತಿಳಿಯುವಷ್ಟು ಅನೇಕ ಜನರು ಯೇಸು ಕ್ರಿಸ್ತನ ಬಗ್ಗೆ ಕೇಳಿಸಿಕೊಂಡಿಲ್ಲ. ಇನ್ನೂ ಕೆಲವರು ಅನೇಕ ವಿಷಯಗಳನ್ನು ಕೇಳಿಸಿಕೊಂಡಿದ್ದಾರೆ ಆದರೆ ಯೇಸುವನ್ನು ನಂಬದಿರುವ ಹಾಗೂ ಹಿಂಬಾಸದಿರುವ ಆಯ್ಕೆಯನ್ನು ಮಾಡಿಕೊಂಡಿದ್ದಾರೆ. ಅನೇಕ ಜನರು ಯೇಸು ಕ್ರಿಸ್ತನನ್ನು ನಂಬದಿರುವ ಆಯ್ಕೆಯನ್ನೇ ಮಾಡಿಕೊಳ್ಳುತ್ತಾರೆ ಯಾಕಂದರೆ ಅವರಿಗೆ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಲು ಮನಸ್ಸಿರುವದಿಲ್ಲ.

3. **ದೇವರು ನಮ್ಮ ಸಂಗಡ ಹೇಗೆ ಮಾತನಾಡುತ್ತಾನೆ? ಆತನು ನಿಮಗೆ ಹೇಳಿರುವ ಕಡೆಯ ಸಂಗತಿ ಏನು?**

   ದೇವರು ನಮ್ಮೊಂದಿಗೆ ತನ್ನ ವಾಕ್ಯವಾಗಿರುವ ಸತ್ಯವೇದದ ಮೂಲಕ ಮಾತನಾಡುತ್ತಾನೆ. ವಾಕ್ಯಗಳು ಹಾಳೆಯಿಂದ "ಜಿಗಿಯುತ್ತಾ" ನಿರ್ದಿಷ್ಟವಾದ ಸಮಯಗಕ್ಕೆ ತಕ್ಕಂತೆ ಅನ್ವಯಿಸಿಕೊಳ್ಳುವ ಹಾಗೆ ಅನ್ನಿಸುತ್ತವೆ. ದೇವರು ಜನರನ್ನು ಸೂಚನೆಗಾರರಾಗಿ, ಸಭಾಪಾಲಕರಾಗಿ ಮತ್ತು ಬೋಧಕರಾಗಿ ನಿಮ್ಮ ಸಂಗಡ ಮಾತನಾಡಲು ಉಪಯೋಗಿಸಿಕೊಳ್ಳುತ್ತಾನೆ. ನೀವು ಯಾರಿಗೋ ಸಹಾಯ ಮಾಡಬೇಕು ಅಥವಾ ಯಾವುದೋ ಪರಿಸ್ಥಿತಿ, ವ್ಯಕ್ತಿ ಅಥವಾ ಬೀದಿಯನ್ನು ತಪ್ಪಿಸಬೇಕೆಂದು ಬಯಸುವಾಗ ದೇವರು ನಿಮ್ಮ ಸಂಗಡ ನೇರವಾಗಿಯೂ ಮಾತನಾಡುತ್ತಾನೆ.

4. **ಯೇಸು ಕ್ರಿಸ್ತನು ಪ್ರಾಣ ಬಿಡುವ ಮೊದಲು ಭೂಮಿಯ ಮೇಲೆ ಏನಾಯಿತು?**

   ಮಧ್ಯಾಹ್ನದ ಸಮಯದಲ್ಲಿಯೇ ಕತ್ತಲಾಯಿತು ಮತ್ತು ಭೂಕಂಪ ಉಂಟಾಯಿತು.

5. **ಯೇಸು ಕ್ರಿಸ್ತನ ಸಮಾಧಿಯೊಳಗೆ ಮೊದಲು ಹೋಗಿ, ಆತನು ಅಲ್ಲಿ ಇಲ್ಲ ಎಂದು ತಿಳಿದುಕೊಂಡ ಅಪೊಸ್ತಲರು ಯಾರು?**

   ಪೇತ್ರ ಮತ್ತು ಯೋಹಾನ

## ರೆಡಿ, ಸೆಟ್, ಆಟಗಳು!

### ದ ಬರ್ನ್ಡ್ (ತಂಡಗಳು)

15x15 ಮೀಟರ್ ಚೌಕಾಕಾರವನ್ನು ಗುರುತಿಸಿರಿ. ಮಕ್ಕಳನ್ನು 4 ತಂಡಗಳಾಗಿ ವಿಂಗಡಿಸಿರಿ, ಪ್ರತಿಯೊಂದು ತಂಡದಲ್ಲಿಯೂ ಮಕ್ಕಳ ಸಂಖ್ಯೆ ಸಮಾನವಾಗಿರಬೇಕು. ಪ್ರತಿಯೊಂದು ತಂಡವು ಚೌಕಾಕಾರದ ಕಡೆಯಲ್ಲಿ ನಿಂತುಕೊಳ್ಳಬೇಕು. ಪ್ರತಿಯೊಂದು ಮಗುವಿಗೆ ಒಂದು ಸಂಖ್ಯೆಯನ್ನು ಕೊಡಿರಿ. ಉದಾಹರಣೆಗ, ಪ್ರತಿಯೊಂದು ತಂಡದಲ್ಲಿರುವ ಒಂದು ಆಟಗಾರನಿಗೆ ಸಂಖ್ಯೆ 1 ನಿಗದಿಪಡಿಸಿರಿ, ಪ್ರತಿಯೊಂದು ತಂಡದಲ್ಲಿರುವ ಇನ್ನೊಬ್ಬ ಆಟಗಾರನಿಗೆ ಸಂಖ್ಯೆ 2 ಇತ್ಯಾದಿ. ಚೌಕದ ಮಧ್ಯದಲಿ ಚೆಂಡನ್ನು ಇಡಿರಿ. ಚೆಂಡು ಮೃದುವಾಗಿರಬೇಕು ಮಕ್ಕಳಿಗೆ ಹೊಡೆದರೂ ನೋವಾಗಬಾರದು.

ಟೀಚರ್ ಯಾವುದೋ ಸಂಖ್ಯೆಯನ್ನು ಗಟ್ಟಿಯಾಗಿ ಕೂಗಬೇಕು ಮತ್ತು ಯಾವ ಮಕ್ಕಳಿಗೆ ಆ ಸಂಖ್ಯೆಯನ್ನು ಕೊಡಲಾಗಿರುತ್ತದೆಯೋ ಅವರು ಚೌಕದ ಮಧ್ಯ ಚೆಂಡಿನ ಹತ್ತಿರಕ್ಕೆ ಬರಬೇಕು. ಯಾವ ಮಗುವಿಗೆ ಮೊದಲು ಚೆಂಡು ಸಿಗುತ್ತದೆಯೋ ಮತ್ತು ಅದನ್ನು ತೆಗೆದುಕೊಳ್ಳುತ್ತದೆಯೋ ಆ ಮಗು ತನ್ನ ತಂಡಕ್ಕೆ ಒಂದು ಅಂಕವನ್ನು ಗೆಲ್ಲುತ್ತದೆ. ನಂತರ ಅವರು ಚೌಕದ ಅಂಚಿನಿಂದ ಇತರೆ ತಂಡದ ಮಕ್ಕಳಿಗೆ ಹೊಡೆಯಬೇಕು. ಒಂದುವೇಳೆ ಮಕ್ಕಳಿಗೆ ಹೊಡೆಯುವಲ್ಲಿ ಸಫಲವಾದರೆ ಅವರ ತಂಡಕ್ಕೆ ಮತ್ತೊಂದು ಅಂಕ ದೊರೆಯುತ್ತದೆ.







ಮೊದಲನೆಯ ಎಸೆತದ ನಂತರ, ಚೌಕದ ಮಧ್ಯದಲ್ಲಿರುವ ನಾಲ್ಕು ಮಕ್ಕಳು ಚೆಂಡನ್ನು ಹಿಡಿಯಲು ಪ್ರಯತ್ನಿಸಬೇಕು ಮತ್ತು ವಿರುದ್ಧ ತಂಡದ ಆಟಗಾರರ ಮೇಲೆ ಎಸೆಯಬೇಕು. ಈ ಚಟುವಟಿಕೆಗೆ 4-5 ಕ್ಷಣಗಳನ್ನು ಕೊಡಿರಿ.


ಸಮಯ ಮುಗಿದ ನಂತರ, ಮಕ್ಕಳು ಚೆಂಡನ್ನು ಚೌಕದ ಮಧ್ಯದಲ್ಲಿಯೇ ಇಡಬೇಕು ಮತ್ತು ತಮ್ಮ ತಂಡದವರೊಂದಿಗೆ ಸೇರಿಕೊಳ್ಳಬೇಕು.

ಮತ್ತೆ ಆಟ ಆಡಿಸಲು ಟೀಚರ್ ಇನ್ನೊಂದು ಸಂಖ್ಯೆಯನ್ನು ಕೂಗುತ್ತಾರೆ.

ಗೆಲ್ಲುವ ತಂಡ ಯಾರು ಎಂದು ಗುರುತಿಸಲು ಅಂಕಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಸರಿ/ತಪ್ಪು (ವ್ಯಕ್ತಿಗತ)

ನೆಲದ ಮೇಲೆ ಒಂದು ಗುರುತನ್ನು ಹಾಕಿರಿ. ಒಂದು ಕಡೆಯನ್ನು ಸರಿ ಎಂದು ಇನ್ನೊಂದು ಕಡೆಯನ್ನು ತಪ್ಪು ಎಂದು ಕರೆಯಿರಿ.




ವಿಬಿಎಸ್ ಕಾರ್ಯಕ್ರಮದ ಪಾಠಗಳಿಂದ ಸರಿ ಮತ್ತು ತಪ್ಪು ಹೇಳಿಕೆಗಳನ್ನು ಮೊದಲೇ ಏರ್ಪಡಿಸಿರಿ, ಇದರಲ್ಲಿ ಸತ್ಯವೇದ ಕಥೆಯ ವಿವಿಧ ಧ್ಯೇಯಗಳನ್ನು ಸೇರಿಸಿಕೊಳ್ಳಬಹುದು.

ಈ ಆಟದಲ್ಲಿ, ಪಾಠದ ವಿಷಯಗಳನ್ನು ಸೂಚಿಸಿರಿ.

ವಿದ್ಯಾರ್ಥಿಗಳಿಗೆ ಒಂದುವೇಳೆ ಹೇಳಿಕೆಯು ಸರಿ ಎಂಬದಾಗಿ ಅನ್ನಿಸಿದರೆ ಅವರು ಸರಿ ಕಡೆಗೆ ಹೋಗಬಹುದು ಅಥವಾ ಒಂದುವೇಳೆ ತಪ್ಪು ಎಂದು ಅನ್ನಿಸಿದರೆ ತಪ್ಪು ಕಡೆಗೆ ಹೋಗಬಹುದು.

ಯಾರು ತಪ್ಪು ಉತ್ತರ ಕೊಡುತ್ತಾರೋ ಅವರು ಆಟದಿಂದ ಹೊರಗೆ ಹೋಗಬೇಕು.

ಯಾರು ಸರಿಯಾದ ಉತ್ತರಗಳ ಕಡೆಗೆ ಇರುತ್ತಾರೆ ಅವರು ಗೆಲ್ಲುತ್ತಾರೆ

## ಮುಕ್ತಾಯ

ನಾವು ನಿಜವಾಗಿಯೂ ಅದ್ಭುತವಾದ ರೀತಿಯಲ್ಲಿ ರಜಾ ದಿನದ ಸತ್ಯವೇದ ಶಾಲೆಯನ್ನು ನಡೆಸಿದ್ದೇವೆ! ವಾರದಾದ್ಯಂತ ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಿಕೊಳ್ಳುವಾಗ ಇಂಜಿನ್ ಗೆ ಆಯಿಲ್ ಹಾಕುವದು ಹೇಗೆ, ದೇವರ ವಾಕ್ಯಗಳಿಗೆ ವಿಧೇಯರಾಗಲು ಒಳ್ಳೆಯ ಸೆಳೆತ ಇರುವ ಟೈರ್ ಗಳನ್ನು ಹಾಕಿಕೊಳ್ಳುವದು ಹೇಗೆ, ಇತರರ ಜೀವಿತದ ಮೇಲಿನ ಪ್ರೀತಿಯ ಆಸಕ್ತಿಗಾಗಿ ಗಾಡಿಯಲ್ಲಿ ಆಂಟಿ ಫ್ರೀಜ್ ಹಾಕುವದು ಹೇಗೆ ಮತ್ತು ಯಾವ ಕಡೆಗೆ ಬೇಕಾದರ ಹೋಗಲು ಪೆಟ್ರೋಲ್ ಹಾಗೆ ಯೇಸು ಕ್ರಿಸ್ತನ ಶಕ್ತಿಯು ಯಾವ ರೀತಿ ಬೇಕಾಗಿದೆ ಎಂಬದನ್ನು ತಿಳಿದುಕೊಂಡಿದ್ದೇವೆ. ಇಂದು ಅತ್ಯುತ್ತಮವಾದ ಸಂದೇಶವಾಗಿತ್ತು: ಯೇಸು ಕ್ರಿಸ್ತನೇ ನಮ್ಮ ಬಾಸ್ ಎಂದು ನಾವು ಕಲಿತುಕೊಂಡಿದ್ದೇವೆ! ಆತನು ನಮ್ಮ ಹೃದಯದೊಳಗೆ ಬರುವಂತೆ ಮತ್ತು ನಮ್ಮ ಜೀವಿತದ ಉಳಿದ ಸಮಯಕ್ಕೆ ಬೇಕಾಗುವ ಎಲ್ಲವುಗಳನ್ನು ಒದಗಿಸಲು ಮತ್ತು ರಕ್ಷಣೆಯ ವರವನ್ನು ಕೊಡಲು ಆತನನ್ನು ಆಹ್ವಾನಿಸಿಕೊಳ್ಳೋಣ, ಆಗ ಮಾತ್ರವೇ ನಿತ್ಯತ್ವದ ತನಕ ಪರಲೋಕದಲ್ಲಿ ನಾವು ಆತನೊಂದಿಗೆ ಇರಲು ಸಾಧ್ಯವಾಗುತ್ತದೆ! ನಮಗೆ ಓಡಲು ಓಟವಿದೆ; ಯೇಸು ಕ್ರಿಸ್ತನೊಂದಿಗೆ ಅತೀ ವೇಗವಾಗಿ ಹೋಗೋಣ!